ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೩ ನವೆಂಬರ್-೨೦೧೨ ಸಂಚಿಕೆ-೪



ಭಾರತ ಮತ್ತೆ ವಿದೇಶಿ ಕಂಪನಿಗಳ ಕಪಿಮುಷ್ಟಿಯಲ್ಲಿ!

ಜನಪದ ವಿಚಾರದಲ್ಲಿ

ಕೇಂದ್ರ ಸರ್ಕಾರ ವಿದೇಶಿ ಕಂಪನಿಗಳಿಂದ ಚಿಲ್ಲರೆ ವ್ಯಾಪಾರಕ್ಷೇತ್ರದಲ್ಲಿ ನೇರ ಬಂಡವಾಳ ಹೂಡಲು ಅನುಮತಿ ಕೊಡಲಿದೆ. ಒಂದು ಈಸ್ಟ್ ಇಂಡಿಯಾ ಕಂಪನಿ ದೇಶವನ್ನು ಗುಲಾಮಗಿರಿಗೆ ತಳ್ಳಿತು. ಬರಲಿರುವ ಅನೇಕ ವಿದೇಶಿ ಕಂಪನಿಗಳು ಭಾರತವನ್ನು ಗುಲಾಮಗಿರಿಗೆ ತಳ್ಳುತ್ತವೆ ಎಂಬ ಆತಂಕ ಈ ಲೇಖನದಲ್ಲಿ ವ್ಯಕ್ತವಾಗಿದೆ.

ಸ್ವಾತಂತ್ರ್ಯದ ಆರು ದಶಕಗಳ ನಂತರವೂ ಈಶಾನ್ಯ ರಾಜ್ಯಗಳು ಪರಕೀಯವಾಗಿಯೇ ಉಳಿದಿವೆ. ಅದಕ್ಕೆ ಕಾರಣ ಮತ್ತು ಅಲ್ಲಿಯ ಪರಿಸ್ಥಿತಿ ಕುರಿತಾದ ಸಮಗ್ರ ಚಿತ್ರಣ ಈ ಲೇಖನದಲ್ಲಿದೆ.

* * *

<u>ಚಂದಾ ನವೀಕರಿಸಿ ಸಹಕರಿಸಿ</u>

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವೆಂಬರ್ – ೨೦೧೨
ಸಂಪುಟ – ೧೩
ಸಂಚಿಕೆ – ೪

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

✆ 08236 299854
e-mail : janapada@yahoo.com
web: janapada.net

ಅಳಿಯಲಾರದ ನೆನಹು

ಅಳಿಯಲಾರದ ನೆನಹು ಜೀವಜೀವಾಳದಲಿ
ಬಲವಾಗಿ ಬೇರೂರಿ ನಿಂದು
ಗಳಿಗೆಗಳಿಗೆಗೆ
ಬಾಳುವೆಯ ದಾರಿಯನು ತಡೆದು
ಸೆಳೆದಪುದು ಭೂತದೆಡೆಗಿಂದು.

ಕಳೆದ ಬಾಳುವೆಯ ನಲ್ಗನಸಿದೋ ಜೀವನದ
ಹೊಳೆಯ ಮೊದಲಿಂ ತುದಿಯ ವರೆಗೂ
ಅಲೆಯಾಗಿ, ಸುಳಿಯಾಗಿ, ಸುಳಿವ ಮೆಲ್ಲೆಲರಾಗಿ
ಬಳಸಿಹುದು ಬಹುರೂಹುವಡೆದು.

ಭಾವವೀಣೆಯ ತಂತಿಯನು ಮೀಂಟಿದೊಡೆ ಕಳೆದ
ಜೀವನವೆ ಬಹುರಾಗಗೊಂಡು
ತೀವಿ ಹರಿವುದು, ಮನವನಳಲಿಪುದು, ನಲಿಯಿಪುದು,
ಆವುದೋ ನವರಸದಿ ನಾಂದು.

ಸುಖದುಃಖಗಳ ರಾಗಭೋಗಗಳ ನೇಹಗಳ
ಸಕಲಾನುಭವಗಳೂ ಕರಗಿ,
ಕರಗಿ ಸಮರಸವಾಗಿ ಬಂದೆದೆಯ ಕಂದರದಿ
ಮೊರೆಯುತಿಹುವೊಂದೆ ತಾನದಲಿ.

ಎನಿತೆನಿತೊ ಹಗಲಿರುಳು ಸಮೆದ ಕಿರುದಾರಿಯಲಿ
ನೆನಹೆಂಬ ಕಿರುಸೊಡರ ಹಿಡಿದು
ಮನದ ಮಂದಿರಕಳಿದ ಬಾಳುವೆಯ ಚಿರವಿನೂ
ತನ ಚಿತ್ರಗಳು ಧೀಂಕಿಡುವುವು.

ಸಂಜೆಯಾಗಸದ ನವರಾಗರಂಜಿತಮೇಘ
ಪುಂಜದಂತಿವು ಚಣಕೆ ಚಣಕೆ
ಒಂದೊಂದು ರೂಪದಲಿ, ಒಂದೊಂದು ರಾಗದಲಿ
ಬಂದು ಸೋಕುವುವೆದೆಯ ತಳಕೆ.

ಮುಂದುಮುಂದಕೆ ಹಾರಲಾರದೆನ್ನೆದೆದುಂಬಿ
ಹಿಂದುಹಿಂದಕೆ ಹಾರುತಿಹುದು;
ಹಿಂದಿನಿರವಿನ ಬಾಡಿಬಿದ್ದ ಹೂವಿನ ಕೆಲದಿ
ನಿಂದು ನಿರುಕಿಸಿ ಚೀರುತಿಹುದು.

– ಡಾ॥ ಗೋಪಾಲಕೃಷ್ಣ ಅಡಿಗ

ವಿಚಾರ ದೀಪ್ತಿ

ಬಿದಿರಿನ ಕೊಳಲು ನಾದದ ಹೊನಲು

ಬಿದಿರನ್ನು ಕೊಳಲು ಮಾಡಿ, ಆ ಕೊಳಲಿಗೆ ಉಸಿರು ತುಂಬಿ, ಆ ಉಸಿರಿನಿಂದ ನಾದದ ಹೊನಲನ್ನು ಹರಿಸುವ ಕ್ರಿಯೆ ನಿಜಕ್ಕೂ ಸೋಜಿಗಮಯವಾದದ್ದು. ಇದು ಎಂತಹ ಸೋಜಿಗವೆಂದರೆ ಅಲ್ಲಮಪ್ರಭು ತನ್ನ ಒಂದು ವಚನದಲ್ಲಿ 'ಮಾವಿಗೂ ಕೋಗಿಲೆಗೂ, ಬೆಟ್ಟದ ನೆಲ್ಲಿಗೂ, ಸಮುದ್ರದ ಉಪ್ಪಿಗೂ, ಗುಹೇಶ್ವರ ಲಿಂಗಕ್ಕೂ, ನನಗೂ ಎಲ್ಲಿಂದ ಎಲ್ಲಿಯ ಸಂಬಂಧ?' ಎಂದು ಕೇಳಿದಂತೆ. ದೇಹವನ್ನು ದೇಹಮಾತ್ರವಾಗಿ ಪರಿಗಣಿಸದೆ ಪರಮಾತ್ಮನನ್ನು ನೆಲೆಗೊಳಿಸಿಕೊಳ್ಳುವ ಸಾಮರ್ಥ್ಯವಿರುವ ಜೀವಾತ್ಮನ ತಂಗುದಾಣ ಎಂದು ಪರಿಭಾವಿಸಿದ್ದರಲ್ಲಿ ದೇಹಿಯಾದವನು ಸಾಧನೆಯ ಮೂಲಕ ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಂಡೆನೆಂದು ತಿಳಿಯುವ ಅರಿವಿನ ಮೂಲ ಸೆಲೆ ಅಡಗಿದೆ. ಹಾಗೆಯೇ 'ಬಿದಿರಿಗೂ ನಾದಕ್ಕೂ ಎಲ್ಲಿಯ ಸಂಬಂದ' ಎಂದು ಕೇಳಬಹುದಾದ ಸೋಜಿಗದ ಪ್ರಶ್ನೆಗೆ ಕೊಡಬಹುದಾದ ಉತ್ತರದ ನೆಲೆ ಹುದುಗಿರುವುದು ಬಿದಿರಿನಲ್ಲಿ ಕೊಳಲನ್ನು ಅನ್ವೇಷಿಸಿದ ಮನುಷ್ಯನ ಸಾಹಸ ಪ್ರವೃತ್ತಿಯಲ್ಲಿ.

ಬಿದಿರಿನಿಂದ ಕೊಳಲನ್ನು ತಯಾರಿಸಿದ್ದು. ಆ ಕೊಳಲಿನಿಂದ ಬಗೆಬಗೆಯ ನಾದದ ಹೊನಲುಗಳನ್ನು ಹರಿಯಿಸಿದ್ದು ಮನುಷ್ಯನ ಅದ್ಭುತ ಸಾಧನೆಯೇ ಸರಿ. ಅಂದಮಾತ್ರಕ್ಕೆ ಇದೇನೂ ಅಸಾಮಾನ್ಯ ಪ್ರಜ್ಞೆಯ ಮಹಾ ಮೇಧಾವಿ ವಿಜ್ಞಾನಿಯೊಬ್ಬನ ದುಬಾರಿ ಪ್ರಯೋಗಶಾಲೆಯ ದುಬಾರಿ ಪರಿಕರಿಗಳ ಮೂಲಕ ಕಂಡುಹಿಡಿದ ಸಾಧನವಲ್ಲ. ಸಾಮಾನ್ಯ ಮನುಕುಲದ ಪ್ರಯೋಗಶೀಲ ಬುದ್ಧಿ ಅನುಭವದಿಂದ ಅನುಭವಕ್ಕೆ ತನ್ನನ್ನು ಒಡ್ಡಿಕೊಳ್ಳುತ್ತಾ ಬಂದುದರ ಎಷ್ಟೋ ಫಲಿತಗಳಂತೆ ಇದೂ ಒಂದು. ಇದಕ್ಕೆ ಯಾರ ಸ್ವಾಮ್ಯವೂ ಇಲ್ಲ; ಯಾವ ಪೇಟೆಂಟಿನ ಅಗತ್ಯವೂ ಇಲ್ಲ. ಅಂದರೆ ಪ್ರಕೃತಿಯಲ್ಲಿ ದೊರೆಯುವ ಸಾಮಾನ್ಯ ಕಾಡುಗಿಡದ ನಳಿಕೆಯಿಂದ ಮಾನವ ಬುದ್ಧಿ ಅನ್ವೇಷಿಸಿದ ಈ ಅನುಭವಜ್ಞಾನ ವಾಣಿಜ್ಯೀಕರಣಗೊಳ್ಳುವುದು ತರವಲ್ಲ. ಲೋಕ ಸಾಮಾನ್ಯವಾದುದರಿಂದ ಅಸಾಮಾನ್ಯವಾದುದನ್ನು ಸಾಧಿಸಿದಾಗ ಆ ಸಾಧನೆಗೆ ಮಾತ್ರವಲ್ಲ, ಸಾಧನೆಗೆ ಸಾಧನವಾದ ವಸ್ತುವಿಗೂ ಅಮೂಲ್ಯತೆ ಪ್ರಾಪ್ತವಾಗುತ್ತದೆ; ಅದಕ್ಕೊಂದು ಮೌಲ್ಯ ಸಿದ್ಧಿಸುತ್ತದೆ. ಇಂತಹ ಎಷ್ಟೋ ಉಪಯೋಗಗಳು ಬಿದಿರಿನಿಂದ ಅಗುತ್ತಿರುವುದರಿಂದ ಇಂದು ಬಿದಿರೂ ಅಮೂಲ್ಯವಾಗಿದೆ, ಅಪರೂಪವೂ ಆಗುತ್ತಿದೆ. ಸಾಮಾನ್ಯ ಕಾಡುಗೊಲ್ಲರ ಕೈಯ ಅಲಂಕಾರವೂ, ಅವರ ಕಲಾಭಿಜ್ಞತೆಯ ದ್ಯೋತಕವೂ, ಸಂಸ್ಕೃತಿಯ ಕುರುಹೂ ಆಗಿದ್ದುದು ಕೊಳಲಿನ, ಅದರ ಸಾಧನವಾದ ಬಿದಿರಿನ ಒಂದು ಹಂತದ ಬೆಳವಣಿಗೆ; ಈಗ ಅವು ವಿಶ್ವನಾಗರಿಕತೆಯ, ಸಂಸ್ಕೃತಿಯ ವೇದಿಕೆಯಲ್ಲಿ ಫ್ಯಾಂಟಸಿ ಆಗಿ ಮೆರೆಯುವ ಸ್ಥಿತಿ ತಲುಪಿರುವುದು ಇನ್ನೊಂದು ಹಂತದ ಬೆಳವಣಿಗೆ. ಕೊಳಲುಧಾರಿಯಾದ ಕೃಷ್ಣ ಕೊಳಲಿನ, ಅರ್ಥಾತ್ ಬಿದಿರಿನ ಈ ಎರಡೂ ಹಂತದ ಬೆಳವಣಿಗೆಯ ಜೊತೆ-ಜೊತೆಗೆ ತಾನೂ ಬೆಳೆದು ದೈವವಾದ; ಇಂದು ಪ್ರದರ್ಶನ ಕಲೆಯ ಮಾದರಿಯೂ ಆಗಿದ್ದಾನೆ. ಮುರಳೀಲೋಲನಾದ ಕೃಷ್ಣ ತನ್ನ ಕೊಳಲಿನ ನಾದಕ್ಕೆ ತಾನೂ ತಲೆದೂಗಿದ. ತನ್ನ ಪಹರೆಯ ಗೋವುಗಳನ್ನೂ ತಲೆದೂಗಿಸಿದ; ಆಮೇಲೆ ಅದು ಗೋಕುಲದ ಹೆಂಗಳೆಯರನ್ನೂ ಹಾಗೆಯೇ ಕಾಲಾಂತರದ ಭಕ್ತ ಸಮೂಹವನ್ನೂ ತಲೆದೂಗಿಸಿತು.

ಪ್ರಸ್ತುತ ಸಂದರ್ಭದಲ್ಲಿ ಕಾಲ ದೇಶ ಜನಾಂಗದ ಎಲ್ಲೆಯನ್ನು ಮೀರಿ ಪ್ರಭಾವದ ಸಾರ್ವತ್ರಿಕತೆಯನ್ನು ಸಾಧಿಸುತ್ತಿದೆ; ವ್ಯಾಪಾರೀಕರಣದ ಅಪಾಯದ ಅಂಚನ್ನೂ ಮುಟ್ಟುತ್ತಿದೆ.

ಬಿದಿರಿನ ಕಲೆಯ ವಿಕಾಸವು ತಲುಪುತ್ತಿರುವ ಅಪಾಯದ ಅಂಚನ್ನು ಮರೆತು ಯೋಚಿಸುವುದಾದರೆ, ಬಿದಿರಿನಂತಹ ಸಾಮಾನ್ಯ ಕಾಡುಗಿಡವೂ ಅಮೂಲ್ಯ ವಸ್ತುವಾದುದು, ಲೋಕವಿಖ್ಯಾತ ಸಂಗೀತ ಕಲಾವಿದರ ತುಟಿಗೇರುವ ಪುಣ್ಯವನ್ನು ಪಡೆದುಕೊಂಡುದು ಎಂತಹ ಪವಾಡ ಎನಿಸದಿರದು. ಇಷ್ಟಕ್ಕೆಲ್ಲ ಕಾರಣ ಮನುಷ್ಯನ ಕುತೂಹಲಭರಿತ ಅನ್ವೇಷಕ ಮನೋಧರ್ಮ. ಕಾಡುಗಿಡದ ನಳಿಕೆಯಿಂದ ಹೊಮ್ಮುವ ಮಧುರ ನಾದಕ್ಕೆ ಮನಸೋತು ಕಿವಿಗೊಟ್ಟು ತಲೆದೂಗುವ, ಆಲಿಕೆಯ ಸುಖದಿಂದ ಧನ್ಯತಾಭಾವ ತಳಿಯುವ ಮನೋಧರ್ಮವನ್ನೂ ಮರೆಯುವಂತಿಲ್ಲ. ನಾದ-ಆಸ್ವಾದದ ನೆಲೆಯಲ್ಲಿ ಮನೋಧರ್ಮಗಳು ಸಂಗಮಿಸುವ ಅನುಪಮ ತಾಣ ನಿಜಕ್ಕೂ ಅವರ್ಣನೀಯ, ಅಸಾಮಾನ್ಯ. ಕಲೆಯ ಈ ಪರಿಣಾಮದಲ್ಲಿ ಹಲವು ನಾಶವಾಗಿ ಏಕವಾಗುವುದು, ಭಿನ್ನತೆ ತೊಲಗಿ ಅಭಿನ್ನವಾಗುವುದು, ಅಪಮಾನ ನೆಲೆಗಳು ಇಲ್ಲವಾಗಿ ಸಮಾನತೆ ಸಮಾನತೆ ನೆಲೆಗೊಳ್ಳುವುದು ಎಂದಿಗೂ ಅಪೇಕ್ಷಣೀಯವಾದದ್ದೇ.

ಕೊಳಲನ್ನು ಮಾನವ ಶರೀರಕ್ಕೆ, ಕೊಳಲಿನಿಂದ ಹೊಮ್ಮುವ ನಾದವನ್ನು ಶರೀರದ ಮೂಲಕ ಮಾನವ ಪ್ರಕಾಶಪಡಿಸುವ ಭಾವ ಭಣಿತಿ, ಅಂತಃಸತ್ವಕ್ಕೆ ಸಂಕೇತ ಮಾಡಿಕೊಂಡು ನೋಡಿದಾಗ ಸೋಜಿಗದ ಇನ್ನೊಂದು ನೆಲೆಯನ್ನು ನಾವು ತಲುಪುತ್ತೇವೆ. ಕಾಯ ಮಣ್ಣಿಂದ ಆದದ್ದು, ಮತ್ತೆ ಮಣ್ಣಿಗೇ ಹೋಗುವಂತಹುದು ಎಂದು ಮಾನವ ಶರೀರದ ನಶ್ವರತೆಯನ್ನು ಸಾರಿದ ದಾಸರು 'ಮಾನವ ಜನ್ಮ ಬಲು ಅಪರೂಪದ್ದು, ಇದ ಹಾಳು ಮಾಡಲುಬೇಡಿರೊ ಹುಚ್ಚಪ್ಪಗಳಿರಾ' ಎಂದು ಹಾಡಿದರು. 'ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸುವೋ ಕೂಡಲಸಂಗಮದೇವನ' ಎಂದು ಬಸವಣ್ಣನವರು ಶರೀರರದ ಮೂಲಕ ಜೀವಾತ್ಮ ಹೊಂದಬಹುದಾದ ಸದ್ಗತಿಯ ಕಡೆಗೆ ಮನಸ್ಸು ಕೊಡಬೇಕಾದ ಜರೂರಿಗಾಗಿ ಒತ್ತಾಯಿಸಿದರು. ಬಿದಿರಿನಿಂದ ಕೊಳಲು; ಮಣ್ಣಿನಿಂದ ಅಂದರೆ ಪಂಚಮೂಲಭೂತಗಳಿಂದ ಕಾಯ; ಕೊಳಲಿಗೆ ಉಸಿರು ತುಂಬುವ ಕ್ರಿಯೆ, ದೇಹಿಯಾದವನು ತನ್ನೊಳಗಿನ ಜೀವಾತ್ಮನನ್ನು ಜಾಗೃತಗೊಳಿಸಿಕೊಳ್ಳುವ ಬಗೆ; ಕೊಳಲಿಗೆ ತುಂಬಿದ ಉಸಿರಿನಿಂದ ಭಿನ್ನ ಲಯಗತಿಯ ನಾದವನ್ನು ಹೊಮ್ಮಿಸುವ ಬಗೆ. ದೇಹದ ಮೂಲಕ ಜೀವಾತ್ಮ ಸಾಧಿಸಬಹುದಾದ ಲೌಕಿಕ ಹಾಗೂ ಲೋಕೋತ್ತರ ಮಹತ್ಕಾರ್ಯ-ಹೀಗೆ 'ಬಿದಿರಿನ ಕೊಳಲು ನಾದದ ಹೊನಲು' ಎಂಬ ಮಾತಿನ ಪ್ರತಿಮಾತ್ಮಕ ನೆಲೆಯ ಅರ್ಥದ ಜಾಡು ಹಿಡಿದು ಸಮೀಕರಣಗಳನ್ನು ಸಾಧಿಸಿಕೊಳ್ಳಬಹುದು. 'ಶರೀರಮಾದ್ಯಂ ಖಲುಧರ್ಮ ಸಾಧನಂ' ಎಂಬ ಮಾತಿದೆ. ಹಾಗೆಯೇ 'ಪರೋಪಕಾರಾರ್ಥಂ ಇದಂ ಶರೀರಂ' ಎಂಬ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಮನುಷ್ಯನಾದವನು ಏನನ್ನಾದರೂ ತನ್ನ ಜೀವಮಾನದಲ್ಲಿ ಮಹತ್ತರವಾದುದನ್ನು ಸಾಧಿಸುವ ಗುರಿಯನ್ನು ಹೊಂದಬೇಕು; ಆ ಗುರಿ ಸಮಾಜಮುಖಿಯಾಗಬೇಕಾದದ್ದು ಅಪೇಕ್ಷಣೀಯ. ಮಾನವ ಬದುಕಿನ ವಿಕಾಸ ಕಾಲದಿಂದ ಕಾಲಕ್ಕೆ ಸಾಧಿತವಾಗಿರುವುದು ಈ ಬಗೆಯ ಸಾಧನೆಗಳಿಂದಲೇ. ಇದೇ ನಿಜವಾದ ನಾದದ ಹೊನಲು. ಇದು ನಿರಂತರವಾಗಿ ಬದುಕಿನ ವಿಭಿನ್ನ ನೆಲೆಗಳಲ್ಲಿ ಹೊಮ್ಮಿದಷ್ಟೂ ಈ ಭೂಮಿಯ ಮೇಲಿನ ಮನುಷ್ಯನ ಬದುಕು ಕ್ಷೇಮಮಯ; ಊರ್ಧ್ವಮುಖಿ.

– ಡಾ. ಬೋರೇಗೌಡ ಚಿಕ್ಕಮರಳಿ

ಭಾರತ ಮತ್ತೆ ವಿದೇಶಿ ಕಂಪನಿಗಳ ಕಪಿಮುಷ್ಟಿಯಲ್ಲಿ !

– ಸುರೇಂದ್ರ ಕೌಲಗಿ

೧೯೪೭ ಅಗಸ್ಟ್ ೧೫ರ ಮಧ್ಯರಾತ್ರಿ ೧೨ಕ್ಕೆ ಭಾರತ ಸ್ವತಂತ್ರಗೊಂಡು ವಿಧಿಯೊಂದಿಗೊಂದು ಒಪ್ಪಂದ ಮಾಡಿಕೊಂಡಿತು. ಆ ರಾತ್ರಿಯ ಜವಾಹರ್‌ಲಾಲ್ ನೆಹರೂರವರ ಸಂವಿಧಾನ ಸಭೆಯಲ್ಲಿಯ ಭಾಷಣ ಸುಪ್ರಸಿದ್ಧವಾಗಿದೆ. 'ಟ್ರಿಸ್ಟ್ ವಿತ್ ಡೆಸ್ಟಿನಿ' ಎಂಬ ಅವರ ಭಾಷಣ ತುಂಬಾ ಜನಪ್ರಿಯವಾಗಿದೆ. ತಮ್ಮ ಭಾಷಣದಲ್ಲಿ ಅವರು ಉಜ್ವಲ ಭಾರತದ ಕನಸನ್ನು ಬಿಚ್ಚಿಟ್ಟರು. ಸಮಸ್ತ ಭಾರತೀಯರ ಆಶೋತ್ತರಗಳು ಅದರಲ್ಲಿ ಬಿಂಬಿತವಾಗಿವೆ. ಇಂದಿಗೂ ಭಾರತೀಯರು ಆ ಕನಸಿನ ನೆನವರಿಕೆಯಲ್ಲಿ ಇರುವಾಗಲೇ ೨೦೦೩ರಲ್ಲಿ ಅಮೇರಿಕಾ ಮೂಲದ ಬಹುರಾಷ್ಟ್ರೀಯ ಚಿಲ್ಲರೆ ವಹಿವಾಟು ಕಂಪನಿ ವಾಲ್‌ಮಾರ್ಟ್ ತನ್ನ ಶಾಖೆಗಳನ್ನು ಭಾರತದಲ್ಲಿ ಪ್ರಾರಂಭಿಸಿದಾಗ ಭಾರತ ಮಲಗಿರಲಿಲ್ಲ, ಎಚ್ಚೆತ್ತುಗೊಂಡಿತ್ತು. ಆದರೆ ಆ ಎಚ್ಚರ ಒಂದು ಸ್ವತಂತ್ರ ದೇಶದ ಜನರ ಎಚ್ಚರವಾಗಿರಲಿಲ್ಲ. ಈ ಮೊದಲು ಈಸ್ಟ್ ಇಂಡಿಯಾ ಕಂಪನಿಯಂಥ ವಾಣಿಜ್ಯ ಕಂಪನಿಯೊಂದು ಭಾರತಕ್ಕೆ ಬಂದು ಸಾಮ್ರಾಜ್ಯ ಸ್ಥಾಪಿಸಿ ಸುಮಾರು ೧೫೦ ವರ್ಷ ರಾಜ್ಯಭಾರ ಮಾಡಿದಾಗ ಭಾರತೀಯರು ಯಾವ ಗುಲಾಮಿ ಭಾವನೆಯನ್ನು ಹೊಂದಿದ್ದರೊ ಅದೇ ಗುಲಾಮಿ ಭಾವನೆಯನ್ನು ೨೦೦೩ರಲ್ಲಿ ವಾಲ್‌ಮಾರ್ಟ್ ಕಂಪನಿ ಭಾರತಕ್ಕೆ ತನ್ನ ದೈತ್ಯ ವಾಣಿಜ್ಯ ವ್ಯವಹಾರವನ್ನು ಪ್ರಾರಂಭಿಸಲು ಬಂದಾಗ ಇತ್ತು. ತತ್ಪರಿಣಾಮವಾಗಿ ದೇಶದ ಸ್ವಾತಂತ್ರ ಪೂರ್ವ ಇತಿಹಾಸ ಮರುಕಳಿಸಲಿದೆ. ಇನ್ನು ಮುಂದೆ ಭಾರತ ದೇಶ ಅನೇಕ ವಿದೇಶಿ ಕಂಪನಿಗಳ ಕಪಿಮುಷ್ಟಿಯಲ್ಲಿ ಸಿಕ್ಕಿಹಾಕಿಕೊಳ್ಳಲಿದೆ. ಕೇಂದ್ರ ಸರ್ಕಾರ ಇದನ್ನು ತನ್ನ ದುರ್ಬಲ ಅರ್ಥವ್ಯವಸ್ಥೆಯ ಉತ್ತರವೆಂದು ಪರಿಭಾವಿಸಿ ಈ ವಿಚಾರದೊಂದಿಗೆ ಚೆಲ್ಲಾಟವಾಡುತ್ತಿದೆ. ದೇಶದ ಎಲ್ಲ ರಾಜಕೀಯ ಪಕ್ಷಗಳು ಇದನ್ನು ವಿರೋಧಿಸಿವೆಯಾದರೂ ಆ ವಿರೋಧದಲ್ಲಿ ಗಾಂಧೀ ಸತ್ಯಾಗ್ರಹದ ಬಲವಿಲ್ಲ. ಅವುಗಳ ವಿರೋಧ ತಮ್ಮ ಪಕ್ಷದ ರಾಜಕೀಯ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತಿರುವ ವಿರೋಧವಾಗಿದೆ. ಅಂದರೆ ಸ್ವರಾಜಕೀಯ ಹಿತದೃಷ್ಟಿಯ ವಿರೋಧವಾಗಿದೆ. ಕೇಂದ್ರ ಸರ್ಕಾರ ತನ್ನ ಬಹುಮುಖಿ ಅಭಿವೃದ್ಧಿಗಳ ಹನ್ನೆರಡನೇ ಪಂಚವಾರ್ಷಿಕ ಯೋಜನೆಗೆ ಬೇಕಾಗಿರುವ ಅಗಾಧ ಮೊತ್ತದ ಹಣವನ್ನು ಸಂಗ್ರಹಿಸಲು ಕಷ್ಟಸಾಧ್ಯವಾಗಿರುವಾಗ ಮತ್ತು ಜನಪ್ರಿಯ ಕಾರ್ಯಕ್ರಮಗಳ ಅತಿ ದುಬಾರಿಯ ದೊಡ್ಡ ಪಟ್ಟಿಯನ್ನೇ ಹಾಕಿಕೊಂಡಿರುವಾಗ ದಾರಿಕಾಣದೆ ಹತಾಶವಾಗಿ ದೇಶದ ವಾಣಿಜ್ಯ ವ್ಯವಹಾರಗಳಲ್ಲಿ ಮತ್ತು ಜೀವ ವಿಮಾ ಕ್ಷೇತ್ರದಲ್ಲಿ ನೇರ ವಿದೇಶಿ ಬಂಡವಾಳ ಹೂಡಿಕೆಗೆ ಆಸ್ಪದವೀಯಲು ಅಣಿಯಾಗಿದೆ. ಯು.ಪಿ.ಎ ಸರ್ಕಾರ

ಮುಂಬರುವ ಚುನಾವಣೆಯಲ್ಲಿ ಜಯಗಳಿಸುವ ಏಕೈಕ ಉದ್ದೇಶದಿಂದ ದೊಡ್ಡ ಪ್ರಮಾಣದಲ್ಲಿ ಮತ್ತು ಬಿರುಸಾಗಿ ಮಾಡ ಹೊರಟಿರುವ ಆರ್ಥಿಕ ಸುಧಾರಣೆ ದೇಶದ ಸ್ವಾತಂತ್ರ್ಯಕ್ಕೆ ಕುತ್ತಾಗಲಿದೆ ಎಂಬ ಪ್ರಜ್ಞೆ ಅದಕ್ಕಿಲ್ಲವಾಗಿದೆ. ಅತ್ಯಾಧುನಿಕ ಆರ್ಥಿಕ ನೀತಿ ಮತ್ತು ಅಭಿವೃದ್ಧಿ ನೀತಿ ಕ್ಷೇತ್ರದಲ್ಲಿಯ ಶಬ್ದಜಾಲ ಉಪಯೋಗಿಸಿ ದೇಶವಾಸಿಗಳನ್ನು ಮರಳುಮಾಡುತ್ತಿದ್ದಾರೆ. ೧೯೯೧ರಲ್ಲಿ ಜಾಗತೀಕರಣಕ್ಕೆ ಭಾರತೀಯರು ವಿರೋಧ ವ್ಯಕ್ತಪಡಿಸಿದಾಗಲೂ ಕೇಂದ್ರ ಸರ್ಕಾರದಲ್ಲಿಯ ಅಂದಿನ ನಾಯಕರು ಅದೇ ರೀತಿಯ ಬಣ್ಣದ ಮಾತುಗಳನ್ನಾಡಿ ಜಾಗತೀಕರಣವನ್ನು ಸ್ವಾಗತಿಸಿತು. ಜಾಗತೀಕರಣ, ಉದಾರೀಕರಣ ಈಗ ಭಾರತದಲ್ಲಿ ಎಂಥ ಅನಾಹುತ ಮಾಡುತ್ತಿವೆ ಎಂಬುದು ಗೊತ್ತಾಗುತ್ತಿದೆ. ಜನತೆಯ ದೈನಂದಿನ ಸಂಕಷ್ಟ ದಿನೇದಿನೇ ಹೆಚ್ಚಾಗುತ್ತಿದೆ ಪರಿಸರ ನಾಶವಾಗುತ್ತಿದೆ. ಕೃಷಿ ಭೂಮಿ ಕಡಿಮೆಯಾಗುತ್ತಿದೆ. ಆಹಾರೋತ್ಪಾದನೆ ಕ್ಷೀಣಿಸುತ್ತಿದೆ. ಹಳ್ಳಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಶಿಕ್ಷಣ ಸಂಪೂರ್ಣವಾಗಿ ವಾಣಿಜ್ಯೋದ್ಯಮವಾಗಿದೆ. ಆರೋಗ್ಯಕ್ಷೇತ್ರ ಮತ್ತೊಂದು ಕೈಗಾರಿಕಾ ಕ್ಷೇತ್ರದ ರೂಪ ತಾಳುತ್ತಿದೆ. ಭ್ರಷ್ಟಾಚಾರ ಮಿತಿಮೀರಿ ಹರಡಿದೆ. ಆಡಳಿತ ಜನರ ಕಷ್ಟಗಳಿಗೆ ಸ್ಪಂದಿಸಲು ವಿಫಲವಾಗಿದೆ. ಈ ವಿಫಲತೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಹಿರಂಗವಾಗಿಯೇ ಒಪ್ಪಿಕೊಂಡಿವೆ. ಜನತೆಯ ಜೀವನ ನೆಮ್ಮದಿಯಿಂದ ಸಾಗುವಂತೆ ಮಾಡಲು ವಿಫಲವಾಗಿರುವ ಸರ್ಕಾರ ಅಂತರಿಕ್ಷಯಾನಗಳಲ್ಲಿಯ ತನ್ನ ಯಶಸ್ಸನ್ನು ತೋರಿಸುತ್ತ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಪ್ರಯೋಗ ಮಾಡುತ್ತಾ ಜನರ ದಿಕ್ಕನ್ನು ತಪ್ಪಿಸುತ್ತಿದೆ. ರಾಜಕೀಯವಾಗಿ ಆರ್ಥಿಕವಾಗಿ ಬಹಳ ಸೂಕ್ಷ್ಮ ಸ್ಥಿತಿಯಲ್ಲಿ ದೇಶ ಇರುವಾಗ ವಾಲ್‌ಮಾರ್ಟ್‌ನಂಥ ಬಹುರಾಷ್ಟ್ರೀಯ ಕಂಪನಿಗಳನ್ನು ಸ್ವಾಗತಿಸುತ್ತಿರುವುದು ದೇಶದ ಸ್ವಾತಂತ್ರ್ಯವನ್ನು ಮಾರಿಕೊಂಡಂತಾಗುತ್ತಿದೆ. ತಕ್ಷಣದ ಲಾಭಗಳನ್ನು ಮಾತ್ರ ಜನತೆಗೆ ತಿಳಿಸಲಾಗುತ್ತಿದೆಯೆ ಹೊರತು ದೂರಗಾಮಿ ಪರಿಣಾಮಗಳನ್ನಲ್ಲ. ವಾಲ್‌ಮಾರ್ಟ್ ಕಂಪನಿಯ ವಾರ್ಷಿಕ ವಹಿವಾಟು ಇಸ್ರೇಲ್, ಪೋಲೆಂಡ್ ಮತ್ತು ಗ್ರೀಸ್ ಮುಂತಾದ ದೇಶಗಳನ್ನು ಒಳಗೊಂಡಂತೆ ಜಗತ್ತಿನ ೧೬೧ ದೇಶಗಳ ಅರ್ಥವ್ಯವಸ್ಥೆಗಿಂತಲೂ ದೊಡ್ಡದಾಗಿದೆ. ಬಿಲ್‌ಕ್ವಿನ್ 'ವಾಲ್ ಮಾರ್ಟ್ ಅಮೇರಿಕಾವನ್ನು ನಾಶಮಾಡುತ್ತಿದೆ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಆ ಪುಸ್ತಕ ತುಂಬಾ ವಾಲ್‌ಮಾರ್ಟ್ ಕಂಪನಿ ಸಣ್ಣ ವ್ಯಾಪರಸ್ಥರನ್ನು ಹಾಳುಮಾಡಿ ತನ್ನ ಯಶಸ್ಸನ್ನು ಹೇಗೆ ಪಡೆಯಿತೆಂಬುದರ ಬಗ್ಗೆ ಕಥೆಗಳು ಮತ್ತು ಅಂಕಿಸಂಖ್ಯೆಗಳು ತುಂಬಿ ತುಳುಕುತ್ತವೆ. ಆದ್ದರಿಂದ ವಾಲ್‌ಮಾರ್ಟ್‌ನಂಥ ವಿದೇಶಿ ಸಂಸ್ಥೆಗಳು ತಮ್ಮ ಲಾಭಕ್ಕಾಗಿ ಬರುತ್ತಿವೆಯೋ ಅಥವಾ ಭಾರತೀಯರನ್ನು ಉದ್ಧಾರ ಮಡಲು ಬರುತ್ತಿವೆಯೋ ಎಂಬುದನ್ನು ಸರ್ಕಾರ ಸ್ಪಷ್ಟ ಪಡಿಸಬೇಕು. ಪತ್ರಿಕೋದ್ಯಮಿ ರವೀಂದ್ರ ಆಕಳವಾಡಿ ಕೇಳಿರುವಂತೆ ವಿದೇಶಿ ಹೂಡಿಕೆ ಎಂದರೆ ನಮ್ಮ ಮಿತ್ರ ದೇಶಗಳಲ್ಲದ್ದಕ್ಕೂ ಆಹ್ವಾನವೇ. ಭಾರತದ ವಿರೋಧಿ ದೇಶಗಳೆಂಬ ರೀತಿಯಲ್ಲಿ ವರ್ತಿಸುತ್ತಿರುವ ಚೀನಾ, ಪಾಕಿಸ್ತಾನ ಮತ್ತು ಮಧ್ಯಪ್ರಾಚ್ಯ ದೇಶಗಳು ನಮ್ಮ ವ್ಯಾಪಾರೀಕ್ಷೇತ್ರವನ್ನು ಪ್ರವೇಶಿಸಬಹುದೇ? ಅಂದರೆ ಎಫ್.ಡಿ.ಐ. ಮಾರ್ಗವಾಗಿ ನಮ್ಮ ದೇಶದಲ್ಲಿ ಇನ್ನಷ್ಟು ಉಗ್ರಗಾಮಿ, ದೇಶವಿರೋಧಿ ಚಟುವಟಿಕೆಗಳನ್ನು ನಡೆಸಲು ರಾಜಮಾರ್ಗವೇ? ಎಫ್.ಡಿ.ಐ ಬರುವುದರಿಂದ

ಉದ್ಯೋಗವಕಾಶಗಳು ಹೇಗೆ ಹೆಚ್ಚುತ್ತವೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ರೈತರು ದೊಡ್ಡ ಕಂಪನಿಗಳ ಜೀತದಾಳಾಗುತ್ತಾರೆ. ವಾಲ್‌ಮಾರ್ಟ್‌ನಂಥ ವಿದೇಶಿ ಕಂಪನಿಗಳು ತತ್ವಶಃ ಯುದ್ಧನೀತಿಯನ್ನೇ ವ್ಯಾಪಾರೀಕ್ಷೇತ್ರದಲ್ಲಿ ಅನುಸರಿಸುವುದು ಅಂದರೆ ಸಣ್ಣ ಮತ್ತು ದುರ್ಬಲ ವ್ಯಾಪಾರಿಗಳು ನಿರ್ನಾಮವಾಗುವರು. ಒಂದು ಮಾಲ್ ಬಂದರೆ ಒಂದು ನೂರಕ್ಕೂ ಹೆಚ್ಚು ಚಿಲ್ಲರೆ ವ್ಯಾಪಾರಸ್ಥರು ನಿರುದ್ಯೋಗಿಗಳಾಗುವರು. ರೈತರ ಪಂಪ್‌ಸೆಟ್‌ಗಳಿಗೆ, ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಲಾಗದ ಸರ್ಕಾರ ಗಿರಾಕಿಗಳ ಅಗತ್ಯವನ್ನು ಹೇಗೆ ತಾನೆ ಪೂರೈಸಬಲ್ಲದು? ಜಾಗತೀಕರಣ ನಮ್ಮ ಸಣ್ಣ ಕೈಗಾರಿಕೆಗಳನ್ನು ನಾಶಮಾಡಿವೆ. ಈಗ ವಿದೇಶಿ ಕಂಪನಿಗಳು ಜಾಗತೀಕರಣ ಮತ್ತು ಖಾಸಗೀಕರಣದ ಲಾಭವನ್ನು ಪಡೆಯುತ್ತಿವೆ. ರೈತರು ಬೆಳೆದ ಉತ್ಪನ್ನಗಳಿಗೆ ಪ್ರಾರಂಭದಲ್ಲಿ ಒಳ್ಳೆಯ ಬೆಲೆಕೊಟ್ಟು ಸ್ವಲ್ಪ ಕಾಲದ ನಂತರ ತಾವೇ ಬೆಲೆ ನಿಷ್ಕರ್ಷೆ ಮಾಡಿ ರೈತರನ್ನು ತಮ್ಮ ಸ್ವಾರ್ಥದ ಜೇಡರಬಲೆಗೆ ಸಿಕ್ಕಿಸುತ್ತದೆ. ಆಗ ಸರ್ಕಾರವಾಗಲೀ ಸ್ವತಃ ವಾಣಿಜ್ಯ ಕಂಪನಿಗಳಾಗಲೀ ರೈತರ ಪರಿಹಾರಕ್ಕೆ ಬರುವುದಿಲ್ಲ. ಅವರ ಹಣೆಬರಹವನ್ನು ಅವರೇ ಕಂಡು ಕೊಳ್ಳಬೇಕಾಗುತ್ತದೆ. ಇಲ್ಲಿ ಗಮನಿಸಬೇಕಾದ ವಿಶೇಷ ಸಂಗತಿ ಏನೆಂದರೆ ಈಸ್ಟ್ ಇಂಡಿಯಾ ಕಂಪನಿ ಕಾಲದಲ್ಲಿಯಂತೆಯೇ ಭಾರತ ಶ್ರೀಮಂತ ಮತ್ತು ಬಲಾಢ್ಯ ಹಾಗೂ ಕೈಗಾರಿಕಾಕೃತ ದೇಶವೊಂದರ ವಸಹಾತು ಆಗುತ್ತಿದ್ದದ್ದು ಜ್ಞಾಪಕಕ್ಕೆ ಬರುತ್ತದೆ. ಆಗ ಇಂಗ್ಲೆಂಡ್ ಬಾಲಾಢ್ಯ ದೇಶವಾಗಿದ್ದಿದ್ದರೆ, ಈಗ ಅಮೇರಿಕಾ ಭಾರತಕ್ಕಿಂತ ಎಲ್ಲ ವಿಧದಲ್ಲೂ ಎಲ್ಲ ಕ್ಷೇತ್ರಗಳಲ್ಲೂ ಬಲಾಢ್ಯವಾಗಿದೆ. ಜಗತ್ತಿನ ಅನೇಕ ಹಿಂದುಳಿದ ರಾಷ್ಟ್ರಗಳನ್ನು ತನ್ನ ಅಧಿಪತ್ಯದ ಕಕ್ಷೆಯೊಳಗೆ ತಂದು ಕೊಳ್ಳಲು ಪ್ರಯತ್ನಿಸುತ್ತಿರುವುದು ಇಡೀ ಜಗತ್ತಿಗೆ ಗೊತ್ತಿದೆ. ಈಗ ಅಮೇರಿಕಾ ತನ್ನ ವಾಲ್‌ಮಾರ್ಟ್‌ನಂಥ ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಭಾರತವನ್ನು ಆರ್ಥಿಕವಾಗಿ ನುಂಗಲು ಪ್ರಯತ್ನಿಸುತ್ತಿದೆ. ನಮ್ಮ ಈಗಿನ ಕೇಂದ್ರ ಸರ್ಕಾರ ಅಮೇರಿಕಾದ ಬಾಲಂಗೋಚಿಯಂತೆ ಆಡುತ್ತದೆ. ಯಾವ ರಾಜಕೀಯ ಆರ್ಥಿಕ ಕ್ರಮದಿಂದ ಅಮೇರಿಕಾದ ಸರ್ಕಾರ ಸುಪ್ರೀತವಾಗಬಲ್ಲದೋ, ಅಂಥ ಕ್ರಮವನ್ನು ಭಾರತ ಸರ್ಕಾರ ದೇಶದ ಹಿತವನ್ನು ಬಲಿಗೊಟ್ಟು ಕೈಗೊಳ್ಳುತ್ತದೆ. ಇದಕ್ಕೊಂದು ಉದಾಹರಣೆ ಒಂದು ಬ್ರಾಂಡ್‌ನ ಚಿಲ್ಲರೆ ಎಫ್.ಡಿ.ಐ ಅನ್ನು ಶೇ. ೫೧ರಿಂದ ಶೇ.೧೦೦ಕ್ಕೆ ಏರಿಸಿದ್ದು ಆದರೆ ಸರ್ಕಾರ ಮುಂದೆ ಅದನ್ನು ಶೇ.೫೧ಕ್ಕೆ ಇಳಿಸಿತಾದರೂ ಕೂಡ ಅಪಾಯ ತಪ್ಪಿದ್ದಲ್ಲ. ಅನೇಕ ವಿಷಯದಲ್ಲಿ ಚೀನಾವನ್ನು ಮಾದರಿಯಾಗಿ ಇರಿಸಿಕೊಳ್ಳುವ ಸರ್ಕಾರ ಚೀನಾ ಯಾವ ರೀತಿ ನಿಧಾನವಾಗಿ ಮತ್ತು ಕ್ರಮೇಣ ಎಫ್.ಡಿ.ಐ ಬರಮಾಡಿಕೊಂಡಿತೆಂದು ಏಕೆ ಗಮನಿಸುತ್ತಿಲ್ಲ? ಚೀನಾ ತನ್ನ ಸುದೀರ್ಘ ೨೫ ವರ್ಷಗಳ ಆರ್ಥಿಕೋನ್ನತಿಯ ನಂತರ ತನ್ನ ದೇಶದಲ್ಲಿ ಎಫ್.ಡಿ.ಐ ಅನ್ನು ಶೇ.೧೦೦ಕ್ಕೆ ಏರಿಸಿದೆ. ಆದರೆ ಭಾರತದಲ್ಲಿ ಅಂಥ ಪರಿಸ್ಥಿತಿಯಿಲ್ಲ. ಭಾರತದ ೪೮ ಕೋಟಿಗೂ ಹೆಚ್ಚು ಜನರು ಕೃಷಿಯೇತರ ಕ್ಷೇತ್ರಗಳನ್ನು ಅವಲಂಬಿಸಿದ್ದಾರೆ. ದೊಡ್ಡ ಜನಸಂಖ್ಯೆಯನ್ನು ಅಗ್ಗದ ಕಾರ್ಮಿಕ ಶಕ್ತಿಯನ್ನಾಗಿ ರೂಪಿಸುವುದು ಒಂದು ರೀತಿಯಲ್ಲಿ ಆರ್ಥಿಕ ಆತ್ಮಹತ್ಯೆಯೇ ಸರಿ. ಜಾಗತಿಕ ಹಸಿದ ದೇಶಗಳ ಪಟ್ಟಿಯಲ್ಲಿ ಭಾರತ ೬೭ನೇ ದೇಶವಾಗಿದೆ. ಅರ್ಜುನ್ ಸೇನ್ ಗುಪ್ತಾ ವರದಿ ಪ್ರಕಾರ

ಶೇ.೭೭ರಷ್ಟು ಭಾರತೀಯರು ದಿನವೊಂದಕ್ಕೆ ಇಪ್ಪತ್ತು ರೂಪಾಯಿಗಳಿಗೆ ಜೀವನ ನಡೆಸುತ್ತಾರೆ. ನಮ್ಮ ಈಗಿನ ಕೇಂದ್ರ ಸರ್ಕಾರ ಭಾರತ ಮತ್ತು ಗ್ರಾಮಭಾರತದ ಹಿತವನ್ನು ಕಾಪಾಡುವ ಯೋಚನೆ ಮಾಡುವ ಮೊದಲು ಅಮೇರಿಕಾವನ್ನು ಸಂತುಷ್ಟಗೊಳಿಸಲು ಪ್ರಯತ್ನಿಸುತ್ತಿದೆ ಎಂಬುದಕ್ಕೆ ಇನ್ನೊಂದು ಉದಾಹರಣೆ ನಮ್ಮ ಕೇಂದ್ರ ಆಹಾರ ಮಂತ್ರಿ ಶರದ್‌ಪವಾರ್‌ರವರು ಎಂಡೋಸಲ್ಫಾನ್ ಅಮೇರಿಕಾದಲ್ಲಿ ನಿಷೇಧಿತವಾಗಿದ್ದರೂ ಭಾರತದಲ್ಲಿ ಅದರ ಚಲಾವಣೆಗೆ ಪ್ರಯತ್ನಿಸುತ್ತಿದ್ದಾರೆ. ಈ ರೀತಿ ಈ ಎಲ್ಲ ಕಾರಣಗಳಿಂದ ಭಾರತ ವಿದೇಶಿ ಕಂಪನಿಗಳ ಕಪಿಮುಷ್ಟಿಗೆ ಸಿಗುತ್ತಿರುವ ಬಗ್ಗೆ ನಾವೆಲ್ಲ ಎಚ್ಚರಗೊಳ್ಳಬೇಕು.

ವಾಲ್‌ಮಾರ್ಟ್‌ನಂಥ ಚಿಲ್ಲರೆ ವ್ಯಾಪಾರ ಕಂಪನಿಗಳು ಬಂದರೆ ಭಾರತ ದೇಶದ ಗ್ರಾಮ ಜೀವನದ ಅರ್ಥವ್ಯವಸ್ಥೆ ತಲೆಕೆಳಕಾಗುತ್ತದೆ. ಸ್ವಾವಲಂಬಿತವಾಗಿ ಸ್ವಯಂ ಚಾಲಿತವಾಗಿದ್ದ ಗ್ರಾಮೀಣ ಅರ್ಥವ್ಯವಸ್ಥೆ ಕುಸಿದು ರೈತರು ಮತ್ತು ಗ್ರಾಮಸ್ಥರು ಕಂಗಾಲಾಗುತ್ತಾರೆ. ಸಾಮಾನ್ಯ ಪದಾರ್ಥಗಳಿಗಾಗಿಯೂ ಪರದಾಡಬೇಕಾಗುತ್ತದೆ. ಆಗ ಜನರೆಲ್ಲ ಬೀದಿಗಿಳಿದು ಹೊಡೆದಾಡಬೇಕಾಗುತ್ತದೆ. ಕ್ರಮೇಣ ಊರಿನ ಬೀದಿಗಳು ರಣರಂಗವಾಗುತ್ತವೆ. ಈಗ ಹತ್ತು ಲಕ್ಷ ಜನಸಂಖ್ಯೆಯುಳ್ಳ ನಗರಗಳಲ್ಲಿ ಮಾತ್ರ ವಿದೇಶಿ ಕಂಪನಿಗಳಿಗೆ ಪ್ರವೇಶವಿದೆಯೆಂದು ಸರ್ಕಾರ ಹೇಳುತ್ತಿದ್ದರೂ ಆ ಕಂಪನಿಗಳ ವಾಣಿಜ್ಯ ರಣನೀತಿ ಸಮಸ್ತ ವಾಣಿಜ್ಯ ವ್ಯವಹಾರವನ್ನು ನಿಯಂತ್ರಿಸುವುದು. ಅಷ್ಟೇ ಅಲ್ಲ ಪರೋಪ ಜೀವಿಗಳಂತೆ ಅಂದರೆ ಆಶ್ರಯ ಕೊಟ್ಟ ಮೂಲ ಜೀವಿಗೇ ಸಾವನ್ನು ತರುವ ಸಸ್ಯಗಳಂತೆ ಅವು ಕೆಲಸಮಾಡುತ್ತವೆ. ಉದಾಹರಣೆಗೆ ಕುರಿ ಹುಲ್ಲು ತಿಂದು ನೀರು ಕುಡಿದು ಅಹಿಂಸೆಯಿಂದ ಬಾಳುತ್ತವೆ. ಆದರೆ ಹುಲಿ ಕುರಿಯನ್ನು ತಿಂದು ಪ್ರಕೃತಿಯ ಕ್ರಮವನ್ನು ಮೊಟಕಿಸುತ್ತದೆ. ಅಂತೆಯೇ ಇವೆ ಈ ವಿದೇಶಿ ಕಂಪನಿಗಳು. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ವಾಲ್‌ಮಾರ್ಟ್‌ನಂಥ ವಿದೇಶಿ ಕಂಪನಿಗಳು ಒಂದು ಸಣ್ಣ ಊರಿಗೆ ಚಿಕ್ಕ ವ್ಯಾಪರಿಗಳ ಒಳ್ಳೆಯ ನೆರೆಯವನಂತೇ ಬರುತ್ತವೆಯೇ? ಇದಕ್ಕೆ ಉತ್ತರ ತೋಳದೊಂದಿಗೆ ಕುರಿಮರಿ ನೀರುಕುಡಿಯಬಲ್ಲದೇ ಎಂಬುದು ಯಾವ ವಿದೇಶಿಕಂಪನಿಗಳ ನೇರ ಬಂಡವಾಳ ಹೂಡಿಕೆಗೆ ನಮ್ಮ ಸರ್ಕಾರ ಯಾವ ಕಾರಣ ಕೊಡುತ್ತಿದೆಯೋ ಆ ಕಾರಣವನ್ನು ನಮ್ಮ ದೇಶದ ಗ್ರಾಮೀಣ ಅರ್ಥವ್ಯವಸ್ಥೆಯನ್ನು ಪುನರ್ ಉದ್ದೀಪನಗೊಳಿಸುವುದರ ಮೂಲಕ ಬಗೆಹರಿಸಬಹುದಾಗಿದೆ. ಗಾಂಧೀಜಿ ಈಗ ಭಾರತ ಅನುಭವಿಸಬೇಕಾಗಿ ಬಂದಿರುವ ಪರಿಸ್ಥಿತಿಯನ್ನು ತಪ್ಪಿಸುವುದಕ್ಕಾಗಿ ದೇಶದ ಸ್ವಾತಂತ್ರ್ಯದೊಂದಿಗೆ ಗ್ರಾಮಸ್ವರಾಜ್ಯದ ಮಾತನ್ನು ಹೇಳಿದ್ದರು. ವಿದೇಶಿ ಕಂಪನಿಗಳ ನೇರ ಬಂಡವಾಳ ಹೂಡಿಕೆಯಿಂದ ದೇಶದ ಸ್ವಾತಂತ್ರ್ಯ ಖಂಡಿತ ಕೈತಪ್ಪಲಿದೆ. ನಮ್ಮ ಜನ ಈ ಮಾತನ್ನು ಕೇಳುತ್ತಿದ್ದಾರೆಯೇ? ಗ್ರಾಮಸ್ವರಾಜ್ಯವನ್ನು ಸ್ಥಾಪಿಸಲು ಇದು ಸಕಾಲ. ವಿದೇಶಿ ಕಂಪನಿಗಳನ್ನು ಬಹಿಷ್ಕರಿಸಬೇಕು. ಅವುಗಳೊಂದಿಗೆ ಅಸಹಕಾರ ಮಾಡಬೇಕು. ಆಗಲೇ ಭಾರತಕ್ಕೆ ವಿದೇಶಿ ಕಂಪನಿಗಳ ಕಪಿಮುಷ್ಟಿಯಿಂದ ಮುಕ್ತಿ.

* * *

ದೇಶದ ಮುಖ್ಯವಾಹಿನಿ ಸೇರದ ಈಶಾನ್ಯ ರಾಜ್ಯಗಳ ಸ್ಥಿತಿಗತಿ

– ದಿನೇಶ್ ಅಮಿನ್ ಮಟ್ಟು

ಕಣ್ಣೀರಿಗೆ ಯಾವ ಭಾಷೆ, ಜಾತಿ, ಧರ್ಮ, ಊರು, ಕಾಲ? ನಿರಾಶ್ರಿತರ ಶಿಬಿರಗಳಲ್ಲಿರುವ ಮೀರಾ ಬಸುಮತಾರಿ, ರಜಿಯಾ ಅಹ್ಮದ್, ಮುನಾವರ್ ಹುಸೇನ್, ಕಮಾಲಿ ಬ್ರಹ್ಮ, ಸಲ್ಮಾ ಉದ್ದಿನ ಮತ್ತು ಇವರಂತೆಯೇ ಇರುವ ಇನ್ನೆಷ್ಟೋ ಮಂದಿಗೆ ಎದುರಿಗಿದ್ದವರ ಜತೆ ತಮ್ಮೆಲ್ಲ ಕಷ್ಟ-ಕಾರ್ಪಣ್ಯಗಳನ್ನು ಹೇಳಿಬಿಡುವ ತವಕ. ಅವರಲ್ಲಿ ಹೆಚ್ಚಿನವರು ಮಾತನಾಡುತ್ತಿದ್ದ ಅಸ್ಸಾಂ ಮತ್ತು ಬಂಗಾಲಿ ಭಾಷೆಗಳೆರಡೂ ಗೊತ್ತಿಲ್ಲದ ನನಗೆ ಒಂದು ಶಬ್ದವೂ ಅರ್ಥವಾಗುತ್ತಿರಲಿಲ್ಲ. ಆದರೆ ಅವರ ಮುಖದ ಭಾವ, ನೋವು ತುಳುಕುತ್ತಿದ್ದ ಅವರ ಕಣ್ಣುಗಳು, ಅವುಗಳಿಂದ ಸುರಿಯುತ್ತಿದ್ದ ಕಣ್ಣೀರು ಹೇಳಬೇಕಾದುದೆಲ್ಲವನ್ನೂ ಎದುರಿಗಿದ್ದವರಿಗೆ ಅರ್ಥಮಾಡಿಕೊಡುತ್ತಿತ್ತು. ಕಣ್ಣೀರಿಗೆ ಯಾವ ಭಾಷೆ?

ಭಾರತದ 'ಮುಖ್ಯವಾಹಿನಿ' ಜತೆ ಕೇವಲ ೨೧ ಕಿ.ಮೀ ಅಗಲದ 'ಕೋಳಿ ಕತ್ತಿ'ನ ಮೂಲಕ ಸಂಪರ್ಕ ಇಟ್ಟುಕೊಂಡಿರುವ ಈಶಾನ್ಯದ ಏಳು ರಾಜ್ಯಗಳ ಪೈಕಿ ಪಶ್ಚಿಮ ಬಂಗಾಳವನ್ನು ಬಿಟ್ಟರೆ ಉಳಿದ ರಾಜ್ಯಗಳ ಕಡೆ ದೇಶದ ಬೇರೆ ಭಾಗಗಳಲ್ಲಿರುವ ಭಾರತೀಯರು ಕಣ್ಣೆತ್ತಿ ನೋಡುವುದು ಅಲ್ಲಿ ಕಣ್ಣೀರು ಹರಿದಾಗ ಮಾತ್ರ. ಅದು ಜನಾಂಗೀಯ ಘರ್ಷಣೆ ಇರಬಹುದು, ಇಲ್ಲವೇ ಬಡವ-ಬಲ್ಲಿದನೆನ್ನದೆ ಎಲ್ಲರ ಬದುಕನ್ನು ಮುಳುಗಿಸುವ ಬ್ರಹ್ಮಪುತ್ರಾ ನೆರೆ ಇರಬಹುದು. ಕೆಳ ಅಸ್ಸಾಂನ ಕೊಕ್ರಜಾರ್, ಚಿರಾಂಗ್, ಉದಲ್‌ಗುರಿ, ದುಬ್ರಿ ಜಿಲ್ಲೆಗಳಲ್ಲಿ ಹಿಂಸಾಚಾರಕ್ಕೆ ಬಲಿಯಾದವರ ಕಣ್ಣೀರು ಇನ್ನೂ ಆರಿಲ್ಲ, ಆಗಲೇ ಉತ್ತರ ಅಸ್ಸಾಂನ ೧೩ ಜಿಲ್ಲೆಗಳ ಜನರ ಬದುಕಿನ ಜತೆ ಅವರ ಕಣ್ಣೀರು ಬ್ರಹ್ಮಪುತ್ರಾ ನದಿಯ ನೆರೆಯಲ್ಲಿ ಕೊಚ್ಚಿ ಹೋಗುತ್ತಿದೆ. ಮಾಧ್ಯಮಗಳಲ್ಲಿ ಗಲಭೆಗ್ರಸ್ತ ಪ್ರದೇಶದ ಸುದ್ದಿಗಳು ಮರೆಗೆ ಸರಿದು ನೆರೆಪೀಡಿತ ಪ್ರದೇಶದ ಚಿತ್ರಗಳು ರಾರಾಜಿಸತೊಡಗಿವೆ. ದಿನ ಸಾಯುವವರಿಗೆ ಅಳುವವರು ಯಾರು?

ಕೇವಲ ಒಂದು ವಾರದ ಅವಧಿಯಲ್ಲಿ ಸುಮಾರು ನಾಲ್ಕು ಲಕ್ಷ ಮಂದಿ ಉಟ್ಟಬಟ್ಟೆಯಲ್ಲಿಯೇ ಮನೆ ಬಿಟ್ಟು ಓಡಿಹೋಗಿದ್ದು ಬಹುಶಃ ಸ್ವತಂತ್ರ ಭಾರತದ ಅತಿ ದೊಡ್ಡ ಆಂತರಿಕ ವಲಸೆ ಇರಬಹುದು. ಸ್ವಾತಂತ್ರ್ಯ ಸಿಕ್ಕ ವರ್ಷವಾದ ೧೯೪೭ರಲ್ಲಿ ಮತ್ತು ಬಾಂಗ್ಲಾ ಯುದ್ಧ ನಡೆದ ೧೯೭೧ರಲ್ಲಿ ಇದಕ್ಕಿಂತಲೂ ಹೆಚ್ಚಿನ ಪ್ರಮಾಣ ವಲಸೆ ನಡೆದಿದ್ದರೂ ಅದು ದೇಶ-ದೇಶಗಳ ನಡುವೆ ನಡೆದದ್ದು. ಕಳೆದ ಜುಲೈ ತಿಂಗಳ ಕೊನೆ ವಾರದಲ್ಲಿ ಅಸ್ಸಾಂನಲ್ಲಿ ನಡೆದ ವಲಸೆಗೆ ಹೋಲಿಸಬಹುದಾದ ಇನ್ನೊಂದು ಆಂತರಿಕ ವಲಸೆ ೨೦೦೨ರಲ್ಲಿ ಗುಜರಾತ್‌ನ ಕೋಮುಗಲಭೆಯ ನಂತರ ನಡೆದದ್ದು. ಅಲ್ಲಿ

ಸುಮಾರು ಎರಡು ಲಕ್ಷ ಜನ ಮನೆ ಕಳೆದುಕೊಂಡು ನಿರಾಶ್ರಿತರಾಗಿಬಿಟ್ಟಿದ್ದರು.

ಗುಜರಾತ್‌ಗೆ ಹೋಲಿಸಿದರೆ ಇಲ್ಲಿ ಸಂಖ್ಯೆ ದುಪ್ಪಟ್ಟು ಮಾತ್ರವಲ್ಲ ಅಲ್ಲಿ ಕೇವಲ ಮುಸ್ಲಿಮರು ನಿರಾಶ್ರಿತರಾಗಿದ್ದರೆ, ಇಲ್ಲಿ ಮುಸ್ಲಿಮರ ಜತೆ ಬೋಡೊ ಮತ್ತಿತರ ಸಮುದಾಯಗಳಿಗೆ ಸೇರಿರುವ ಜನ ಕೂಡಾ ಮನೆ ಬಿಟ್ಟು ಓಡಿಹೋಗಿದ್ದಾರೆ. ಅಧಿಕೃತ ದಾಖಲೆಗಳ ಪ್ರಕಾರವೇ ಬೋಡೋ ಪ್ರಾಂತೀಯ ಮಂಡಳಿಗೆ ಸೇರಿದ ಕೊಕ್ರಜಾರ್ ಮತ್ತು ಚಿರಾಂಗ್ ಹಾಗೂ ನೆರೆಯ ದುಬ್ರಿ ಜಿಲ್ಲೆಗಳ ೨೦೦ ಶಿಬಿರಗಳಲ್ಲಿ ಸುಮಾರು ಎರಡು ಲಕ್ಷ ನಿರಾಶ್ರಿತರು ಕಳೆದ ಎರಡು ತಿಂಗಳುಗಳಿಂದ ಉಳಿದುಕೊಂಡಿದ್ದಾರೆ. ಇವರಲ್ಲಿ ಮುಕ್ಕಾಲು ಪಾಲು ಮುಸ್ಲಿಮರು.

ಮುಸ್ಲಿಮ್ ಬಾಹುಳ್ಯದ ದುಬ್ರಿ ಜಿಲ್ಲೆಯೊಂದರಲ್ಲಿಯೇ ಸುಮಾರು ಒಂದೂವರೆ ಲಕ್ಷಕ್ಕಿಂತಲೂ ಅಧಿಕ ಮುಸ್ಲಿಮರು ಶಿಬಿರದಲ್ಲಿದ್ದಾರೆ. ಎಲ್ಲರೂ ಕುರುಡು ಹಿಂಸಾಚಾರಕ್ಕೆ ಬಲಿಯಾಗಿದ್ದವರಾದರೂ ಯಾವ ಶಿಬಿರದಲ್ಲಿಯೂ ಎರಡು ಸಮುದಾಯಗಳು ಜತೆಯಲ್ಲಿ ಇಲ್ಲ. ಬೋಡೊ ಪ್ರಾಂತೀಯ ಮಂಡಳಿಯ ವ್ಯಾಪ್ತಿಗೆ ಸೇರಿರುವ ಕೊಕ್ರಜಾರ್ ಮತ್ತು ಚಿರಾಂಗ್ ಜಿಲ್ಲೆಗಳಲ್ಲಿದ್ದ ಮುಸ್ಲಿಮರು ಓಡಿಹೋಗಿ ದುಬ್ರಿ ಜಿಲ್ಲೆಯ ಶಿಬಿರಗಳನ್ನು ಸೇರಿಕೊಂಡಿದ್ದಾರೆ. ಇದೇ ರೀತಿ ದುಬ್ರಿ ಜಿಲ್ಲೆಯಲ್ಲಿದ್ದ ಬೋಡೊಗಳು ಓಡಿಬಂದು ಕೊಕ್ರಜಾರ್‌ನ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಯಾರಲ್ಲಿಯೂ ಊರಿಗೆ ಮರಳುವ ಧೈರ್ಯ ಇಲ್ಲ.

ಎರಡೂ ಸಮುದಾಯಗಳ ಮನಸ್ಸುಗಳು ಒಡೆದು ಹೋಗಿವೆ, ಪರಸ್ಪರ ವಿಶ್ವಾಸ ಕಳೆದುಕೊಂಡಿವೆ. 'ಜಾನ್ ಪಹಚಾನೆ ವಾಲೇ ಹೀ ಬಾಂಗ್ಲಾದೇಶಿಯೊಂಕೊ ರಾಸ್ತಾ ದಿಖಾಯಾ ಥಾ, ಪೆಟ್ರೋಲ್, ಕೆರೊಸಿನ್ ಲಾಕೆ ದಿಯಾ ಥಾ. ಅಬ್ ಕಿಸ್ ಬರೋಂಸೆ ಪೆ ಗಾಂವ್ ಜಾಯೆಂಗೆ? '(ಪರಿಚಯ ಇದ್ದವರೇ ಬಾಂಗ್ಲಾದೇಶದವರಿಗೆ ರಸ್ತೆ ತೋರಿಸಿದ್ದರು, ಪೆಟ್ರೋಲ್, ಸೀಮೆಎಣ್ಣೆ ತಂದು ಕೊಟ್ಟಿದ್ದರು. ಹೀಗಿದ್ದಾಗ ಯಾವ ಭರವಸೆಯ ಮೇಲೆ ಊರಿಗೆ ಹೋಗುವುದು?) ಎಂದು ಕೇಳುತ್ತಿರುವುದು ಕೊಕ್ರಜಾರ್‌ನ ಚಾಂದ್‌ಮರಿ ಶಿಬಿರದಲ್ಲಿರುವ ಹೀಮಾ ನಾರ್ಜರಿಯೊಬ್ಬರೇ ಅಲ್ಲ, ಲಕ್ಕಿಗಂಜ್‌ನ ಶಿಬಿರದಲ್ಲಿರುವ ಮುನಾವರ್ ಹುಸೇನ್ ಕೂಡಾ ಇದನ್ನೇ ಕೇಳುತ್ತಿದ್ದಾರೆ.

ದುಬ್ರಿ ಜಿಲ್ಲೆಯ ಮಾಲ್‌ಗಾಂವ್‌ನಲ್ಲಿದ್ದ ಹೀಮಾ ಕುಟುಂಬ ಇತ್ತೀಚೆಗಷ್ಟೇ ಕಟ್ಟಿಸಿರುವ ಮನೆ ಆಕೆಯ ಕಣ್ಣೆದುರೇ ಬೆಂಕಿಗೆ ಆಹುತಿಯಾಗಿದೆ. ಸಾವಿರಾರು ಮುಸ್ಲಿಮ್ ಮನೆಗಳಿರುವ ಆ ಊರಲ್ಲಿರುವ ಬೋಡೋ ಮನೆಗಳು ನೂರಕ್ಕಿಂತಲೂ ಕಡಿಮೆ. ಎಲ್ಲೋ ದೂರದಲ್ಲಿ ನಡೆದ ಘಟನೆಗೆ ಸೇಡು ತೀರಿಸಿಕೊಳ್ಳಲು ಮುಸ್ಲಿಮರು ನೆರೆಯ ಬೋಡೊ ಬಸ್ತಿಯನ್ನು ಸುಟ್ಟುಹಾಕಿದ್ದಾರೆ. ದಾಳಿ ನಡೆಸಲು ಬಂದವರೆಲ್ಲರೂ ನಿತ್ಯ ಮನೆಗೆ ಬಂದು ತಿಂದುಂಡು ಹೋಗುತ್ತಿದ್ದ ಮುಸ್ಲಿಮರೇ ಎನ್ನುವುದು ಈ ಮಹಿಳೆಯ ವೇದನೆ. ಪರಿಚಯಸ್ಥ ಮುಸ್ಲಿಮ್ ಕುಟುಂಬಗಳಿಗೆ ಆಕೆ ನನ್ನೆದುರೇ ಫೋನ್ ಮಾಡಿದರೂ ಆ ಕಡೆಯಿಂದ ಕರೆಯನ್ನು ಯಾರೂ ಸ್ವೀಕರಿಸಲಿಲ್ಲ.

ಅಲ್ಲಿಂದ ದುಬ್ರಿಗೆ ಬಂದರೆ ಅದೇ ಕತೆ, ಪಾತ್ರಧಾರಿಗಳು ಮಾತ್ರ ಬೇರೆ. ಅಲ್ಲಿ ಮುಸ್ಲಿಮರು ದಾಳಿ ನಡೆಸಿದ್ದರೆ ಇಲ್ಲಿ ಅವರು ಬಲಿಪಶುಗಳು. ಅಲ್ಲಿ ಹಿಂಸೆಗೆ ಬಲಿಯಾಗಿದ್ದ ಬೋಡೊಗಳು ಇಲ್ಲಿ ಹಿಂಸಾಚಾರ ನಡೆಸಿದ್ದಾರೆ. ಬೋಡೊ

ನಿರಾಶ್ರಿತರಂತೆ ಇವರೂ ಕೂಡಾ ಮರಳಿ ಊರಿಗೆ ಹೋಗುವ ಯೋಚನೆಯಲ್ಲಿ ಇಲ್ಲ. 'ವಹಾಂ ಕೋಯಿ ನೀರಾಪತ್ತಾ ನಹೀ ದೇಂಗೆ, ಕಾಮ್‌ನಹೀ ದೆಂಗೆ, ಕೈಸೇ ಜಾಯೆಂಗೆ?' (ಅಲ್ಲಿ ಯಾರೂ ಅನ್ನ-ನೀರು ಕೊಡುವುದಿಲ್ಲ, ಕೆಲಸ ಕೊಡುವುದಿಲ್ಲ, ಹೇಗೆ ಹೋಗುವುದು?) ಎಂದು ಕೇಳುತ್ತಿರುವ ಮುನಾವರ್ ಹುಸೇನ್ ಕೊಕ್ರಜಾರ್‌ನಲ್ಲಿ ಸೈಕಲ್ ರಿಕ್ಷಾ ಓಡಿಸುತ್ತಿದ್ದವ.

ಕೊಕ್ರಜಾರ್ ಜಿಲ್ಲೆಯ ಮೊಜಾಬರಿ, ದುರಾಬರಿ ಜವುಲಿಯಾಬರಿ, ಹೈಕಾಯ್‌ಬರಿ ಮೊದಲಾದ ಹನ್ನೆರಡು ಹಳ್ಳಿಗಳ ಸುಮಾರು ಮೂರು ಸಾವಿರ ಮುಸ್ಲಿಮ್ ಕುಟುಂಬಗಳು ಊರು ಬಿಟ್ಟು ಓಡಿಬಂದು ಲಕ್ಕಿಗಂಜ್‌ನ ಶಾಲೆಯೊಂದರ ಆವರಣದಲ್ಲಿರುವ ನಿರಾಶ್ರಿತರ ಶಿಬಿರ ಸೇರಿಕೊಂಡು ಆಗಲೇ ಎರಡು ತಿಂಗಳುಗಳಾಗಿವೆ. ದೂರದ ಕೊಕ್ರಜಾರ್‌ನಿಂದ ದುಬ್ರಿಗೆ ಬರಲು ಕಾರಣ ಮುಸ್ಲಿಮ್ ಬಾಹುಳ್ಯದ ಜಿಲ್ಲೆಯಲ್ಲಿ ಸುರಕ್ಷಿತವಾಗಿರಬಹುದೆಂಬ ಭರವಸೆ. ದುಬ್ರಿ ಜಿಲ್ಲೆಯಲ್ಲಿ ಶೇಕಡಾ ೭೫ರಷ್ಟು ಮುಸ್ಲಿಮರಿದ್ದಾರೆ. ಕೊಕ್ರಜಾರ್ ಸುತ್ತಮುತ್ತ ಮುಸ್ಲಿಮ್ ನಿರಾಶ್ರಿತರಿಗಾಗಿ ಶಿಬಿರ ನಿರ್ಮಿಸಲು ಸ್ಥಳೀಯರು ವಿರೋಧಿಸಿದ ಕಾರಣ ಇವರಿಗೂ ಬೇರೆ ಗತಿ ಇರಲಿಲ್ಲ.

ಗುರಾಂಗ್ ನದಿ ದಂಡೆಯಲ್ಲಿರುವ ಇವರ ಹಳ್ಳಿಗಳು ಕೊಕ್ರಜಾರ್ ಜಿಲ್ಲಾ ಕೇಂದ್ರದಿಂದ ಕೇವಲ ಐದು ಕಿ.ಮೀ. ದೂರದಲ್ಲಿವೆ. ಜುಲೈ ೨೨ರ ರಾತ್ರಿ ನಾಲ್ಕು ದಿಕ್ಕುಗಳಿಂದಲೂ ಸಶಸ್ತ್ರ ಬೋಡೊ ಉಗ್ರಗಾಮಿಗಳು ಸುತ್ತುವರಿದು ಆ ಮೇಲೆ ಒಂದಾದ ಮೇಲೆ ಒಂದರಂತೆ ಹಳ್ಳಿಗಳ ಮೇಲೆ ದಾಳಿ ನಡೆಸಿದ್ದಾರೆ. ಸಮೀಪದಲ್ಲಿಯೇ ಅಸ್ಸಾಂ ಮೀಸಲು ಪಡೆಯ ಕೇಂದ್ರ ಇದ್ದರೂ ಯಾರೂ ರಕ್ಷಣೆಗೆ ಬಂದಿಲ್ಲವಂತೆ. ಸ್ಥಳೀಯ ಶಾಸಕ ಪ್ರದೀಪ್ ಕುಮಾರ್ ಬ್ರಹ್ಮ ಮುಂದೆ ನಿಂತು ದಾಳಿಕೋರರಿಗೆ ರಕ್ಷಣೆ ಕೊಟ್ಟಿದ್ದರಂತೆ. ಪ್ರಧಾನ ಮಂತ್ರಿ ಭೇಟಿ ನೀಡಿದ ಸಮಯದಲ್ಲಿ ಈ ಶಾಸಕನ ಬಗ್ಗೆ ಸ್ಥಳೀಯರು ದೂರು ನೀಡಿದ ನಂತರವೇ ಅವರನ್ನು ಪೊಲೀಸರು ಬಂಧಿಸಿದ್ದು. ಕೆಲವು ದಿನಗಳ ನಂತರ ಶಾಸಕನ ಬಿಡುಗಡೆಯೂ ಆಗಿದೆ.

ಮುಸ್ಲಿಮ್ ಮತ್ತು ಬೋಡೊ ಸಮುದಾಯಗಳು ಅನುಭವಿಸಿದ್ದ ಕಷ್ಟ ಒಂದೇ ಬಗೆಯಾದರೂ ಪರಿಹಾರ ಮಾತ್ರ ಒಂದೇ ರೀತಿ ಇಲ್ಲ. ಕೊಕ್ರಜಾರ್ ಪಟ್ಟಣದ ಖಾಲ್ಸಾ ಸಂಕೀರ್ಣದಲ್ಲಿರುವ ಅತಿಥಿಗೃಹದ ಕಟ್ಟಡಗಳಲ್ಲಿರುವ ಬೋಡೊ ನಿರಾಶ್ರಿತರಲ್ಲಿ ಹೆಚ್ಚಿನ ದೂರುಗಳಿಲ್ಲ. ವಿಶಾಲವಾದ ಕೋಣೆಗಳು, ಒಂದೊಂದರಲ್ಲಿ ಎರಡರಿಂದ ಮೂರು ಕುಟುಂಬಗಳು, ಸ್ವಚ್ಛ ಪರಿಸರ, ಕುಡಿಯಲು ಶುದ್ಧ ನೀರು, ವೈದ್ಯಕೀಯ ಚಿಕಿತ್ಸೆ, ಊಟ-ತಿಂಡಿಗೂ ಕೊರತೆ ಇಲ್ಲ.

ಇವೆಲ್ಲದರ ಮೇಲ್ವಿಚಾರಣೆಗೆ ಅಧಿಕಾರಿಗಳು. ಮನೆ ಕಳೆದುಕೊಂಡಿರುವ ದುಃಖವೊಂದನ್ನು ಬಿಟ್ಟರೆ ಇಲ್ಲಿನ ನಿರಾಶ್ರಿತರು ನೆಮ್ಮದಿಯಾಗಿದ್ದಾರೆ. ಇತ್ತೀಚೆಗೆ ರಾಜ್ಯದ ಸಚಿವರೊಬ್ಬರು ಭೇಟಿ ನೀಡಿದಾಗ ಇಲ್ಲಿನ ನಿರಾಶ್ರಿತರಿಗೆ ಮಾಂಸದ ಊಟ ನೀಡಿದ್ದರಂತೆ. ಇದಕ್ಕೆ ತದ್ವಿರುದ್ಧದ ಪರಿಸ್ಥಿತಿ ದುಬ್ರಿ ಜಿಲ್ಲೆಯ ಶಿಬಿರಗಳಲ್ಲಿ ಕಾಣಬಹುದು.

ದುಬ್ರಿ ಜಿಲ್ಲೆಯ ಲಕ್ಕಿಗಂಜ್‌ನ ಶಿಬಿರ ಪಟ್ಟಣಗಳಲ್ಲಿರುವ ಕೊಳೆಗೇರಿಗಿಂತಲೂ ಕೆಟ್ಟದಾಗಿವೆ. ನಾಲ್ಕು ಕೊಠಡಿಗಳಿರುವ ಸುಮಾರು ಒಂದು ಎಕರೆ ವಿಸ್ತೀರ್ಣದ ಶಾಲಾ

ಸಂಕೀರ್ಣದಲ್ಲಿ ಸುಮಾರು ಹದಿನೈದು ಸಾವಿರ ಜನ ಸೇರಿಕೊಂಡರೆ ಕೊಳೆಗೇರಿಯಾಗದೆ ಇರಲು ಹೇಗೆ ಸಾಧ್ಯ? ಇರುವ ಒಂದೊಂದು ಕೊಠಡಿಯಲ್ಲಿ ನೂರಾರು ಮಂದಿ ಸೇರಿಕೊಂಡಿದ್ದಾರೆ. ಹೆಚ್ಚಿನವರು ಬಯಲಲ್ಲಿ ಡೇರೆ ಹಾಕಿಕೊಂಡಿದ್ದಾರೆ. ಸರ್ಕಾರ ನಿರಾಶ್ರಿತರಿಗಾಗಿ ಅಕ್ಕಿ-ಬೇಳೆ, ಆಲೂಗಡ್ಡೆ, ಉಪ್ಪು, ಖಾರ ಬಿಟ್ಟರೆ ಬೇರೇನೂ ಕೊಡುತ್ತಿಲ್ಲ. ಉರುವಲು ಕೂಡಾ ಇಲ್ಲದ ಸ್ಥಿತಿಯಲ್ಲಿ ಮಹಿಳೆಯರು ಹಳೆಬಟ್ಟೆಗಳನ್ನು ಒಲೆಗೆ ತುರುಕಿ ಅನ್ನ ಬೇಯಿಸುತ್ತಿದ್ದರು. ನಾಲ್ಕು ಕಡೆಗಳಿಂದಲೂ ಟಾರ್ಪೊಲಿನ್ ಮುಚ್ಚಿದ ಐದಾರು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸಲಾಗಿದ್ದರೂ ಮಲದ ಗುಂಡಿ ತುಂಬಿ ಸುತ್ತ ಗಬ್ಬುವಾಸನೆ. ಮಳೆ ಬಂದಿರುವ ಕಾರಣ ಮೈದಾನದ ತುಂಬ ಕೆಸರು ನೀರು.

ಈ ನರಕದಿಂದ ಶೀಘ್ರದಲ್ಲಿಯೇ ಮುಕ್ತಿ ಪಡೆಯುವ ಭರವಸೆಯೂ ಇಲ್ಲಿರುವ ಹೆಚ್ಚಿನವರಲ್ಲಿ ಇಲ್ಲ. ಭೂದಾಖಲೆ ಹೊಂದಿರುವ ನಿರಾಶ್ರಿತರಿಗಷ್ಟೇ ಮೊದಲ ಹಂತದಲ್ಲಿ ಪುನರ್ವಸತಿ ಕಲ್ಪಿಸಲಾಗುವುದು ಎಂದು ಬೋಡೊ ಪ್ರಾಂತೀಯ ಮಂಡಳಿ (ಬಿಟಿಸಿ) ಮತ್ತು ರಾಜ್ಯ ಸರ್ಕಾರ ಘೋಷಿಸಿದೆ. ರೇಷನ್ ಕಾರ್ಡ್ ಮತ್ತು ಮತದಾರರ ಚೀಟಿಗಳನ್ನು ಪರಿಗಣಿಸಬೇಕೆಂಬ ಬೇಡಿಕೆ ಇದ್ದರೂ ಬಿಟಿಸಿ ಇದನ್ನು ವಿರೋಧಿಸುತ್ತಿದೆ.

'ರಿಕ್ಷಾ ಚಲಾನೆವಾಲೆಕೇ ಪಾಸ್ ಮಾಟಿಬಿಟಿ ಕಹಾಂ ಸೇ ಹೋಗಾ. ಮೇರಾ ರೇಷನ್ ಕಾರ್ಡ್ ಬಿ ಘರ್ ಕೆ ಸಾಥ್ ಜಲ್‌ಗಯಾ' (ಸೈಕಲ್ ರಿಕ್ಷಾ ಓಡಿಸುತ್ತಿರುವವನ ಹತ್ತಿರ ಹೊಲ-ಗದ್ದೆ ಹೇಗೆ ಇರಲು ಸಾಧ್ಯ? ನನ್ನಲ್ಲಿದ್ದ ರೇಷನ್ ಕಾರ್ಡ್ ಕೂಡಾ ಈ ಬಾರಿ ಮನೆಯ ಜತೆ ಸುಟ್ಟುಹೋಗಿದೆ) ಎಂದು ಹೇಳುತ್ತಿರುವ ಯುಸೂಫ್ ಅಲಿಯ ಹತ್ತಿರ ಇರುವುದು ಅರ್ಧ ಸುಟ್ಟುಹೋದ ಹಳೆಯ ರೇಷನ್ ಕಾರ್ಡ್ ಮಾತ್ರ. ೧೯೯೮ರ ಗಲಭೆಯಲ್ಲಿ ಇದೇ ರೀತಿ ದುಷ್ಕರ್ಮಿಗಳು ಮನೆ ಸುಟ್ಟು ಹಾಕಿದಾಗ ಕಷ್ಟಪಟ್ಟು ಅರ್ಧ ಸುಟ್ಟ ರೇಷನ್ ಕಾರ್ಡ್ ರಕ್ಷಿಸಿಟ್ಟುಕೊಂಡಿದ್ದ ಯುಸೂಪ್ ಅಲಿಗೆ ಈ ಬಾರಿ ಅದನ್ನೂ ಉಳಿಸಿಕೊಳ್ಳಲಾಗಲಿಲ್ಲವಲ್ಲ ಎನ್ನುವ ಕೊರಗು ಕಾಡುತ್ತಿದೆ.

'ಆದಾ ಜಲಾ ಹುವಾ ಪುರಾನ ರೇಷನ್ ಕಾರ್ಡ್ ಚಲೇಗಾ ಕ್ಯಾ?' (ಅರ್ಧ ಸುಟ್ಟ ಹಳೆಯ ರೇಷನ್ ಕಾರ್ಡ್ ಒಪ್ಪಿಕೊಳ್ಳಬಹುದೇ?) ಎಂದು ಆಸೆ ಕಂಗಳಿಂದ ನೋಡುತ್ತಾ ಯುಸೂಪ್ ನನ್ನನ್ನು ಪ್ರಶ್ನಿಸಿದ. ಹೇಳುವುದಕ್ಕೇನು, ಭರವಸೆಯೇ ಬದುಕು ಅಲ್ಲವೇ? 'ಚಲೇಗಾ' ಎಂದೆ. ಆತನ ಬತ್ತಿಹೋದ ಮುಖದಲ್ಲಿ ಸಣ್ಣಗೆ ನಗು ಮಿಂಚಿ ಮಾಯವಾಯಿತು.

#-#-#

'ಆರು ತಿಂಗಳ ಹಿಂದೆಯೇ ಗಲಭೆಯ ಸೂಚನೆ ರಾಜ್ಯ ಸರ್ಕಾರಕ್ಕೆ ಸಿಕ್ಕಿತ್ತು' ಎಂದು ಅಖಿಲ ಬೋಡೊ ವಿದ್ಯಾರ್ಥಿ ಸಂಘದ (ಎಬಿಎಸ್‌ಯು) ಪ್ರಧಾನ ಕಾರ್ಯದರ್ಶಿ ಜಿರೋನಿ ಬಸುಮತಾರಿ ಹೇಳಿದಾಗ, ಇದೇ ಮಾತನ್ನು ಬೇರೆಲ್ಲೋ ಕೇಳಿದ್ದೆನಲ್ಲಾ ಎಂದು ತಕ್ಷಣ ನನಗನಿಸಿತ್ತು.

ಆಗ ಹಿಂದಿನ ದಿನವಷ್ಟೇ ಗುವಾಹಟಿಯಲ್ಲಿ ಅಖಿಲ ಅಸ್ಸಾಂ ಅಲ್ಪಸಂಖ್ಯಾತ ವಿದ್ಯಾರ್ಥಿ ಸಂಘದ (ಎಎಎಂಎಸ್‌ಯು) ಕೇಂದ್ರ ಸಮಿತಿ ಅಧ್ಯಕ್ಷ ಅಬ್ದುರ್ ರಹೀಮ್

ಅಹ್ಮದ್ ಹೇಳಿದ್ದು ನೆನಪಾಯಿತು. ಅಸ್ಸಾಂನಲ್ಲಿ ಇತ್ತೀಚೆಗೆ ನಡೆದ ಗಲಭೆಯಲ್ಲಿ ಪರಸ್ಪರ ವಿರುದ್ಧ ಸ್ಥಾನಗಳಲ್ಲಿದ್ದ ಈ ವಿದ್ಯಾರ್ಥಿ ಸಂಘಟನೆಗಳ ನಾಯಕರಿಬ್ಬರೂ ಹೇಳಿದ್ದು ಸತ್ಯ. ಇದನ್ನು ಅಸ್ಸಾಂನ ಅನೇಕ ಸಾಮಾಜಿಕ ಕಾರ್ಯಕರ್ತರು ಕೂಡಾ ಒಪ್ಪಿಕೊಳ್ಳುತ್ತಾರೆ. ಸಾಮಾನ್ಯ ಜನರಿಗಲ್ಲದಿದ್ದರೂ ರಾಜಕೀಯ ನಾಯಕರು ಮತ್ತು ಸರ್ಕಾರದ ಉನ್ನತ ಸ್ಥಾನಗಳಲ್ಲಿರುವವರಿಗೆ ಸ್ಫೋಟಗೊಳ್ಳಲಿರುವ ಘರ್ಷಣೆಯ ಮುನ್ಸೂಚನೆ ಇತ್ತು.

ಇದಕ್ಕೆ ಮುಖ್ಯ ಕಾರಣ ಕಳೆದ ಮಾರ್ಚ್ ಎರಡರಂದು ಕಾಮರೂಪ ಜಿಲ್ಲೆಯ ಅಮಿನ್‌ಗಾಂವ್‌ನಲ್ಲಿ ಏರ್ಪಡಿಸಿದ್ದ ಬೃಹತ್ ವಿದ್ಯಾರ್ಥಿ ಸಮಾವೇಶದಲ್ಲಿ 'ಎಬಿಎಸ್‌ಯು' ನಾಯಕರು ಪ್ರತ್ಯೇಕ ಬೋಡೋಲ್ಯಾಂಡ್ ಸ್ಥಾಪನೆಗಾಗಿ ಹೋರಾಟ ಪ್ರಾರಂಭಿಸಲು ಮಾಡಿರುವ ಪ್ರತಿಜ್ಞೆ. 'ಬೋಡೊಫಾ' ಎಂದೇ ಕರೆಯಲಾಗುವ ದಿವಂಗತ ಉಪೇಂದ್ರನಾಥ ಬ್ರಹ್ಮ ಅವರು ಎಬಿಎಸ್‌ಯು ಸ್ಥಾಪಿಸಿದ್ದು ೧೯೬೭ರಲ್ಲಿ. ಅದರ ಇಪ್ಪತ್ತೈದನೆ ವರ್ಷಾಚರಣೆಗಾಗಿ 'ಎಬಿಎಸ್‌ಯು' ಈ ಸಮಾವೇಶ ಏರ್ಪಡಿಸಿತ್ತು. 'ಬೋಡೊಲ್ಯಾಂಡ್ ನಮ್ಮ ಜನ್ಮಸಿದ್ಧ ಹಕ್ಕು, ಅದಕ್ಕಾಗಿ ಪ್ರಾಣತ್ಯಾಗಕ್ಕೂ ಸಿದ್ಧ ಇದ್ದೇವೆ. ಬೋಡೊಲ್ಯಾಂಡ್ ಕೊಡಿ ಇಲ್ಲದಿದ್ದರೆ ನಮ್ಮ ಜೀವ ತೆಗೆದುಕೊಳ್ಳಿ' ಎಂದು ಎಬಿಎಸ್‌ಯು ಅಧ್ಯಕ್ಷ ಪ್ರಮೋದ್ ಬೋರಾ ಗುಡುಗಿದ್ದರು. ಇತ್ತೀಚೆಗೆ ಕೇಂದ್ರ ಸರ್ಕಾರ ಪ್ರತ್ಯೇಕ ತೆಲಂಗಾಣ ರಚನೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದನ್ನೂ ಅವರು ಉಲ್ಲೇಖಿಸಿದ್ದರು.

'ಎಬಿಎಸ್‌ಯು' ಎಚ್ಚರಿಕೆ ನೀಡಿದ್ದು ರಾಜ್ಯಸರ್ಕಾರಕ್ಕಾದರೂ ಇದರಿಂದ ತಕ್ಷಣ ಎಚ್ಚೆತ್ತುಕೊಂಡದ್ದು ಪ್ರತ್ಯೇಕ ರಾಜ್ಯ ಸ್ಥಾಪನೆಯನ್ನು ಪ್ರಾರಂಭದಿಂದಲೂ ವಿರೋಧಿಸುತ್ತಾ ಬಂದಿರುವ ಎಎಎಂಎಸ್‌ಯು ಮತ್ತಿತರ ಬೋಡೊ ವಿರೋಧಿ ಸಂಘಟನೆಗಳು.

'ಆರು ತಿಂಗಳ ಹಿಂದೆಯೇ ಸರ್ಕಾರಕ್ಕೆ ಗೊತ್ತಿತ್ತು' ಎಂದು ಅಬ್ದುರ್ ರಹೀಮ್ ಅಹ್ಮದ್ ಹೇಳಲು ಇದು ಕಾರಣ. ಇದಕ್ಕೊಂದು ಹಿನ್ನೆಲೆ ಇದೆ. ಎಬಿಎಸ್‌ಯು ಆರುವರ್ಷಗಳಿಂದ ನಡೆಸುತ್ತಾ ಬಂದಿದ್ದ ಹೋರಾಟವನ್ನು ೧೯೯೩ರಲ್ಲಿ ಬೋಡೊ ಸ್ವಾಯತ್ತ ಮಂಡಳಿ ರಚನೆಗಾಗಿ ಸರ್ಕಾರದ ಜತೆಗೆ ಒಪ್ಪಂದ ಮಾಡಿಕೊಂಡ ನಂತರ ಕೈಬಿಟ್ಟಿತ್ತು. ಈ ಒಪ್ಪಂದದ ಬಗ್ಗೆ ಬೋಡೊಗಳು ಹೊಂದಿರುವ ಅಸಮಾಧಾನ ಬಳಸಿಕೊಂಡ ಬೋಡೊ ಲಿಬರೇಷನ್ ಟೈಗರ್ (ಬಿಎಲ್‌ಟಿ) ಸಶಸ್ತ್ರಹೋರಾಟದ ಮೂಲಕ ಪ್ರತ್ಯೇಕ ರಾಜ್ಯ ಸ್ಥಾಪನೆಯ ಪ್ರಯತ್ನವನ್ನು ಮುಂದುವರಿಸಿತ್ತು.

೨೦೦೩ರಲ್ಲಿ ಬಿಎಲ್‌ಟಿ ಜತೆ ಒಪ್ಪಂದ ಮಾಡಿಕೊಂಡ ಕೇಂದ್ರ ಸರ್ಕಾರ ಸಂವಿಧಾನದ ಆರನೇ ಶೆಡ್ಯೂಲ್‌ನಡಿ 'ಬೋಡೊ ಪ್ರಾಂತೀಯ ಮಂಡಳಿ'ಯನ್ನು ರಚಿಸಿತ್ತು.

ಇದಾದ ನಂತರವೂ ಪ್ರತ್ಯೇಕರಾಜ್ಯಸ್ಥಾಪನೆಗೆ ಹೋರಾಟ ನಡೆಸುತ್ತಿರುವ ಹತ್ತಾರು ಬೋಡೊ ಸಂಘಟನೆಗಳು ಹಿಂಸಾಚಾರ ಮುಂದುವರಿಸುತ್ತಾ ಬಂದಿವೆ. ಇವುಗಳಲ್ಲಿ ಮುಖ್ಯವಾದುದು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಬೋಡೊಲ್ಯಾಂಡ್ ರಂಗ (ಎನ್‌ಡಿಎಫ್‌ಬಿ). ಇತ್ತೀಚೆಗೆ ಇದು ಇಬ್ಭಾಗವಾಗಿದ್ದು ಇದರ ಒಂದು ಬಣದ ನಾಯಕ ರಂಜನ್ ದೈಮರಿ ಜೈಲಲ್ಲಿದ್ದಾನೆ. ಧಿರೇನ್ ಬೋರೊ ನೇತೃತ್ವದ ಇನ್ನೊಂದು ಬಣ

ರಾಜ್ಯ ಸರ್ಕಾರದ ಜತೆ ಕದನವಿರಾಮಕ್ಕಾಗಿ ಮಾತುಕತೆ ನಡೆಸುತ್ತಿದೆ. ಇದರ ಜತೆ ಬೋಡೊ ಸಂಘಟನೆಗಳ ಒಕ್ಕೂಟದ ರೂಪದಲ್ಲಿ 'ಬೋಡೊ ರಾಷ್ಟ್ರೀಯ ಪರಿಷತ್' ಸ್ಥಾಪನೆಯಾಗಿದೆ. ಬಿಎಲ್‌ಟಿ ಒಂಬತ್ತು ವರ್ಷಗಳ ಹಿಂದೆಯೇ ಶಸ್ತ್ರತ್ಯಾಗಮಾಡಿದ್ದರೂ ಆ ಸಂಘಟನೆಯ ಅನೇಕ ನಾಯಕರು ಈಗಲೂ ಪ್ರತ್ಯೇಕ ರಾಜ್ಯ ರಚನೆಗಾಗಿ ಹಿಂಸಾಚಾರದಲ್ಲಿ ನಿರತರಾಗಿದ್ದಾರೆ.

ಈ ಬೆಳವಣಿಗೆಗಳನ್ನೆಲ್ಲ ಗಮನಿಸುತ್ತಿದ್ದ 'ಎಬಿಎಸ್‌ಯು' ಆರು ತಿಂಗಳ ಹಿಂದೆ ಬೋಡೊಲ್ಯಾಂಡ್ ಸ್ಥಾಪನೆಯ ಹೋರಾಟಕ್ಕೆ ಜೀವ ತುಂಬುವ ನಿರ್ಧಾರ ಮಾಡಿತ್ತು. ಬೋಡೊ ಪ್ರಾಂತೀಯ ಮಂಡಳಿಯಲ್ಲಿ ಅಧಿಕಾರದಲ್ಲಿರುವ ಹಗರಮ ಮಹಿಲೆರಿ ನಾಯಕತ್ವದ ಬೋಡೊಲ್ಯಾಂಡ್ ಜನತಾ ರಂಗ (ಬಿಪಿಎಫ್) ಕೂಡಾ ಎಬಿಎಸ್‌ಯುಗೆ ಬೆಂಬಲ ನೀಡುತ್ತಿದೆ. ಬೋಡೊ ಸಂಘಟನೆಗಳು ಕೇವಲ ಪ್ರತ್ಯೇಕ ರಾಜ್ಯ ರಚನೆಗಾಗಿ ಮಾತ್ರವಲ್ಲ ಬೋಡೊ ಸಮುದಾಯದ ನಾಯಕತ್ವಕ್ಕಾಗಿಯೂ ಹೋರಾಟ ನಡೆಸುತ್ತಿವೆ. ಬೋಡೊಗಳಿಗೆ ಯಾರು ಹೆಚ್ಚು ನಿಷ್ಠರು ಎನ್ನುವುದನ್ನು ತೋರಿಸಿಕೊಳ್ಳುವ ಪೈಪೋಟಿಯಲ್ಲಿವೆ.

೨೫ವರ್ಷಗಳ ಹಿಂದೆ ಎಬಿಎಸ್‌ಯು ಪ್ರತ್ಯೇಕ ರಾಜ್ಯದ ಕೂಗು ಹಾಕಿದಾಗ ಹೆಚ್ಚಿನ ವಿರೋಧ ಇರಲಿಲ್ಲ. ಅದರ ನಂತರದ ದಿನಗಳಲ್ಲಿಯೂ ಬಿಎಲ್‌ಟಿಗಳ ಹಿಂಸಾತ್ಮಕ ಹೋರಾಟಕ್ಕೆ ಬೆದರಿದ್ದ ಇತರ ಸಮುದಾಯಗಳು ಪ್ರತಿರೋಧಿಸುವ ಧೈರ್ಯ ಮಾಡಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ. ಎಬಿಎಂಎಸ್‌ಯು, ಕೋಚ್-ರಾಜ್‌ಬೋಗ್ಸಿ, ಬಂಗಾಲಿ, ಗೂರ್ಖಾ, ಚಹಾ ಬುಡಕಟ್ಟು ಸೇರಿದಂತೆ ಬೋಡೊಲ್ಯಾಂಡ್ ವಿರೋಧಿಸುತ್ತಿರುವ ಹಲವಾರು ಸಂಘಟನೆಗಳು ಸೇರಿ 'ಬೋಡೊ ವಿರೋಧಿ ರಕ್ಷಣಾ ಸಮಿತಿ' (ಎನ್‌ಬಿಪಿಎಫ್) ಮಾಡಿಕೊಂಡಿವೆ. ಎಬಿಎಸ್‌ಯು ಪ್ರತ್ಯೇಕ ರಾಜ್ಯ ಸ್ಥಾಪನೆಯ ಹೋರಾಟ ಪುನರಾರಂಭಿಸುವ ಸೂಚನೆ ನೀಡಿದ ನಂತರ 'ಎನ್‌ಬಿಪಿಎಫ್' ಕಳೆದ ಆರು ತಿಂಗಳುಗಳಿಂದ ಸರಣಿ ಪ್ರತಿಭಟನೆಗಳನ್ನು ನಡೆಸಿವೆ. ಬೋಡೊ ನಂತರದ ಇನ್ನೊಂದು ಪ್ರಮುಖ ಬುಡಕಟ್ಟು ಸಮುದಾಯವಾದ ರಾಜ್‌ಬೋಗ್ಸಿಯ ಸಂಘಟನೆ ಕೂಡಾ ಇತ್ತೀಚೆಗೆ ಬಲಗೊಳ್ಳುತ್ತಿದೆ.

ಅತ್ತರ್ ವ್ಯಾಪಾರಿಯ ರಾಜಕೀಯ ಪ್ರವೇಶ: ಇದೇ ವೇಳೆ ಮೌಲಾನ ಬದ್ರುದ್ದೀನ್ ಅಜ್ಮಲ್ ಎಂಬ ಅತ್ತರ್ ವ್ಯಾಪಾರಿಯ ರಾಜಕೀಯ ಪ್ರವೇಶವಾಗಿದೆ. ಅಸ್ಸಾಂನ ಜನಸಂಖ್ಯೆಯಲ್ಲಿ ಶೇಕಡಾ ೩೦ರಷ್ಟು ಮುಸ್ಲಿಮರಿದ್ದರೂ ತಮ್ಮದೇ ರಾಜಕೀಯ ಪಕ್ಷ ರಚನೆ ಅವರಿಗೆ ಸಾಧ್ಯವಾಗಿರಲಿಲ್ಲ. ೨೦೦೫ರಲ್ಲಿ ಸುಪ್ರಿಂ ಕೋರ್ಟ್ ವಿವಾದಾತ್ಮಕ 'ಅಕ್ರಮ ವಲಸಿಗರ (ನ್ಯಾಯಮಂಡಳಿ ಮೂಲಕ ನಿರ್ಧಾರಿಸುವ) ಕಾಯಿದೆ' ರದ್ದುಪಡಿಸಿದಾಗ ವ್ಯಕ್ತವಾದ ವಿರೋಧವನ್ನು ಬಳಸಿಕೊಂಡು ರಾಜಕೀಯಕ್ಕೆ ಬಂದ ಅಜ್ಮಲ್ ಮೊದಲು ಸ್ಥಾಪಿಸಿದ್ದು 'ಅಖಿಲ ಅಸ್ಸಾಂ ಸಂಯುಕ್ತ ರಂಗ'. ಈಗ ಅದನ್ನು 'ಅಖಿಲ ಭಾರತ ಅಸ್ಸಾಂ ಸಂಯುಕ್ತರಂಗ' ಎಂದು ಬದಲಿಸಲಾಗಿದೆ. ಈ ಪಕ್ಷ ೨೦೦೬ರಲ್ಲಿ ಎದುರಿಸಿದ ಮೊದಲ ವಿಧಾನಸಭಾ ಚುನಾವಣೆಯಲ್ಲಿ ಹತ್ತುಸ್ಥಾನಗಳನ್ನು ಗೆದ್ದಿತ್ತು.

೨೦೦೯ರಲ್ಲಿ ಶೇಕಡಾ ೭೦ರಷ್ಟು ಮುಸ್ಲಿಮರು ಇರುವ ದುಬ್ರಿ ಲೋಕಸಭಾ

ಕ್ಷೇತ್ರದಿಂದ ಆಯ್ಕೆಯಾಗಿದ್ದರು. ೨೦೧೧ರ ವಿಧಾನಸಭಾ ಚುನಾವಣೆಯಲ್ಲಿ ಅಜ್ಮಲ್ ಪಕ್ಷ ೧೮ ಸ್ಥಾನಗಳಲ್ಲಿ ಗೆದ್ದು ಕಾಂಗ್ರೆಸ್ ನಂತರದ ಎರಡನೆ ಸ್ಥಾನ ಪಡೆದಿತ್ತು. ಅಜ್ಮಲ್ ಅವರು ಈಗ ಅಸ್ಸಾಂನ ಮುಸ್ಲಿಮರ ಅದರಲ್ಲೂ ಮುಖ್ಯವಾಗಿ ಪೂರ್ವಬಾಂಗ್ಲಾ ಮೂಲದ ಮುಸ್ಲಿಮರ ಪ್ರಶ್ನಾತೀತ ನಾಯಕ. ಬೋಡೊಗಳ ಪ್ರತ್ಯೇಕ ರಾಜ್ಯದ ಹೋರಾಟಕ್ಕೆ ಎದುರಾಗಿರುವ ದೊಡ್ಡ ಸವಾಲು ಅಜ್ಮಲ್ ನೇತೃತ್ವದ ಎಐಡಿಯುಎಫ್.

ಕಳೆದ ಮಾರ್ಚ್‌ನಲ್ಲಿ 'ಎಬಿಎಸ್‌ಯು' ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಪುನರುಚ್ಚರಿಸಿದ ಕೆಲವು ದಿನಗಳ ನಂತರ ಬದ್ರುದ್ದೀನ್ ಅಜ್ಮಲ್ 'ಬೋಡೊ ಪ್ರಾಂತೀಯ ಮಂಡಳಿ' ವಿಸರ್ಜಿಸುವಂತೆ ಕರೆ ನೀಡಿ ವಿವಾದ ಸೃಷ್ಟಿಸಿದ್ದರು.

ನಾಲ್ಕು ಜಿಲ್ಲೆಗಳನ್ನೊಳಗೊಂಡ ಪ್ರಾಂತೀಯ ಮಂಡಳಿಯಲ್ಲಿ ಬೋಡೊಗಳು ಕೇವಲ ಶೇಕಡಾ ೩೦ರಷ್ಟು ಮಾತ್ರ ಇರುವುದರಿಂದ ಪ್ರತ್ಯೇಕ ರಾಜ್ಯದ ಬೇಡಿಕೆಯ ಮಾತುಕತೆಯಲ್ಲಿ ಬೋಡೊಗಳ ಜತೆ ಇತರರ ಅಭಿಪ್ರಾಯವನ್ನೂ ಪಡೆಯಬೇಕೆಂದು ಅವರು ಒತ್ತಾಯಿಸುತ್ತಲೇ ಬಂದಿದ್ದಾರೆ. ಬೋಡೊ ನಾಯಕತ್ವವನ್ನು ಒಪ್ಪಿಕೊಳ್ಳದೆ ಇದ್ದರೂ ವಿರೋಧಿಸಲಾಗದ ಅಸಹಾಯಕತೆಯಿಂದ ತೊಳಲಾಡುತ್ತಿದ್ದ ಮುಸ್ಲಿಮರು ಸೇರಿದಂತೆ ಇತರ ಸಮುದಾಯಗಳಿಗೆ ಬದ್ರುದ್ದೀನ್ ಅಜ್ಮಲ್ ರಾಜಕೀಯ ಬಲ ತಂದುಕೊಟ್ಟಿದೆ. ಇನ್ನೊಂದೆಡೆ ತನ್ನ ಮತಬ್ಯಾಂಕ್ ಆಗಿದ್ದ ಮುಸ್ಲಿಮ್ ಮತದಾರರನ್ನು ಸೆಳೆಯುತ್ತಿರುವ 'ಎಐಯುಡಿಎಫ್' ಬಗ್ಗೆ ಕಾಂಗ್ರೆಸ್ ಕೂಡಾ ಜಾಗೃತಗೊಂಡಿದೆ.

ಶೀತಲವಾಗಿ ನಡೆಯುತ್ತಿದ್ದ ಈ ರಾಜಕೀಯ ಸಂಘರ್ಷದ ಕರಿನೆರಳು ಕಳೆದ ಜುಲೈ ಆರರಂದು ಕೋಕ್ರಝಾರ್‌ನಲ್ಲಿ ಇಬ್ಬರು ಮುಸ್ಲಿಂ ಯುವಕರ ಹತ್ಯೆಯಿಂದ ಪ್ರಾರಂಭಗೊಂಡು ೭೦ಕ್ಕೂ ಹೆಚ್ಚು ಜೀವಗಳನ್ನು ಬಲಿತೆಗೆದುಕೊಂಡು ನಾಲ್ಕು ಲಕ್ಷಕ್ಕಿಂತಲೂ ಹೆಚ್ಚು ಜನರನ್ನು ನಿರಾಶ್ರಿತರನ್ನಾಗಿ ಮಾಡಿದ ಗಲಭೆಯ ಹಿಂದೆ ಇದೆ.

ಅನಾಹುತದ ಮುನ್ಸೂಚನೆ ರಾಜ್ಯಸರ್ಕಾರ ಮತ್ತು ಬೋಡೊ ಪ್ರಾಂತೀಯ ಮಂಡಳಿಗೆ ಮಾತ್ರವಲ್ಲ ಬೋಡೊಗಳನ್ನು ವಿರೋಧಿಸುತ್ತಿರುವ ಸಂಘಟನೆಗಳ ನಾಯಕರಿಗೂ ಇತ್ತು. ಎಲ್ಲವನ್ನೂ ಕಳೆದುಕೊಂಡು ಬೀದಿಗೆ ಬಿದ್ದಿರುವ ಅಮಾಯಕ ಮುಸ್ಲಿಂ ಮತ್ತು ಬೋಡೊ ನಿರಾಶ್ರಿತರಿಗೆ ಮಾತ್ರ ತಿಳಿದಿರಲಿಲ್ಲ. ಅವರಿಗೂ ಸೂಚನೆ ಸಿಕ್ಕಿದ್ದರೆ ಒಂದಿಷ್ಟು ಕಷ್ಟ ಮತ್ತು ನಷ್ಟವನ್ನು ಕಡಿಮೆಮಾಡಿಕೊಳ್ಳುತ್ತಿದ್ದರೇನೋ?

#-#-#

ನಿಮ್ಮ ಮೇಲೆ ದಾಳಿ ಮಾಡಿದವರು ಎಷ್ಟು ಮಂದಿ ಇದ್ದರು? ಎಂಬ ನನ್ನ ಪ್ರಶ್ನೆಗೆ ಚಾಂದ್‌ಮರಿ ನಿರಾಶ್ರಿತರ ಶಿಬಿರದಲ್ಲಿದ್ದ ಬೋಡೊ ಯುವಕ ಸುದೇವ್ ನರ್ಜರಿ ತಕ್ಷಣ 'ಲಾಖ್, ಲಾಖ್ ತೇ' ಎಂದ.

ಅವನ ಮಾತುಗಳನ್ನು ನಾನು ಧ್ವನಿಮುದ್ರಿಸುತ್ತಿದ್ದುದನ್ನು ನೋಡಿದ ಜತೆಗಿದ್ದ ಸ್ಥಳೀಯ ನಾಯಕ 'ಲಾಖ್ ನಹೀಂ, ಹಜಾರ್ ಹೋಗಾ' ಎಂದು ತಿದ್ದಿದ. ಸಂಖ್ಯೆಗಳಿಗೆ ಇಲ್ಲಿ ಲೆಕ್ಕವೇ ಇಲ್ಲ. 'ಅಕ್ರಮ ವಲಸಿಗರ' ಬಗ್ಗೆ ಸರ್ಕಾರದಲ್ಲಿಯೇ ಲೆಕ್ಕ ಇಲ್ಲ ಎಂದ ಮೇಲೆ ಈ ಹುಡುಗನಲ್ಲಿ ಎಲ್ಲಿರಬೇಕು? 'ವೊ ಕೈಸೆ ತೇ?' ಎಂದು

ಕೇಳಿದರೂ 'ಬಾಂಗ್ಲಾದೇಶಿ ಜೈಸೆ ಲಂಬಾ,ಚೌಡಾ ತೆ' ಎನ್ನುವ ಉತ್ತರ ಅವನಲ್ಲಿ ಸಿದ್ದ ಇತ್ತು. ಸೈಕಲ್ ರಿಕ್ಷಾ ತುಳಿಯುವ ಬಡಕಲು ದೇಹದ ಬಾಂಗ್ಲಾದೇಶಿಯರನ್ನಷ್ಟೇ ನೋಡಿರುವ ನನಗೆ ಈ ಹುಡುಗ ವರ್ಣಿಸಿದ 'ಲಂಬಾ-ಚೌಡಾ' ಬಾಂಗ್ಲಾದೇಶಿಯ ಚಿತ್ರವನ್ನು ಕಲ್ಪಿಸಿಕೊಳ್ಳುವುದು ಸಾಧ್ಯ ಆಗಲಿಲ್ಲ.

ವಿಚಾರಣೆ ಇನ್ನಷ್ಟೇ ನಡೆಯಬೇಕಾಗಿದೆ. ಆದರೆ, ಗಲಭೆಗೆ 'ಅಕ್ರಮ ಬಾಂಗ್ಲಾದೇಶಿ ವಲಸಿಗ'ರೇ ಕಾರಣ ಎಂದು ಕೆಲವು ಮಾಧ್ಯಮಗಳು ಸೇರಿದಂತೆ ಬಹಳಷ್ಟು ಮಂದಿ ತೀರ್ಪು ನೀಡಿಯಾಗಿದೆ. ಇನ್ನೂ ಕೆಲವರು ಮುಂದುವರಿದು ಬಂಗಾಳಿ ಮುಸ್ಲಿಮರ ತಲೆಮೇಲೆ ನೇರವಾಗಿ ಆರೋಪ ಹೊರಿಸಿಬಿಡುತ್ತಾರೆ. ಇವರ ಪ್ರಕಾರ 'ಗಡ್ಡಬಿಟ್ಟವರು, ಬಂಗಾಳಿ ಮಾತನಾಡುವವರೆಲ್ಲರೂ ಅಕ್ರಮ ಮುಸ್ಲಿಂ ವಲಸಿಗರು'. ವಲಸೆ ಅಸ್ಸಾಂ ರಾಜ್ಯದ ಜ್ವಲಂತ ಸಮಸ್ಯೆ. ಇದು ಹಲವು ರಾಜಕೀಯ ಹೋರಾಟಗಳ ಬೆಂಕಿಗೆ ಹಿಂದೆಯೂ ಉರುವಲು ಆಗಿತ್ತು, ಈಗಲೂ?

ಬಾಂಗ್ಲಾದೇಶದ ಗಡಿಭಾಗಕ್ಕೆ ಹೊಂದಿಕೊಂಡಿರುವ ಅಸ್ಸಾಂನ ಜಿಲ್ಲೆಗಳ ಜನಸಂಖ್ಯೆ, ಅದರ ವೃದ್ಧಿದರ ಮತ್ತು ಜನಸಂಖ್ಯೆಯಲ್ಲಿ ಮುಸ್ಲಿಮರ ಪ್ರಮಾಣವನ್ನು ನೋಡಿದವರು ಯಾರೂ ಬಾಂಗ್ಲಾದೇಶದಿಂದ ವಲಸೆ ನಡೆಯುತ್ತಿರುವುದನ್ನು ನಿರಾಕರಿಸಲು ಸಾಧ್ಯವೇ ಇಲ್ಲ. ಆದರೆ ಇವರೆಲ್ಲರೂ ಕಳೆದ ಎರಡು ಮೂರು ದಶಕಗಳಲ್ಲಿ ಇಲ್ಲವೇ ೧೯೭೧ರ ಬಾಂಗ್ಲಾಯುದ್ಧದ ನಂತರವೇ ಬಂದವರೆಂದು ಹೇಳುವುದಕ್ಕೆ ಯಾವ ಆಧಾರಗಳೂ ಇಲ್ಲ. ಅಸ್ಸಾಂನ ವಲಸೆಗೆ ಹೆಚ್ಚೂ ಕಡಿಮೆ ಎರಡು ದಶಕಗಳ ಇತಿಹಾಸ ಇದೆ. ದೇಶದ ಉಳಿದ ಭಾಗಗಳಿಗೆ ಹೋಲಿಸಿದರೆ ಈಗಲೂ ಅತೀ ಹೆಚ್ಚಿನ ವಲಸಿಗರು ಇರುವುದು ಈ ರಾಜ್ಯದಲ್ಲಿ. ಇದಕ್ಕೆ ಐತಿಹಾಸಿಕವಾದ ಕಾರಣಗಳಿವೆ.

೧೮೨೬ರಲ್ಲಿ ಆಗಿನ ಬರ್ಮಾವನ್ನು ಸೋಲಿಸಿ ಅಸ್ಸಾಂ ಅನ್ನು ತಮ್ಮ ಆಳ್ವಿಕೆಗೆ ಒಳಪಡಿಸಿದ ನಂತರ ಬ್ರಿಟಿಷರು ಪೂರ್ವಬಾಂಗ್ಲಾದಿಂದ ಬಂಗಾಳಿ ಮುಸ್ಲಿಮರನ್ನು ಇಲ್ಲಿಗೆ ಕರೆತಂದಿದ್ದರು.

ವಲಸೆಗೆ ಇನ್ನೊಂದು ಕಾರಣ ಪೂರ್ವ ಬಂಗಾಳದಲ್ಲಿದ್ದ ಜಮೀನ್ದಾರಿ ವ್ಯವಸ್ಥೆ. ಜಮೀನ್ದಾರಿ ವ್ಯವಸ್ಥೆ ಇಲ್ಲದ ಅಸ್ಸಾಂ ಬಗ್ಗೆ ಸಹಜವಾಗಿಯೇ ಆಕರ್ಷಿತರಾಗಿ ಬಂದ ವಲಸಿಗರನ್ನು ಬ್ರಿಟಿಷರು ಕೂಡಾ ಬಳಸಿಕೊಂಡರು. ಹೊಲಗದ್ದೆಗಳು ಮತ್ತು ಚಹಾತೋಟಗಳಲ್ಲಿ ಕಡಿಮೆ ಸಂಬಳಕ್ಕೆ ಕೆಲಸಮಾಡುವ ಕೂಲಿಗಳು ಸಿಕ್ಕ ಕಾರಣಕ್ಕೆ ಬ್ರಿಟಿಷರು ಕೂಡಾ ಈ ವಲಸೆಗೆ ಉತ್ತೇಜನ ನೀಡಿದ್ದರು. ಆದರೆ ಸಾಮಾನ್ಯವಾಗಿ ಅನ್ಯ ಸಮುದಾಯಗಳನ್ನು ಜತೆಯಲ್ಲಿ ಸೇರಿಸಿಕೊಳ್ಳಲು ಇಷ್ಟಪಡದ ಬುಡಕಟ್ಟು ಸಮುದಾಯಗಳು ಬಂಗಾಳಿ ಮುಸ್ಲಿಮರ ಪ್ರವೇಶವನ್ನು ಪ್ರಾರಂಭದಿಂದಲೂ ಪ್ರತಿರೋಧಿಸುತ್ತಾ ಬಂದಿವೆ.

ಈ ಕಾರಣದಿಂದಾಗಿಯೇ ಪೂರ್ವ ಬಾಂಗ್ಲಾದಿಂದ ವಲಸೆ ಬಂದವರಲ್ಲಿ ಹೆಚ್ಚಿನವರು ನೆಲೆ ಕಂಡುಕೊಂಡದ್ದು ಬ್ರಹ್ಮಪುತ್ರದ ಮರಳು ತುಂಬಿರುವ ನಡುಗಡ್ಡೆಗಳಲ್ಲಿ. ಇದನ್ನು ಇಲ್ಲಿ 'ಚಾರ್' ಎನ್ನುತ್ತಾರೆ. ಬೇರೆಬೇರೆ ಗಡಿ ಜಿಲ್ಲೆಗಳಲ್ಲಿ ಹಂಚಿಹೋಗಿರುವ ಈ 'ಚಾರ್‌ಗಳು' ರಾಜ್ಯದ ಒಟ್ಟು ಪ್ರದೇಶದ ಶೇಕಡಾ ಆರರಷ್ಟಿದೆ. ಮುಸ್ಲಿಮರು ನಿರ್ಣಾಯಕ ಮತದಾರರಾಗಿರುವ ಹನ್ನೆರಡು ವಿಧಾನಸಭಾ ಕ್ಷೇತ್ರಗಳು ಇದೇ

ಭೂಪ್ರದೇಶದ ವ್ಯಾಪ್ತಿಯಲ್ಲಿವೆ.

ಈ ಪ್ರದೇಶದಲ್ಲಿ ಅಕ್ರಮವಾಗಿ ನುಸುಳಿಬರುವವರನ್ನು ತಡೆಯುವುದು ಕೂಡಾ ಕಷ್ಟ. ಬ್ರಹ್ಮಪುತ್ರಾ ನದಿಯನ್ನೇ ಗಡಿಯಾಗಿ ಹೊಂದಿರುವ ಧುಬ್ರಿಯೇ ಪ್ರಾರಂಭದಿಂದಲೂ ಪೂರ್ವಬಂಗಾಳದಿಂದ ಅಕ್ರಮವಾಗಿ ವಲಸೆ ಬರುವವರಿಗೆ ಸುಲಭದ ದಾರಿಯಾಗಿತ್ತು. ಧುಬ್ರಿ ಜಿಲ್ಲೆಯಲ್ಲಿ ಶೇಕಡಾ ೭೦ರಷ್ಟು ಮುಸ್ಲಿಂ ಜನಸಂಖ್ಯೆಗೆ ಅಕ್ರಮ ವಲಸೆ ಕೂಡಾ ಕಾರಣ ಎನ್ನುವುದು ನಿರ್ವಿವಾದ. ಬೋಡೊ ಪ್ರಾಂತೀಯ ಸ್ವಾಯತ್ತ ಜಿಲ್ಲೆಯ (ಬಿಟಿಎಡಿ) ವ್ಯಾಪ್ತಿಯಿಂದ ಹೊರಗೆ ಇರುವ ಧುಬ್ರಿಯ ಲೋಕಸಭಾ ಕ್ಷೇತ್ರದ ಸದಸ್ಯ ಎಐಯುಡಿಎಫ್ ನಾಯಕ ಬದ್ರುದ್ದೀನ್ ಅಜ್ಮಲ್. 'ಧುಬ್ರಿ ಗಡಿಯನ್ನು ಭದ್ರಗೊಳಿಸಲಿ ಅಕ್ರಮ ವಲಸೆ ಅರ್ಧದಷ್ಟು ನಿಂತುಬಿಡುತ್ತದೆ. ಆ ಧೈರ್ಯ ರಾಜ್ಯ ಸರ್ಕಾರಕ್ಕೆ ಇದೆಯೇ?' ಎಂದು ಎಬಿಎಸ್‌ಯು ನಾಯಕ ಜಿರೋನಿ ಬಸುಮತಾರಿ.

'ಕೆಲವೆಡೆ ೨೨ ಕಿ.ಮೀ.ಅಗಲ ಇರುವ ಬ್ರಹ್ಮಪುತ್ರ ನದಿಯಲ್ಲಿ ಮೀನು ಹಿಡಿಯುವ ನೆಪದಲ್ಲಿ ಭಾರತದ ಗಡಿಪ್ರವೇಶಿಸುವವರನ್ನು ಪತ್ತೆಹಚ್ಚುವುದು ಕೂಡಾ ಕಷ್ಟದ ಕೆಲಸ. ಒಮ್ಮಮ್ಮೆ ಈ ಮೀನುಗಾರರು ಬಾಂಗ್ಲಾ ಗಡಿಪ್ರದೇಶದಿಂದ ೪೦೦ ಕಿ.ಮೀ.ನಷ್ಟು ಒಳಭಾಗದಲ್ಲಿರುವ ಅಸ್ಸಾಂನ ತೇಜ್‌ಪುರದ ವರೆಗೂ ಬರುವುದುಂಟು. ಇಂತಹವರನ್ನು ತಡೆಯುವುದು ಕಷ್ಟದ ಕೆಲಸ' ಎನ್ನುತ್ತಾರೆ ನಿವೃತ್ತ ಬಿಎಸ್‌ಎಫ್ ಅಧಿಕಾರಿಯೊಬ್ಬರು.

ಬ್ರಹ್ಮಪುತ್ರ ನಡುಗಡ್ಡೆಗಳಲ್ಲಿದ್ದವರು ಇತ್ತೀಚಿನ ವರ್ಷಗಳಲ್ಲಿ ಒಳನಾಡನ್ನು ಪ್ರವೇಶಿಸಿದ್ದಾರೆ, ಶ್ರಮಜೀವಿಗಳಾದ ಮತ್ತು ಕಡಿಮೆ ಸಂಬಳಕ್ಕಾಗಿ ದುಡಿಯಲು ಸಿದ್ಧ ಇರುವ ಇವರನ್ನು ಸ್ಥಳೀಯರು ಪ್ರಾರಂಭದಲ್ಲಿ ಬರಮಾಡಿಕೊಂಡಿದ್ದರು. ಈ ವಲಸಿಗರು ಬುಡಕಟ್ಟು ಸಮುದಾಯಗಳಿಗೆ ಮೀಸಲಾಗಿದ್ದ ಮತ್ತು ಅರಣ್ಯ ಭೂಮಿಯನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿ ಅಲ್ಲಲ್ಲಿ ಘರ್ಷಣೆಗಳು ನಡೆಯುತ್ತಿದ್ದರೂ ಅದು ಗಂಭೀರ ಸ್ವರೂಪ ಪಡೆದಿರಲಿಲ್ಲ. ಎರಡು-ಮೂರು ದಶಕಗಳ ಹಿಂದೆ ವಲಸೆ ಬಂದವರಲ್ಲಿ ಹೆಚ್ಚಿನವರು ಈಗ ಅಸ್ಸಾಮಿಗಳಾಗಿ ಹೋಗಿದ್ದಾರೆ.

ಇವರಲ್ಲಿ ಶೇಕಡಾ ೯೦ಕ್ಕಿಂತಲೂ ಹೆಚ್ಚು ಮಂದಿ ಮಾತನಾಡುವುದು ಅಸ್ಸಾಮಿ. ಇವರಿಗೆ ಹಿಂದಿ, ಉರ್ದುವಿನ ಗಂಧಗಾಳಿ ಇಲ್ಲ. ಉಳಿದೆಲ್ಲ ರಾಜ್ಯಗಳಂತೆ ಇಂಗ್ಲಿಷ್ ಮಾಧ್ಯಮದ ಮೂಲಕ ಶಿಕ್ಷಣ ಪಡೆದ ಮೂಲ ಅಸ್ಸಾಮಿಗಳು ಅಸ್ಸಾಮಿ ಮರೆಯತೊಡಗಿದ್ದಾರೆ. ಶೇಕಡಾ ೩೦ರಷ್ಟು ಜನಸಂಖ್ಯೆ ಇರುವ ಬೋಡೊಗಳು ಬೋಡೊ ಭಾಷೆಯನ್ನು ಬಳಸುತ್ತಿದ್ದಾರೆ. ಇದರಿಂದಾಗಿ ಇಲ್ಲಿನ ಅಸ್ಸಾಮಿ ಮಾಧ್ಯಮದ ಸರ್ಕಾರಿ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮುಸ್ಲಿಮರು.

೨೦೦೧ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಅಸ್ಸಾಮಿ ಮಾತನಾಡುವವರು ಶೇಕಡಾ ೪೮.೮೦. ಆದರೆ ೭೪.೨೯ರಷ್ಟು ಮುಸ್ಲಿಮರು ನೆಲೆಸಿರುವ ರಾಜ್ಯದ ದುಬ್ರಿ ಜಿಲ್ಲೆಯಲ್ಲಿ ಅಸ್ಸಾಮಿ ಮಾತನಾಡುವವರ ಸಂಖ್ಯೆ ಶೇಕಡಾ ೭೦.೦೭. ಮುಸ್ಲಿಮರಾಗಿ ಹುಟ್ಟಿದ ತಪ್ಪಿಗೆ ಮತ್ತು ಬಂಗಾಳಿ ಮಾತನಾಡುತ್ತಿರುವ ಕಾರಣಕ್ಕೆ ಇವರೆಲ್ಲ 'ಬಾಂಗ್ಲಾದೇಶಿ' ಆಗಿಬಿಟ್ಟಿದ್ದಾರೆ.

ವಲಸೆ ರಾಜಕೀಯ ಚರ್ಚಾಕೂಟದ ವಿಷಯವಾಗಿದ್ದು ೧೯೭೧ರಲ್ಲಿ

ಬಾಂಗ್ಲಾಯುದ್ಧದ ನಂತರದ ದಿನಗಳಲ್ಲಿ. ಆ ಅವಧಿಯಲ್ಲಿ ವಲಸೆ ಬಂದ ಬಹಳಷ್ಟು ಬಾಂಗ್ಲಾ ಮುಸ್ಲಿಮರು ಹಿಂದಿರುಗದೆ ಉಳಿದುಕೊಂಡಿದ್ದರು. ಕಾಂಗ್ರೆಸ್ ಅವರನ್ನು ಮತಬ್ಯಾಂಕ್ ಮಾಡಿಕೊಂಡು ರಾಜಕೀಯ ಲಾಭ ಪಡೆಯುತ್ತಾ ಹೋಯಿತು.

'ವಿದೇಶಿಯರ' ವಿರುದ್ಧ ೧೯೭೯ರಲ್ಲಿ ಅಸ್ಸಾಂ ಚಳವಳಿ ಪ್ರಾರಂಭವಾದ ನಂತರ ವಲಸೆ ರಾಜಕೀಯ ಹೋರಾಟದ ಮುಂಚೂಣಿಗೆ ಬಂತು. ಈ ಚಳವಳಿಯ ಫಲವಾಗಿಯೇ ನಡೆದ ಅಸ್ಸಾಂ ಒಪ್ಪಂದದ ಅಂಗವಾಗಿ ಜಾರಿಗೆ ಬಂದ 'ಅಕ್ರಮ ವಲಸಿಗರನ್ನು ನ್ಯಾಯಮಂಡಳಿ ಮೂಲಕ ನಿರ್ಧರಿಸುವ ಕಾಯಿದೆ' (ಐಎಂಡಿಟಿ) ಬಂಗಾಳಿ ಮುಸ್ಲಿಮ್ ಮತ್ತು ಬೋಡೊಗಳ ನಡುವಿನ ಸಂಬಂಧದಲ್ಲಿ ಇನ್ನಷ್ಟು ಬಿರುಕು ಮೂಡಲು ಕಾರಣವಾಯಿತೇ ಹೊರತು ಸಮಸ್ಯೆಗೆ ಪರಿಹಾರವಾಗಲಿಲ್ಲ.

'೧೯೬೬ರಿಂದ ೧೯೭೧ರ ವರೆಗಿನ ಅವಧಿಯಲ್ಲಿ ವಲಸೆ ಬಂದವರನ್ನು ಗುರುತಿಸಿ ಮತದಾರರ ಪಟ್ಟಿಯಿಂದ ಅವರ ಹೆಸರನ್ನು ಕಿತ್ತುಹಾಕಬೇಕು ಮತ್ತು ೧೯೭೧ರ ನಂತರ ಬಂದವರನ್ನು ದೇಶದಿಂದ ಹೊರಗೆ ಹಾಕಬೇಕು' ಎಂದು ಈ ಕಾಯಿದೆ ಹೇಳಿದೆ. ಅಸ್ಸಾಂ ಗಣಪರಿಷತ್ ಸರ್ಕಾರವಾಗಲಿ, ಅದರ ನಂತರ ಬಂದ ಕಾಂಗ್ರೆಸ್ ಸರ್ಕಾರವಾಗಲಿ ಈ ಕಾಯಿದೆಯನ್ನು ಜಾರಿಗೊಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಲೇ ಇಲ್ಲ. ರಾಜ್ಯ ಸರ್ಕಾರವೇ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಿರುವ ಪ್ರಮಾಣಪತ್ರದ ಪ್ರಕಾರ ೧೯೮೫ರಿಂದ ೨೦೦೦ ವರ್ಷದ ವರೆಗಿನ ಹದಿನೈದು ವರ್ಷಗಳ ಅವಧಿಯಲ್ಲಿ ಐಎಂಡಿಟಿ ಕಾಯ್ದೆಯ ಪ್ರಕಾರ ೩,೧೦,೭೫೯ ವ್ಯಕ್ತಿಗಳನ್ನು ಗುರುತಿಸಲಾಗಿತ್ತು. ಅವರಲ್ಲಿ ೧೦,೦೧೫ ವ್ಯಕ್ತಿಗಳು ಅಕ್ರಮ ವಲಸಿಗರು ಎಂದು ತೀರ್ಮಾನಿಸಲಾಗಿತ್ತು. ಅಂತಿಮವಾಗಿ ದೇಶದಿಂದ ಹೊರಗೆ ಹಾಕಿದ್ದು೧,೪೮೧ ವ್ಯಕ್ತಿಗಳನ್ನು ಮಾತ್ರ. ಈ ಕಾಯ್ದೆಯ ವೈಫಲ್ಯವನ್ನು ಮನಗಂಡ ಸುಪ್ರೀಂಕೋರ್ಟ್ ೨೦೦೫ರಲ್ಲಿ ಅದನ್ನು ರದ್ದುಗೊಳಿಸಿತ್ತು. ಇದರ ನಂತರ ರಾಜ್ಯದ ಕಾಂಗ್ರೆಸ್ ಸರ್ಕಾರ ಹಳೆಯ 'ವಿದೇಶಿಯರು (ನ್ಯಾಯಮಂಡಳಿ) ಕಾಯ್ದೆ'ಗೆ ತಿದ್ದುಪಡಿ ಮಾಡಿ ಜಾರಿಗೊಳಿಸಿದರೂ ಇದರಿಂದ ಅಕ್ರಮ ವಲಸಿಗರ ಸಮಸ್ಯೆಯನ್ನು ಪರಿಹರಿಸಲು ಸಾಧ್ಯ ಆಗಿಲ್ಲ.

'೧೯೭೧ರ ವರ್ಷವನ್ನು ಆಧಾರವಾಗಿಟ್ಟುಕೊಂಡು ಅದರ ನಂತರ ವಲಸೆ ಬಂದವರನ್ನು ದೇಶದಿಂದ ಹೊರಗೆ ಹಾಕುವುದಕ್ಕೆ ನಮ್ಮ ಪೂರ್ಣ ಬೆಂಬಲ ಇದೆ. ಶಾಶ್ವತವಾಗಿ ಸಮಸ್ಯೆ ಪರಿಹಾರವಾದರೆ ಸಾಕು' ಎನ್ನುತ್ತಾರೆ ಅಖಿಲ ಅಸ್ಸಾಂ ಅಲ್ಪಸಂಖ್ಯಾತ ವಿದ್ಯಾರ್ಥಿ ಸಂಘದ ಅಧ್ಯಕ್ಷ ಅಬ್ದುರ್ ರಹೀಮ್. ಆದರೆ ಮುಂದಿನ ಚುನಾವಣೆಯ ಮೇಲೆ ಕಣ್ಣುನೆಟ್ಟು ಕೂತಿರುವ ಮುಖ್ಯಮಂತ್ರಿ ತರುಣ್ ಗೊಗೊಯ್ ಅವರಿಗೆ ವಿವಾದ ಅಷ್ಟೊಂದು ಸುಲಭದಲ್ಲಿ ಬಗೆಹರಿಯುವುದು ಬೇಕಾಗಿದ್ದಂತೆ ಕಾಣುವುದಿಲ್ಲ.

#–#–#

ಅಸ್ಸಾಂನಲ್ಲಿ 'ಮೂಲನಿವಾಸಿಗಳು' ಮತ್ತು 'ಹೊರಗಿನವರ' ನಡುವಿನ ಸಂಘರ್ಷಕ್ಕೆ ಶತಮಾನಗಳ ಇತಿಹಾಸ ಇದೆ. ಆದರೆ ಇದು ಕೋಮುಸ್ವರೂಪ

ಪಡೆದಿರುವುದು ಕಳೆದ ಕಾಲು ಶತಮಾನದಲ್ಲಿ, ಮುಖ್ಯವಾಗಿ ಅಸ್ಸಾಂ ಗಣಪರಿಷತ್ ಅಧಿಕಾರಕ್ಕೆ ಬಂದ ನಂತರದ ದಿನಗಳಲ್ಲಿ. 'ಹೊರಗಿನವರ' ಜತೆಗಿನ ಪ್ರಾರಂಭದ ಹೋರಾಟವನ್ನು 'ವಿದೇಶಿಯರ' ವಿರುದ್ಧ ತಿರುಗಿಸಿದ್ದ ಎಜಿಪಿ ನಂತರದ ದಿನಗಳಲ್ಲಿ ಬಾಂಗ್ಲಾದೇಶಿ ಮುಸ್ಲಿಮರನ್ನು ಗುರಿ ಮಾಡಿಕೊಂಡಿತ್ತು. ಇದಕ್ಕೆ ವ್ಯವಸ್ಥಿತವಾಗಿ ಕೋಮುಸಂಘರ್ಷದ ಬಣ್ಣಹಚ್ಚುವ ಪ್ರಯತ್ನ ಈಗ ನಡೆಯುತ್ತಿದೆ. ನೂರಾರು ಬುಡಕಟ್ಟುಗಳ ವೈವಿಧ್ಯಮಯ ಸಂಸ್ಕೃತಿಗಳ ತೊಟ್ಟಿಲಿನಂತಿರುವ ಅಸ್ಸಾಂ ರಾಜ್ಯ ಧರ್ಮದ ಆಧಾರದಲ್ಲಿ ಒಡೆಯತೊಡಗಿದೆ.

ರಾಜ್ಯದ ಪ್ರತಿ ಮೂವರಲ್ಲಿ ಒಬ್ಬ ಮುಸ್ಲಿಮ್ ಇರುವ ಈ ರಾಜ್ಯದಲ್ಲಿ ಮುಸ್ಲಿಮರ ಓಲೈಕೆಯ ಮೂಲಕ ರಾಜಕೀಯ ಲಾಭ ಪಡೆಯುವ ಪ್ರಯತ್ನವನ್ನು ಪ್ರಾರಂಭದಿಂದಲೇ ಮಾಡುತ್ತಾ ಬಂದಿದ್ದ ಕಾಂಗ್ರೆಸ್ ಅದರಲ್ಲಿ ಯಶಸ್ಸನ್ನೂ ಕಂಡಿದೆ. ಅದೇ ಕೋಮುವಾದದ ಬಾಣವನ್ನು ತಿರುಗಿ ಪ್ರಯೋಗಿಸುತ್ತಿರುವ ಬಿಜೆಪಿ ಮತ್ತು ಸಂಘ ಪರಿವಾರ ಮುಸ್ಲಿಮರನ್ನು ಏಕಾಂಗಿಗಳನ್ನಾಗಿ ಮಾಡಿ ಅವರ ವಿರುದ್ಧ ಉಳಿದವರನ್ನು ಎತ್ತಿಕಟ್ಟಿ ಇನ್ನೊಂದು ಮತಬ್ಯಾಂಕ್ ಮಾಡಿಕೊಳ್ಳುವ ಕಟ್ಟಲು ಹೊರಟಿದೆ. ತಮಗೆ ವಿರುದ್ಧವಾದ ಈ ಬೆಳವಣಿಗೆಗಳಿಂದಾಗಿ ಮುಸ್ಲಿಮರಲ್ಲಿ ಹುಟ್ಟಿಕೊಂಡಿರುವ ಅಭದ್ರತೆಯನ್ನು ಬಳಸಿಕೊಂಡು ಬದ್ರುದ್ದೀನ್ ಅಜ್ಮಲ್ ಎಂಬ ಅತ್ತರ್ ವ್ಯಾಪಾರಿ ಮುಸ್ಲಿಮ್ ಕೋಮುವಾದದ ಮೂಲಕವೇ ತನ್ನ ರಾಜಕೀಯ ಸಾಮ್ರಾಜ್ಯ ಕಟ್ಟಿಕೊಳ್ಳುತ್ತಿದ್ದಾರೆ.

ಈಗಿನ ಗಲಭೆಯ ಪ್ರಧಾನ ಪಾತ್ರಧಾರಿಗಳಾಗಿರುವ ಬೋಡೊಗಳನ್ನು ದೇಶದ ಮುಖ್ಯವಾಹಿನಿಯ 'ಹಿಂದು'ಗಳ ಜತೆಯಲ್ಲಿಟ್ಟು ನೋಡಲಾಗದು. ಬೋಡೊಗಳು ಬುಡಕಟ್ಟು ಸಮುದಾಯಕ್ಕೆ ಸೇರಿದವರಾದರೂ ಇವರು ಅರಣ್ಯವಾಸಿಗಳಲ್ಲ, ದೇಶದ ಬಯಲು ಪ್ರದೇಶದ ಅತ್ಯಂತ ದೊಡ್ಡ ಬುಡಕಟ್ಟು ಬೋಡೊಗಳದ್ದು. ಬ್ರಹ್ಮ ಪಂಥ ಮತ್ತು ಸಾಂಪ್ರದಾಯಿಕವಾದ ಬಥೋ ಧರ್ಮಕ್ಕೆ ಸೇರಿದ ಬೋಡೊಗಳಲ್ಲಿ ಶೇಕಡಾ ಹನ್ನೆರಡರಷ್ಟು ಕ್ರಿಶ್ಚಿಯನರೂ ಇದ್ದಾರೆ. ಕೆಲವರು ತಮ್ಮದೇ ಆಗಿರುವ ಬುಡಕಟ್ಟು ಧರ್ಮವನ್ನು ಹೊಂದಿದ್ದಾರೆ. ಹಿಂದು ಧರ್ಮದ ಮುಖ್ಯ 'ಗುರುತು'ಗಳಾದ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆ ಸಹ ಬೋಡೊಗಳಲ್ಲಿ ಇಲ್ಲ.

ಈ ಬೋಡೊಗಳು ಮೊದಲು ಯುದ್ಧ ಸಾರಿದ್ದು ವಲಸಿಗರು ಇಲ್ಲವೇ ಬಂಗಾಳಿ ಮುಸ್ಲಿಮರ ವಿರುದ್ಧ ಅಲ್ಲ, ಅದು ಅಸ್ಸಾಮಿಗಳ ವಿರುದ್ಧ. ಭೂಮಿ, ಉದ್ಯೋಗ, ಭಾಷೆ, ಸಂಸ್ಕೃತಿ ಮತ್ತು ರಾಜಕೀಯದ ಮೇಲೆ ಪ್ರಭುತ್ವ ಸಾಧಿಸಿರುವ ಅಸ್ಸಾಮಿಗಳನ್ನು ತಮ್ಮ ಮೊದಲ ಶತ್ರುಗಳೆಂದು ಬೋಡೊಗಳು ತಿಳಿದಿದ್ದರು. 'ವಸಾಹತುಷಾಹಿ ನೀತಿಯನ್ನು ಅನುಸರಿಸುತ್ತಿರುವ ಅಸ್ಸಾಮಿಗಳು ಬುಡಕಟ್ಟು ಸಮುದಾಯಕ್ಕೆ ಸೇರಿರುವ ಭೂಭಾಗವನ್ನು ಕಬಳಿಸಿ ಅವರನ್ನು ಗುಲಾಮರನ್ನಾಗಿ ಮಾಡಲು ಹೊರಟಿದ್ದಾರೆ. ಬೋಡೊಗಳು ಪ್ರತ್ಯೇಕ ರಾಜ್ಯ ಕೇಳುತ್ತಿರುವ ಒಂದೇ ಕಾರಣಕ್ಕಾಗಿ ಅಸ್ಸಾಮಿ ಜನ ಮತ್ತು ಅಸ್ಸಾಮಿ ಸರ್ಕಾರ ಬೋಡೊಗಳನ್ನು ತಮ್ಮ ಮೊದಲ ಶತ್ರು ಎಂದು ತಿಳಿದುಕೊಂಡಿದೆ..ಎಂದು ೧೯೮೭ರಲ್ಲಿ ಅಖಿಲ ಬೋಡೊ ವಿದ್ಯಾರ್ಥಿ ಸಂಘ (ಎಬಿಎಸ್‌ಯು) ಕೇಂದ್ರಸರ್ಕಾರಕ್ಕೆ ಸಲ್ಲಿಸಿರುವ ಮನವಿ ಪತ್ರದಲ್ಲಿ

ಹೇಳಿದೆ. ಬೋಡೊಗಳು ಮಾತ್ರವಲ್ಲ ಇತರ ಬುಡಕಟ್ಟುಗಳಾದ ಕೋಚ್ ರಾಜವಂಶಿ, ರಾಬಾ ಮೊದಲಾದ ಇತರ ಬುಡಕಟ್ಟುಗಳು ಅಸ್ಸಾಮಿ ಸರ್ವಾಧಿಕಾರವನ್ನು ವಿರೋಧಿಸುತ್ತಲೇ ಬಂದವರು. 'ಬೋಡೊ ಭಾಷೆಯನ್ನು ಮಾತನಾಡುತ್ತಿರುವ ಬೋಡೊಗಳಿಗೆ ಹೋಲಿಸಿದರೆ ಅಸ್ಸಾಮಿ ಮತ್ತು ಬಂಗಾಳಿ ಮಾತನಾಡುವ ಮುಸ್ಲಿಮರು ನಿಜವಾದ ಅರ್ಥದಲ್ಲಿ ಇಲ್ಲಿನ ಮಣ್ಣಿನ ಮಕ್ಕಳು. ಈ 'ನವ ಅಸ್ಸಾಮಿ'ಗಳನ್ನು ರಾಜ್ಯದ ಮುಖ್ಯವಾಹಿನಿಯಲ್ಲಿ ಸೇರಿಸಿಕೊಳ್ಳಬೇಕು' ಎಂಬ ಅಭಿಪ್ರಾಯವನ್ನು ಅಸ್ಸಾಮಿ ಬುದ್ದಿಜೀವಿ ವರ್ಗ ಕೂಡಾ ವ್ಯಕ್ತಪಡಿಸಿದ್ದುಂಟು. ಆದರೆ ಅಷ್ಟರಲ್ಲಿ ಕೋಮುವಾದದ ಭೂತ ಪ್ರವೇಶವಾಗಿದೆ.

ಮೊದಲು ಕಾಂಗ್ರೆಸ್ ಪಕ್ಷದ ಈಗ ಎಐಯುಡಿಎಫ್‌ನ ಪ್ರಮುಖ ಮತಬ್ಯಾಂಕ್ ಆಗಿರುವ ಮುಸ್ಲಿಮರ ರಾಜಕೀಯ ಶಕ್ತಿಯನ್ನು ಮುರಿಯಲು ಧರ್ಮದ ಹೆಸರಲ್ಲಿ ಉಳಿದವರನ್ನು ಎತ್ತಿಕಟ್ಟಿ ಅವರನ್ನು ಏಕಾಂಗಿಗಳನ್ನಾಗಿ ಮಾಡುವ ಪ್ರಯತ್ನ ಕಳೆದೆರಡು ದಶಕಗಳಿಂದ ನಡೆಯುತ್ತಿದೆ.

ಇದರಲ್ಲಿ ಅಸ್ಸಾಂ ಗಣ ಪರಿಷತ್ ಸರಣಿ ತಪ್ಪುಗಳ ಮೂಲಕ ರಾಜಕೀಯ ಹರಾಕಿರಿ ಮಾಡಿಕೊಂಡ ನಂತರ ಆ ಜಾಗವನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಪಡುತ್ತಿರುವ ಭಾರತೀಯ ಜನತಾ ಪಕ್ಷದ ಪಾತ್ರ ಕೂಡಾ ಇದೆ..

ರಾಜಕೀಯವಾಗಿ ತನಗೆ ಪ್ರಮುಖ ಸ್ಪರ್ಧಿಯಾಗಿರುವ ಮುಸ್ಲಿಮರನ್ನು ಹಣಿಯಲು ಧರ್ಮದ ಅಸ್ತ್ರವೇ ಹೆಚ್ಚು ಪರಿಣಾಮಕಾರಿ ಎಂಬುದು ಮನವರಿಕೆಯಾದ ನಂತರ ಬೋಡೊಗಳು ಕೂಡಾ ಕೋಮುವಾದದ ಭಾಷೆಯಲ್ಲಿಯೇ ಮಾತನಾಡತೊಡಗಿದ್ದಾರೆ.

ಈ ಬೆಳವಣಿಗೆಗಳ ಪರಿಣಾಮವನ್ನು ಇತ್ತೀಚಿನ ಗಲಭೆಯಲ್ಲಿಯೂ ಕಾಣಬಹುದು. ಬೋಡೊಗಳ ಜತೆಗಿನ ಹಿಂದಿನ ಎಲ್ಲ ಸಂಘರ್ಷಗಳ ಕಾಲದಲ್ಲಿ ಕೇವಲ ಬಂಗಾಳಿ ಮುಸ್ಲಿಮರು ಮಾತ್ರವಲ್ಲ ಸಂತಾಲರು, ರಾಜವಂಶಿ, ಬಂಗಾಳಿ ಹಿಂದೂಗಳು, ನೇಪಾಳಿ ಮತ್ತು ಬಿಹಾರಿಗಳ ಮೇಲೆಯೂ ಬೋಡೊ ಉಗ್ರಗಾಮಿಗಳು ದಾಳಿ ನಡೆಸಿದ್ದರು. ಆದರೆ ಬೋಡೊಗಳು ಈ ಬಾರಿ ನಿರ್ದಿಷ್ಟವಾಗಿ ಮುಸ್ಲಿಮರನ್ನೇ ಗುರಿ ಮಾಡಿದ್ದಾರೆ. ಬೋಡೊ ಪ್ರಾಂತೀಯ ಸ್ವಾಯತ್ತ ಮಂಡಳಿ (ಬಿಟಿಎಡಿ) ರಚನೆಯಾದ ನಂತರ ಬೋಡೊಗಳ ದಬ್ಬಾಳಿಕೆಯನ್ನು ವಿರೋಧಿಸಲು ಬೋಡೊ ಅಲ್ಲದ ಸಮುದಾಯಗಳು ಕಟ್ಟಿಕೊಂಡ 'ಬೋಡೊ ವಿರೋಧಿ ರಕ್ಷಣಾ ಸಮಿತಿ' ಕೂಡಾ ಈ ಬಾರಿ ಬೋಡೊ ವಿರುದ್ಧ ದನಿ ಎತ್ತಿಲ್ಲ.

ಪ್ರತ್ಯೇಕ ರಾಜ್ಯದ ಬೇಡಿಕೆ ಈಡೇರಿಕೆಯ ಹಾದಿಯಲ್ಲಿನ ಮುಳ್ಳು ಮುಸ್ಲಿಮರೆಂದು ಬೋಡೊಗಳು ತಿಳಿದುಕೊಂಡಿದ್ದಾರೆ. ಬೋಡೊಗಳ ಹೋರಾಟದ ಫಲವಾಗಿಯೇ ಬೋಡೊ ಪ್ರಾಂತೀಯ ಸ್ವಾಯತ್ತ ಮಂಡಳಿ (ಬಿಟಿಎಡಿ)ಸ್ಥಾಪನೆಯಾದರೂ ಇದರ ವ್ಯಾಪ್ತಿಯಲ್ಲಿರುವ ಬೋಡೊಗಳ ಜನಸಂಖ್ಯೆ ಕೇವಲ ಶೇಕಡಾ ೩೦ ಮಾತ್ರ.

ಇನ್ನೊಂದು ಪ್ರಮುಖ ಬುಡಕಟ್ಟು ಜನಾಂಗವಾದ ರಾಜವಂಶಿಗಳು ಶೇಕಡಾ ೧೫ರಷ್ಟಿದ್ದಾರೆ, ಅದೇ ರೀತಿ ಸಂತಾಲರು ಶೇಕಡಾ ಆರರಷ್ಟಿದ್ದಾರೆ. 'ಬೋಡೋಗಳಲ್ಲದ ಇತರರ ಜತೆ ಶೇಕಡಾ ೩೦ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿರುವ

ಮುಸ್ಲಿಮರು ಸೇರಿಕೊಂಡರೆ ತಾವು ಅಲ್ಪಸಂಖ್ಯಾತರಾಗಿ ಹೋಗಿಬಿಡಬಹುದು. ಇಂತಹ ಪರಿಸ್ಥಿತಿ ನಿರ್ಮಾಣವಾದರೆ ಪ್ರತ್ಯೇಕ ರಾಜ್ಯದ ಬೇಡಿಕೆಯೇ ಪ್ರಸ್ತುತತೆಯನ್ನು ಕಳೆದುಕೊಳ್ಳಬಹುದು ಎಂಬ ಭೀತಿ ಬೋಡೊಗಳಲ್ಲಿ ಹುಟ್ಟಿಕೊಂಡಿದೆ. ಇದಕ್ಕಾಗಿ ತಮ್ಮ ವಿರೋಧಿಗಳಾಗಿರುವ ಇತರರನ್ನು ಮುಟ್ಟಲು ಹೋಗದೆ ಹೆಚ್ಚಿನ ಸಂಖ್ಯೆಯಲ್ಲಿರುವ ಮುಸ್ಲಿಮರನ್ನೇ ಕೇಂದ್ರವಾಗಿಟ್ಟುಕೊಂಡು ಅವರು ದಾಳಿ ನಡೆಸುತ್ತಿದ್ದಾರೆ. ಈ ಬಾರಿ ಮುಸ್ಲಿಮರ ಮೇಲೆ ಹಲ್ಲೆ ನಡೆಸಿರುವುದು ಮಾತ್ರ ಅಲ್ಲ, ಅವರ ಮನೆಗಳನ್ನು ಒಳಗಿದ್ದ ದಾಖಲೆಪತ್ರಗಳ ಸಮೇತ ಸುಟ್ಟುಹಾಕಲಾಗಿದೆ. ಗಲಭೆಯ ಈ ವಿನ್ಯಾಸದಲ್ಲಿಯೇ 'ಜನಾಂಗೀಯ ಶುದ್ಧೀಕರಣ'ದ ಸಂಚನ್ನು ಕಾಣಬಹುದು' ಎನ್ನುತ್ತಾರೆ ಅಖಿಲ ಅಸ್ಸಾಂ ಅಲ್ಪಸಂಖ್ಯಾತ ವಿದ್ಯಾರ್ಥಿ ಸಂಘದ ಕಾನೂನು ಸಲಹೆಗಾರ ಮುಸ್ತಾಫ ಕದ್ದಮ್ ಹುಸೇನ್. ಇವರ ಆತಂಕ ಅತಿರೇಕತನದ್ದು ಎಂದು ಅನಿಸಿದರೂ ಇದನ್ನು ಸಾರಸಗಟಾಗಿ ತಳ್ಳಿಹಾಕಲಾಗದು.

#–#–#

ಅಸ್ಸಾಮಿಗಳೆಂದರೆ ಯಾರು? ಈ ಒಂದು ಸರಳ ಪ್ರಶ್ನೆಗೆ ಉತ್ತರ ಪಡೆಯಲು ಹಿಂಸೆ–ಅಹಿಂಸೆಗಳ ದಾರಿಯಲ್ಲಿ ಹಲವಾರು ಹೋರಾಟಗಳು ನಡೆದಿವೆ, ಸಾವಿರಾರು ಅಮಾಯಕರು ಪ್ರಾಣಕಳೆದುಕೊಂಡಿದ್ದಾರೆ, ನೂರಾರು ಕೋಟಿ ತೆರಿಗೆದಾರರ ಹಣ ವ್ಯಯವಾಗಿದೆ. ಆದರೆ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಜುಲೈನಲ್ಲಿ ೭೫ ಜನರ ಬಲಿತೆಗೆದುಕೊಂಡ ಮತ್ತು ನಾಲ್ಕು ಲಕ್ಷಕ್ಕೂ ಹೆಚ್ಚು ಮಂದಿಯನ್ನು ಬೀದಿಗೆ ತಳ್ಳಿದ ಗಲಭೆಯ ಹಿಂದೆ ಇದ್ದದ್ದು ಕೂಡಾ ಇದೇ ಪ್ರಶ್ನೆ.

ಈ ಪ್ರಶ್ನೆಗೆ ಉತ್ತರಬೇಕೆಂದು ಪಟ್ಟುಹಿಡಿದ ರಾಜ್ಯದ ವಿದ್ಯಾರ್ಥಿಗಳು 'ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ' (ಆಸು) ಕಟ್ಟಿ ಆರು ವರ್ಷಗಳ ಕಾಲ ಚಳುವಳಿ ನಡೆಸಿದ್ದರು. ಇದರಲ್ಲಿ ಸಾವಿರಕ್ಕೂ ಹೆಚ್ಚು ಚಳವಳಿಗಾರರು ಹುತಾತ್ಮರಾಗಿದ್ದರು, ಚಳವಳಿ ವಿರೋಧಿಸುತ್ತಿದ್ದಾರೆ ಎನ್ನುವ ಕಾರಣಕ್ಕಾಗಿ ನೂರಕ್ಕೂ ಹೆಚ್ಚುಮಂದಿಯನ್ನು ಚಳವಳಿಗಾರರೇ ಹತ್ಯೆ ಮಾಡಿದ್ದರು. ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ನಷ್ಟವಾಗಿತ್ತು. ಕೊನೆಗೆ ಆಗಿನ ಪ್ರಧಾನಿ ರಾಜೀವ್‌ಗಾಂಧಿ 'ಆಸು' ಜತೆಗೂಡಿ ಒಪ್ಪಂದವನ್ನು ಮಾಡಿಕೊಂಡರು. ಐತಿಹಾಸಿಕವೆಂದು ಆ ಕಾಲದಲ್ಲಿ ಬಣ್ಣಿಸಲಾಗಿದ್ದ ಅಸ್ಸಾಂ ಒಪ್ಪಂದದ ಮೂರು ಪ್ರಧಾನ ಅಂಶಗಳೆಂದರೆ ಅಸ್ಸಾಮಿಗಳೆಂದರೆ ಯಾರು ಎನ್ನುವುದನ್ನು ವ್ಯಾಖ್ಯಾನಿಸುವುದು, ೧೯೭೧ರ ಮಾರ್ಚ್ ೨೫ರ ನಂತರ ಅಕ್ರಮವಾಗಿ ಅಸ್ಸಾಂ ಪ್ರವೇಶಿಸಿದವರನ್ನು ಗುರುತಿಸಿ ಗಡಿಪಾರು ಮಾಡುವುದು ಮತ್ತು ಭಾರತ–ಬಾಂಗ್ಲಾ ಗಡಿಯನ್ನು ಭದ್ರಗೊಳಿಸುವುದು. ಇಪ್ಪತ್ತೇಳು ವರ್ಷಗಳಾದರೂ ಒಪ್ಪಂದದ ಯಾವ ಅಂಶವೂ ಜಾರಿಯಾಗಿಲ್ಲ. ಅಸ್ಸಾಮಿಗಳೆಂದರೆ ಯಾರು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿಯೇ ಇಲ್ಲ.

ಚಳವಳಿಯ ನೇತೃತ್ವ ವಹಿಸಿದ್ದ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ (ಆಸು) ಮತ್ತು ಅಸ್ಸಾಂ ಗಣಸಂಗ್ರಾಮ ಪರಿಷತ್ ವಿಲೀನಗೊಂಡು ಅಸ್ಸಾಂ ಗಣಪರಿಷತ್ (ಎಜಿಪಿ) ಎಂಬ ರಾಜಕೀಯ ಪಕ್ಷ ಕಟ್ಟಿ ಅಧಿಕಾರಕ್ಕೆ ಬಂದಿತ್ತು. ಒಪ್ಪಂದ ನಡೆದ ನಂತರದ

೨೭ ವರ್ಷಗಳಲ್ಲಿ ಎಜಿಪಿ ಎರಡು ಅವಧಿಗಳಲ್ಲಿ (೧೯೮೫–೯೦ ಮತ್ತು ೧೯೯೬–೨೦೦೧) ಅಧಿಕಾರದಲ್ಲಿತ್ತು. ಹತ್ತುವರ್ಷಗಳ ಕಾಲ ಪ್ರಫುಲ್‌ಕುಮಾರ್ ಮಹಂತ ಮುಖ್ಯಮಂತ್ರಿಗಳಾಗಿದ್ದರು. ಒಪ್ಪಂದದ ಶಿಲ್ಪಿಯಾದ ರಾಜೀವ್‌ಗಾಂಧಿಯವರೇ ೧೯೮೯ರ ವರೆಗೆ ಪ್ರಧಾನಿಯಾಗಿದ್ದರು. ಅದರ ನಂತರವೂ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತು. ಅಸ್ಸಾಂ ವಿದ್ಯಾರ್ಥಿ ಚಳವಳಿಯನ್ನು ಬೆಂಬಲಿಸಿದ್ದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಆರು ವರ್ಷಗಳ ಕಾಲ ಕೇಂದ್ರದಲ್ಲಿ ಅಧಿಕಾರದಲ್ಲಿತ್ತು.

ಈಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಅಸ್ಸಾಂ ರಾಜ್ಯದಿಂದಲೇ ರಾಜ್ಯಸಭೆಗೆ ಆಯ್ಕೆಯಾದವರು. ಹೀಗಿದ್ದರೂ ಅಸ್ಸಾಂ ಒಪ್ಪಂದದ ಯಾವ ಪ್ರಮುಖ ಅಂಶವೂ ಇಲ್ಲಿಯ ವರೆಗೆ ಜಾರಿಯಾಗಿಲ್ಲ.

'ಅಸ್ಸಾಮಿಗಳ ಸಂಸ್ಕೃತಿ, ಪರಂಪರೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆಗೆ ಸಂವಿಧಾನಾತ್ಮಕ, ಆಡಳಿತಾತ್ಮಕ ಮತ್ತು ಶಾಸಕಾಂಗ ರಕ್ಷಣೆ ನೀಡಲು ಕ್ರಮ ಕೈಗೊಳ್ಳಬೇಕು..' ಎಂದು ಅಸ್ಸಾಂ ಒಪ್ಪಂದದ ಆರನೇ ಪರಿಚ್ಛೇದ ಹೇಳುತ್ತದೆ. ಈ ಕ್ರಮಕೈಗೊಳ್ಳಬೇಕಾದರೆ ಅಸ್ಸಾಮಿಗಳೆಂದರೆ ಯಾರು ಎನ್ನುವುದನ್ನು ತೀರ್ಮಾನಿಸಬೇಕಾಗುತ್ತದೆ. ಇದು ನಿರ್ಧಾರವಾಗದೆ 'ಅಸ್ಸಾಮಿ'ಗಳಿಗೆ ಯಾವ ರಕ್ಷಣೆಯನ್ನೂ ನೀಡಲು ಸಾಧ್ಯ?

ರಾಜ್ಯ ಸರ್ಕಾರದ ಅಧಿಕೃತ ಮಾಹಿತಿ ಪ್ರಕಾರ ೧೯೮೫ರಿಂದ ೨೦೧೧ರ ವರೆಗಿನ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ನ್ಯಾಯಮಂಡಳಿಯ ಮೂಲಕ ೮೯,೮೯೧ ವಿದೇಶಿಯರನ್ನು ಗುರುತಿಸಲಾಗಿದೆ. ಇವರಲ್ಲಿ ೨,೩೨೬ ಮಂದಿಯನ್ನು ದೇಶದಿಂದ ಗಡಿಪಾರು ಮಾಡಲಾಗಿದೆ. ಅಕ್ರಮ ವಲಸಿಗರ ಬಂಧನಕ್ಕಾಗಿಯೇ ಗೋಲ್‌ಪುರ, ಸಿಲ್‌ಚಾರ್ ಮತ್ತು ಕೊಕರ್‌ಝಾರ್‌ಗಳಲ್ಲಿ ಸ್ಥಾಪಿಸಲಾಗಿದ್ದ ವಿಚಾರಣಾ ಶಿಬಿರಗಳಲ್ಲಿ ಕ್ರಮವಾಗಿ ೫೭,೧೬, ಮತ್ತು ಇಬ್ಬರು ಇದ್ದಾರೆ. ಯಾಕೆ ಹೀಗೆ ಎಂಬ ಪ್ರಶ್ನೆಗೆ ಉತ್ತರಿಸಿದ್ದ ಮುಖ್ಯಮಂತ್ರಿ ತರುಣ್ ಗೊಗೊಯ್ 'ನ್ಯಾಯಮಂಡಳಿಗಳಿಗೆ ಪ್ರಕರಣವನ್ನು ಒಪ್ಪಿಸಿದ ಕೂಡಲೇ ಅಕ್ರಮ ವಲಸಿಗರೆಲ್ಲರೂ ಓಡಿಹೋಗಿದ್ದರು' ಎಂಬ ವಿವರಣೆ ನೀಡಿದ್ದರು.

ಅಕ್ರಮ ವಲಸಿಗರನ್ನು ನ್ಯಾಯಮಂಡಳಿ ಮೂಲಕ ಗುರುತಿಸುವ ಕಾಯ್ದೆ ಪರೋಕ್ಷವಾಗಿ ವಲಸಿಗರಿಗೆ ನೆರವಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ೨೦೦೫ರಲ್ಲಿ ಸುಪ್ರೀಂಕೋರ್ಟ್ ರದ್ದುಪಡಿಸಿತ್ತು. ಅದರ ನಂತರ ಹಿಂದೆ ಇದ್ದ 'ವಿದೇಶಿಯರ ಕಾಯ್ದೆ' ಜಾರಿಯಲ್ಲಿದೆ. ಈ ಎಲ್ಲ ಕಸರತ್ತಿಗೆ ಇಪ್ಪತ್ತೇಳು ವರ್ಷಗಳಲ್ಲಿ ಖರ್ಚಾಗಿರುವ ತೆರಿಗೆ ಹಣ ಸುಮಾರು ೪೫೦ ಕೋಟಿ ರೂಪಾಯಿ. ಸಾಧನೆ?

ಎರಡೂ ದೇಶಗಳ ನಡುವಿನ ಗಡಿಯನ್ನು ಭದ್ರಗೊಳಿಸಬೇಕೆಂಬುದು ಒಪ್ಪಂದದ ಮೂರನೆ ಪ್ರಮುಖ ಅಂಶ. ಗೋಡೆ ನಿರ್ಮಾಣ, ತಂತಿಬೇಲಿ ಮತ್ತಿತರ ತಡೆನಿರ್ಮಾಣದ ಮೂಲಕ ಅಂತರರಾಷ್ಟ್ರೀಯ ಗಡಿ ಭದ್ರಗೊಳಿಸಬೇಕು. ನೆಲ ಮತ್ತು ಜಲದ ಗಡಿಯಲ್ಲಿ ಕಾವಲು ವ್ಯವಸ್ಥೆಯನ್ನು ಬಲಗೊಳಿಸಬೇಕು. ಈ ಮೂಲಕ ಅಕ್ರಮ ವಲಸೆ ನಿರ್ಬಂಧಿಸಲು ಕ್ರಮಕೈಗೊಳ್ಳಬೇಕು ಎಂದು ಒಪ್ಪಂದದ ಒಂಬತ್ತನೆ ಪರಿಚ್ಛೇದ ಹೇಳಿದೆ. ಆದರೆ ೨೭ ವರ್ಷಗಳಾದರೂ ಬಾಂಗ್ಲಾ ಜತೆಗೆ ಅಸ್ಸಾಂ ಹೊಂದಿರುವ ೨೬೭

ಕಿ.ಮೀ. ಗಡಿಯನ್ನು ಇನ್ನೂ ಪೂರ್ಣವಾಗಿ ಮುಚ್ಚಲು ಸಾಧ್ಯವಾಗಿಲ್ಲ. ೬೦ ಕಿ.ಮೀ. ಉದ್ದದ ಗಡಿಗೆ ತಂತಿಬೇಲಿಯನ್ನೇ ಹಾಕಿಲ್ಲ. ಗಡಿರಸ್ತೆಗಳು ನಿರ್ಮಾಣಗೊಂಡಿಲ್ಲ. ಆದರೆ 'ಗಡಿಭದ್ರತೆಗಾಗಿ ಮೀಸಲಿರಿಸಲಾಗಿದ್ದ ೩೪೫ ಕೋಟಿ ರೂಪಾಯಿ ಹಣದಲ್ಲಿ ೨೮೮ ಕೋಟಿ ರೂಪಾಯಿ ಖರ್ಚಾಗಿದೆ' ಎಂದು ರಾಜ್ಯಸರ್ಕಾರ ವಿಧಾನಸಭೆಯಲ್ಲಿ ತಿಳಿಸಿದೆ.

'ಪ್ರಪಂಚದ ಯಾವ ದೇಶದ ಗಡಿ ಕೂಡಾ ಹೀಗಿರಲಾರದು. ಬಾಂಗ್ಲಾದಿಂದ ಜನ ಸಲೀಸಾಗಿ ದೋಣಿಯಲ್ಲಿ ಬರುತ್ತಾರೆ. ಗಡಿ ಭದ್ರತಾ ಪಡೆಯವರ ಕೈಗೆ ಸಿಕ್ಕಿ ಬಿದ್ದರೆ ೧೦೦-೨೦೦ ರೂಪಾಯಿ ಕೊಟ್ಟು ಬಚಾವಾಗಿ ಬಿಡುತ್ತಾರೆ. ಕೇವಲ ಮೂರು ವರ್ಷಗಳ ಅವಧಿಯಲ್ಲಿ ಪಾಕಿಸ್ತಾನದ ಜತೆಗಿನ ಗಡಿಯನ್ನು ಮುಚ್ಚಿ ಹೊನಲುಬೆಳಕಿನ ವ್ಯವಸ್ಥೆ ಮಾಡಲು ಸಾಧ್ಯವಾಗುವುದಾದರೆ ಬಾಂಗ್ಲಾ ಗಡಿಯನ್ನು ಯಾಕೆ ಮುಚ್ಚಲಾಗುವುದಿಲ್ಲ. ಪಾಕಿಸ್ತಾನದಿಂದ ನುಸುಳಿ ಬರುವವರನ್ನು ಗುಂಡಿಟ್ಟು ಸಾಯಿಸ್ತಿರಾ, ಬಾಂಗ್ಲಾದಿಂದ ಬಂದವರನ್ನು ಕರೆತಂದು ಮತದಾರರನ್ನಾಗಿ ಮಾಡ್ತೀರಾ, ಇದು ಯಾವ ನ್ಯಾಯ?' ಎಂದು ಪ್ರಶ್ನಿಸುತ್ತಾರೆ ಅಖಿಲ ಬೋಡೊ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಜಿರೋನಿ ಬಸುಮತಾರಿ.

ಈ ಬಾರಿ ಗಲಭೆ ನಡೆದ ಕೂಡಲೇ ಇಲ್ಲಿಗೆ ಆಗಮಿಸಿದ್ದ ಬಿಜೆಪಿ ನಾಯಕ ಎಲ್.ಕೆ.ಅಡ್ವಾಣಿ ಅವರು 'ಗಲಭೆಗೆ ಬಾಂಗ್ಲಾದೇಶದಿಂದ ಅಕ್ರಮವಾಗಿ ಬಂದಿರುವ ಬಾಂಗ್ಲಾದೇಶಿಯರೇ ಕಾರಣ' ಎಂದು ನೇರವಾಗಿ ಆರೋಪಿಸಿದ್ದರು. 'ಆದರೆ ಎನ್‌ಡಿಎ ಸರ್ಕಾರದಲ್ಲಿ ಅಡ್ವಾಣಿಯವರೇ ಗೃಹಸಚಿವರಾಗಿದ್ದಾಗ ಅಕ್ರಮ ವಲಸಿಗರನ್ನು ತಡೆಯಲು ಯಾಕೆ ಕ್ರಮಕೈಗೊಳ್ಳಲಿಲ್ಲ. ಅಸ್ಸಾಂ ಒಪ್ಪಂದದ ಜಾರಿಗೆ ಯಾಕೆ ಪ್ರಯತ್ನಿಸಿಲ್ಲ. ಆರು ವರ್ಷಗಳ ಅವಧಿಯಲ್ಲಿ ಅಸ್ಸಾಂ ಸಮಸ್ಯೆಯ ಚರ್ಚೆಗೆ ಒಂದೇ ಒಂದು ಸಭೆಯನ್ನು ಯಾಕೆ ಕರೆದಿಲ್ಲ' ಎಂದು ಕೇಳುತ್ತಾರೆ ಅಖಿಲ ಅಸ್ಸಾಂ ಮುಸ್ಲಿಮ್ ವಿದ್ಯಾರ್ಥಿ ಸಂಘದ ಕೇಂದ್ರ ಸಮಿತಿ ಅಧ್ಯಕ್ಷ ಅಬ್ದುರ್ ರಹೀಮ್.

ಅಸ್ಸಾಂನಿಂದ ಆಯ್ಕೆಯಾಗಿರುವ ಕಾರಣಕ್ಕೋ ಏನೋ ೨೦೦೫ರಲ್ಲಿ ಪ್ರಧಾನಿ ಮನಮೋಹನ್‌ಸಿಂಗ್ ಅವರು ಅಸ್ಸಾಂ ಒಪ್ಪಂದದ ಅನುಷ್ಠಾನಕ್ಕಾಗಿಯೇ ಚರ್ಚಿಸಲು ಸಭೆ ಕರೆದಿದ್ದರು. ಅದೇ ವರ್ಷ ಇನ್ನೊಂದು ಸಭೆ ಕರೆಯುವ ಭರವಸೆಯೊಂದಿಗೆ ಆ ಸಭೆ ಕೊನೆಗೊಂಡಿತ್ತು. ಏಳು ವರ್ಷಗಳಾದರೂ ಪ್ರಧಾನಿಯವರು ಮತ್ತೆ ಸಭೆ ಕರೆದಿಲ್ಲ.

ಬಾಂಗ್ಲಾ ಜತೆಗಿನ ಗಡಿಯ ಭದ್ರತೆ ಕೇವಲ ಅಸ್ಸಾಂ ರಾಜ್ಯಕ್ಕೆ ಸಂಬಂಧಿಸಿರುವ ವಿಷಯ ಅಲ್ಲ. ಸದಾ ಅನಿಶ್ಚಿತ ರಾಜಕೀಯದ ತೊಳಲಾಟದಲ್ಲಿರುವ ಬಾಂಗ್ಲಾದೇಶ ಇತ್ತೀಚೆಗೆ ಭಯೋತ್ಪಾದನಾ ಸಂಘಟನೆಗಳ ಆಶ್ರಯತಾಣವಾಗುತ್ತಿದೆ. ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ ಐಎಸ್‌ಐ ಮತ್ತು ಭಯೋತ್ಪಾದಕ ಸಂಸ್ಥೆ 'ಹುಜಿ' ಕೂಡಾ ಬಾಂಗ್ಲಾದೇಶವನ್ನೇ ಕೇಂದ್ರವನ್ನಾಗಿ ಮಾಡಿ ಕಾರ್ಯಾಚರಣೆ ನಡೆಸುತ್ತಿರುವುದರಿಂದ ದೇಶದ ಭದ್ರತೆಯ ದೃಷ್ಟಿಯಿಂದಲೂ ಗಡಿಯನ್ನು ಭದ್ರಗೊಳಿಸುವುದು ಅಗತ್ಯವಾಗಿದೆ. ಆದರೆ ರಾಜಕೀಯ ಪಕ್ಷಗಳು ಸ್ವಂತದ ಅಜೆಂಡಾದ ದೃಷ್ಟಿಯಿಂದಲೇ ಅಕ್ರಮ ವಲಸಿಗರ ಸಮಸ್ಯೆಯನ್ನು ನೋಡುತ್ತಿರುವ ಕಾರಣ 'ಅಸ್ಸಾಮಿಗಳೆಂದರೆ ಯಾರು?' ಎನ್ನುವ ಪ್ರಶ್ನೆ

ಇನ್ನಷ್ಟು ಕಾಲ ಕೇಳಿಬರುವ ಸಾಧ್ಯತೆಗಳಿವೆ.

#–#–#

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಅಸ್ಸಾಂನಿಂದ ಮೂರು ಭಾಗಗಳು ಸಿಡಿದುಹೋಗಿ ನಾಗಲ್ಯಾಂಡ್, ಮೇಘಾಲಯ ಮತ್ತು ಅರುಣಾಚಲ ಪ್ರದೇಶಗಳೆಂಬ ಪ್ರತ್ಯೇಕ ರಾಜ್ಯಗಳಾಗಿವೆ. ಈಗ ರಾಜ್ಯದೊಳಗೆ ಬೋಡೊ ಪ್ರಾಂತೀಯ ಸ್ವಾಯತ್ತ ಜಿಲ್ಲೆಯ ಜತೆಯಲ್ಲಿ ಮಿಶಿಂಗ್, ರಾಭಾ ಮತ್ತು ತಿವಾ ಎಂಬ ಮೂರು ಬಯಲುಪ್ರದೇಶದ ಗುಡ್ಡಗಾಡು ಸಮುದಾಯಗಳಿಗಾಗಿ ಸ್ವಾಯತ್ತ ಮಂಡಳಿಗಳಿವೆ. ಬೋಡೊಗಳು ಈಗ ಪ್ರತ್ಯೇಕ ರಾಜ್ಯಕ್ಕಾಗಿ ಒತ್ತಾಯಿಸುತ್ತಿದ್ದರೆ ಇವರಿಗಿಂತ ಮೊದಲೇ ಸ್ವಾಯತ್ತ ಮಂಡಳಿಯನ್ನು ಪಡೆದಿದ್ದ ಉಳಿದ ಮೂರು ಸಮುದಾಯಗಳು 'ಪ್ರಾಂತೀಯ ಮಂಡಳಿ'ಯ ಸ್ಥಾನಮಾನ ನೀಡಬೇಕೆಂದು ಕೇಳುತ್ತಿವೆ. ಸ್ವಾಯತ್ತತೆಯ ಹೋರಾಟ ಇಲ್ಲಿಗೆ ನಿಂತಿಲ್ಲ. ಇದರಿಂದ ಸ್ಫೂರ್ತಿ ಪಡೆದು ರಾಜ್ಯದಲ್ಲಿರುವ ಇತರ ಬುಡಕಟ್ಟು ಜನಾಂಗಗಳು ಕೂಡಾ ಸ್ವಾಯತ್ತ ಮಂಡಳಿಗಾಗಿ ಬೇಡಿಕೆ ಸಲ್ಲಿಸಿವೆ. ಅಸ್ಸಾಂ ಇನ್ನೆಷ್ಟು ಹೋಳುಗಳಾಗಲಿವೆಯೋ ಗೊತ್ತಿಲ್ಲ.

ದೇಶದ ಆರು ರಾಜ್ಯಗಳಾದ ಅಸ್ಸಾಂ, ಜಮ್ಮು ಮತ್ತು ಕಾಶ್ಮೀರ, ಮೇಘಾಲಯ, ಮಿಜೋರಾಂ, ತ್ರಿಪುರ ಮತ್ತು ಪಶ್ಚಿಮಬಂಗಾಳಗಳಲ್ಲಿ ಈಗ ಸಂವಿಧಾನದ ಆರನೇ ಶೆಡ್ಯೂಲ್‌ಗೆ ಸೇರಿರುವ ಹದಿಮೂರು 'ಬುಡಕಟ್ಟು ಜನಾಂಗಗಳ ಸ್ವಾಯತ್ತ ಮಂಡಳಿ'ಗಳಿವೆ. ಸಂವಿಧಾನದ ೬ನೇ ಶೆಡ್ಯೂಲ್‌ಗೆ ಸೇರಿರುವ ಕರ್ನಾಟಕದ ಕೊಡವರು ಸೇರಿದಂತೆ ಬುಡಕಟ್ಟು ಗಂಪಿಗೆ ಸೇರಿದವರೆಂದು ಹೇಳಿಕೊಳ್ಳುತ್ತಿರುವ ದೇಶದಲ್ಲಿರುವ ಇನ್ನು ಅನೇಕ ಜನಾಂಗಗಳು ಸ್ವಾಯತ್ತ ಮಂಡಳಿ ಪಡೆಯಲು ಸಾಲಿನಲ್ಲಿ ನಿಂತಿವೆ.

ಸ್ವಾಯತ್ತ ಸ್ಥಾನಮಾನ ಸಿಕ್ಕಿದೆ. ಕೂಡಲೇ ತಮ್ಮ ಭಾಗ್ಯದ ಬಾಗಿಲು ತೆರೆಯಲಿದೆ ಎಂಬ ನಿರೀಕ್ಷೆಯಲ್ಲಿರುವ ಇವರೆಲ್ಲ ಒಮ್ಮೆ ಬೋಡೊಲ್ಯಾಂಡ್ ಪ್ರಾಂತೀಯ ಸ್ವಾಯತ್ತ ಜಿಲ್ಲೆ (ಬಿಟಿಎಡಿ)ಗೆ ಭೇಟಿ ನೀಡಬೇಕು.

'ಅಸ್ಸಾಂ ರಾಜ್ಯವನ್ನು ವಿಭಜಿಸಿ' ಎಂಬ ಘೋಷಣೆಯೊಂದಿಗೆ ಪ್ರತ್ಯೇಕ ರಾಜ್ಯದ ಹೋರಾಟವನ್ನು ಪ್ರಾರಂಭಿಸಿದ್ದ ಬೋಡೊಗಳು ೧೯೯೩ರಲ್ಲಿ ಸ್ವಾಯತ್ತ ಮಂಡಳಿಗಷ್ಟೇ ತೃಪ್ತರಾಗಬೇಕಾಯಿತು. ಪ್ರಾಂತೀಯ ಸ್ವಾಯತ್ತ ಜಿಲ್ಲೆಯ ಸ್ಥಾನಮಾನವನ್ನು ಪಡೆಯಲು ಬೋಡೊಗಳು ಮತ್ತೆ ಹತ್ತುವರ್ಷ ಕಾಯಬೇಕಾಯಿತು. ಇದರ ನಂತರ ನೆರೆಯ ಏಳೆಂಟು ಜಿಲ್ಲೆಗಳ ಒಂದಷ್ಟು ಭಾಗಗಳನ್ನು ಸೇರಿಸಿ ಕೊಕ್ರಝಾರ್, ಬಕ್ಸಾ, ಚಿರಾಂಗ್ ಮತ್ತು ಉದಲ್‌ಗುರಿ ಎಂಬ ನಾಲ್ಕು ಜಿಲ್ಲೆಗಳನ್ನು ರಚಿಸಿ 'ಬಿಟಿಎಡಿ' ಮಾಡಲಾಗಿದೆ. ಅದರ ನಂತರ ಒಂಬತ್ತು ವರ್ಷಗಳಾದರೂ ಇದರ ಗಡಿರೇಖೆಯನ್ನು ಇನ್ನೂ ಅಂತಿಮಗೊಳಿಸಿಲ್ಲ. ಬಿಟಿಎಡಿ ಸೇರಿಸಲಾಗಿರುವ ಅನೇಕ ಹಳ್ಳಿಗಳು ಹೊರಬರಲು ಪ್ರಯತ್ನ ನಡೆಸುತ್ತಲೇ ಇದೆ. ಇದರಿಂದಾಗಿ 'ಗಡಿಘರ್ಷಣೆ' ಸಾಮಾನ್ಯವಾಗಿದೆ. 'ಕೇವಲ ೩೯ ಸರ್ಕಾರಿ ಇಲಾಖೆಗಳನ್ನು ಮಾತ್ರ ಸೇರಿಸಿರುವುದರಿಂದ ಇಡೀ ಬಿಟಿಎಡಿ 'ಆಧಾ ಸರ್ಕಾರ್' ಆಗಿಹೋಗಿದೆ' ಎಂದು ಸರ್ಕಾರಿ ಅಧಿಕಾರಿಗಳೊಬ್ಬರು ಹೇಳಿದರು.

'ನಮ್ಮ ತಪ್ಪು ಏನೆಂಬುದು ಅರಿವಾಗಿದೆ. ರಾಜ್ಯ ರಚನೆಯ ಬೇಡಿಕೆಯನ್ನು ಕೈಬಿಟ್ಟು ಸ್ವಾಯತ್ತ ಮಂಡಳಿಗೆ ಒಪ್ಪಿಕೊಳ್ಳಬಾರದಿತ್ತು. ಗೃಹ ಇಲಾಖೆ ಬಿಟಿಎಡಿಯಡಿ ಇಲ್ಲದೆ ಇರುವ ಪರಿಣಾಮ ಏನೆಂಬುದು ಈಗಿನ ಗಲಭೆಯ ಸಮಯದಲ್ಲಿ ಗೊತ್ತಾಗಿದೆ. ಪೊಲೀಸರ ಎದುರಲ್ಲೇ ಬೋಡೊಗಳ ಮೇಲೆ ದಾಳಿ ನಡೆಸಲಾಗಿದೆ. ಪೊಲೀಸ್ ಅಧಿಕಾರಿಗಳು ಗುವಾಹಟಿಯಿಂದಲೇ ಆದೇಶ ಪಡೆಯುತ್ತಿರುವುದರಿಂದ ಬಿಟಿಎಡಿ ಏನೂ ಮಾಡಲಾಗದೆ ನಿಷ್ಕ್ರೀಯವಾಗಿತ್ತು. ಮುಂದಿನ ದಿನಗಳಲ್ಲಿ ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟವನ್ನು ಪ್ರಾರಂಭಿಸಲಾಗುವುದು' ಎಂದು ಅಖಿಲ ಬೋಡೊ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಜಿರೊನಿ ಬಸುಮತಾರಿ ಹೇಳುತ್ತಾರೆ.

'ಮಿಶಿಂಗ್, ರಾಭಾ ಮತ್ತು ತಿವಾ ಸ್ವಾಯತ್ತ ಮಂಡಳಿಗಳ ಸ್ಥಿತಿಯೇನು ಇದಕ್ಕಿಂತ ಭಿನ್ನವಾಗಿಲ್ಲ. ಇವುಗಳ ಗಡಿಪ್ರದೇಶವನ್ನೂ ಗುರುತಿಸಲಾಗಿಲ್ಲ, ರಾಜ್ಯ ಸರ್ಕಾರದಿಂದ ಬರುವ ಅನುದಾನ ಅಧಿಕಾರಿಗಳಿಗೆ ಸಂಬಳ ಕೊಡಲು ಸಾಕಾಗುವುದಿಲ್ಲ. ಭ್ರಷ್ಟಾಚಾರ ಇನ್ನಷ್ಟು ಹೆಚ್ಚಾಗಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಈ ಸ್ವಾಯತ್ತ ಮಂಡಳಿಗಳಿರುವ ಕಡೆಗಳಲ್ಲಿ ಪಂಚಾಯತ್ ವ್ಯವಸ್ಥೆಯೇ ಇಲ್ಲದಂತಾಗಿದೆ. ಇದರಿಂದಾಗಿ ಕೇಂದ್ರ ಸರ್ಕಾರದಿಂದ ಪಂಚಾಯತ್‌ಗಳಿಗೆ ನೇರವಾಗಿ ಬರುವ ಹಣದಿಂದ ಈ ಸ್ವಾಯತ್ತ ಮಂಡಳಿಗಳು ವಂಚಿತವಾಗಿವೆ' ಎಂದು ದೂರುತ್ತಲೇ ಹೋದರು ಬಸುಮತಾರಿ. ಇದರ ಪರಿಣಾಮ ಬಿಟಿಎಡಿಯ ಕೇಂದ್ರ ಸ್ಥಾನವಾದ ಕೊಕರ್‌ಝಾರ್‌ನಲ್ಲಿಯೇ ಕಾಣಬಹುದು. ಗುಂಡಿಬಿದ್ದ ರಸ್ತೆಗಳು, ಕಣ್ಣುಮುಚ್ಚಾಲೆ ಆಡುತ್ತಿರುವ ವಿದ್ಯುತ್, ಪಾಳು ಬಿದ್ದ ಶಾಲೆ-ಆಸ್ಪತ್ರೆಗಳು...ಅಭಿವೃದ್ಧಿಯ ಯಾವ ಕುರುಹುಗಳೂ ಇಲ್ಲಿ ಕಾಣುತ್ತಿಲ್ಲ.

ಬೋಡೊ ಪ್ರಾಂತೀಯ ಸ್ವಾಯತ್ತ ಜಿಲ್ಲೆಯ ಸ್ಥಾಪನೆಗಾಗಿ ಆಗಿನ ಕೇಂದ್ರ ಗೃಹಸಚಿವ ಎಲ್.ಕೆ.ಅಡ್ವಾಣಿ, ಮುಖ್ಯಮಂತ್ರಿ ತರುಣ್ ಗೊಗೊಯ್ ಮತ್ತು ಬೋಡೋ ಲಿಬರೇಷನ್ ಟೈಗರ್ ನಾಯಕ ಹಗ್ರಾಮಾ ಬಸುಮತಾರಿ ನಡುವೆ ಒಪ್ಪಂದ ನಡೆದಾಗಲೇ ಅಪಸ್ವರ ಕೇಳಿಬಂದಿತ್ತು.

ಇದಕ್ಕೆ ಐತಿಹಾಸಿಕ ಅಸ್ಸಾಂ ಒಪ್ಪಂದದ ವೈಫಲ್ಯ ಮಾತ್ರ ಕಾರಣ ಅಲ್ಲ, ತ್ರಿಪುರ (೧೯೮೮) ಮತ್ತು ಮಿಜೋರಾಂ ಒಪ್ಪಂದ (೧೯೮೬)ಗಳು ಕೂಡಾ ಯಶಸ್ವಿಯಾಗಿಲ್ಲ. ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಪಕ್ಷಗಳು ಈ ಒಪ್ಪಂದಗಳನ್ನು ಜಾರಿಗೆ ತರುವ ಪ್ರಯತ್ನವನ್ನೇ ಮಾಡದಿರುವುದು ಇದಕ್ಕೆ ಕಾರಣ.

ಅಸ್ಸಾಂ ಸರ್ಕಾರದ ಸಮಸ್ಯೆ ಇಲ್ಲಿಗೆ ಕೊನೆಗೊಂಡಿಲ್ಲ. ರಾಜ್ಯದಲ್ಲಿರುವ ಇತರ ೧೮-೧೯ ಬುಡಕಟ್ಟು ಜನಾಂಗಗಳು ಕೂಡಾ ಈಗ ಸ್ವಾಯತ್ತ ಮಂಡಳಿ ಬೇಕೆಂದು ಕೇಳತೊಡಗಿವೆ. ಬಿಟಿಎಡಿ ಸ್ಥಾಪನೆಗಾಗಿ ಒಪ್ಪಂದ ಮಾಡಿಕೊಂಡಾಗಲೇ ಬೋಡೊ ಅಲ್ಲದ ೧೮ ಬುಡಕಟ್ಟು ಜನಾಂಗಳನ್ನೊಳಗೊಂಡ ಸನ್ಮಿಳಿತ ಜನಗೋಷ್ಠಿ ಸಂಗ್ರಾಮ ೩೬ ಗಂಟೆಗಳ ಕಾಲ ಅಸ್ಸಾಂ ಬಂದ್‌ಗೆ ಕರೆ ನೀಡಿತ್ತು.

ಬಿಟಿಎಡಿಯಲ್ಲಿಯೇ ಶೇಕಡಾ ೧೫ರಷ್ಟು ಜನಸಂಖ್ಯೆ ಹೊಂದಿರುವ ಕೋಚ್ ರಾಜವಂಶಿಗಳು ಆ ದಿನದಿಂದಲೇ ಸ್ವಾಯತ್ತ ಮಂಡಳಿಗಾಗಿ ಒತ್ತಾಯಿಸಿ ಹೋರಾಟ ನಡೆಸುತ್ತಿದೆ.

ಮೂಲತಃ ಬೋಡೊ ಕಚಾರಿ ಗುಂಪಿಗೆ ಸೇರಿರುವ ರಾಜವಂಶಿಗಳು ಕಾಲಾನುಕ್ರಮದಲ್ಲಿ ತಮ್ಮನ್ನು ಪ್ರತ್ಯೇಕವಾಗಿ ಗುರುತಿಸಿಕೊಂಡವರು. ಹಿಂದುಳಿದ ಜಾತಿಗೆ ಸೇರಿರುವ ರಾಜವಂಶಿಗಳ ಒಂದು ಗುಂಪು ಆಗಲೇ ಉಗ್ರಗಾಮಿ ಸಂಘಟನೆಯನ್ನು ಕಟ್ಟಿಕೊಂಡು ಹಿಂಸಾಚಾರ ಶುರು ಮಾಡಿದೆ.

ಕಳೆದ ಜುಲೈನಲ್ಲಿ ನಡೆದ ಗಲಭೆಗೆ ಕಾರಣವಾದ ಮುಸ್ಲಿಮ್ ಯುವಕನ ಹತ್ಯೆಗೆ ಸಂಬಂಧಿಸಿದಂತೆ ಪೊಲೀಸರು ಬಂಧಿಸಿರುವುದು ರಾಜವಂಶಿ ಉಗ್ರಗಾಮಿ ಗುಂಪಿಗೆ ಸೇರಿರುವ ಯುವಕನನ್ನು. ಇವರ ಜತೆ ದಿಯೋರಿ, ಚುತಿಯಾ, ಸೋನೊವಾಲ್ ಕಾಚರಿ ಮೊದಲಾದ ಬುಡಕಟ್ಟು ಜನಾಂಗಗಳು ಸ್ವಾಯತ್ತ ಮಂಡಳಿಗಾಗಿ ಒತ್ತಾಯಿಸತೊಡಗಿವೆ. ತಮ್ಮ ಬೇಡಿಕೆ ಈಡೇರಿಸದಿದ್ದರೆ ಸಶಸ್ತ್ರಹೋರಾಟ ಪ್ರಾರಂಭಿಸುವುದಾಗಿ ಈ ಸಮುದಾಯಗಳ ವಿದ್ಯಾರ್ಥಿ ಸಂಘಟನೆ ಬೆದರಿಕೆ ಹಾಕುತ್ತಿವೆ. ಇವುಗಳಲ್ಲಿ ಕೆಲವು ಜನಾಂಗಗಳ ಜನಸಂಖ್ಯೆ ೩೫–೪೦ ಸಾವಿರಕ್ಕಿಂತ ಹೆಚ್ಚಿಲ್ಲ.

#–#–#

ದೇಶದಲ್ಲಿ ಎಲ್ಲಿಯೂ ಕಾಣದ ವಿದ್ಯಾರ್ಥಿ ಚಳವಳಿ ಅಸ್ಸಾಂ ರಾಜ್ಯದಲ್ಲಿ ಮಾತ್ರ ಕಳೆದ ಮೂರು ದಶಕಗಳಿಂದ ಸಕ್ರಿಯವಾಗಿದೆ. ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ (ಆಸು) ೧೯೭೯ರಲ್ಲಿ ಪ್ರಾರಂಭಿಸಿದ್ದ ಚಳವಳಿ ಇಡೀ ದೇಶದ ವಿದ್ಯಾರ್ಥಿಗಳು ಮತ್ತು ಯುವಕರಿಗೆ ಸ್ಫೂರ್ತಿಯಾಗಿತ್ತು.

ಆಗಿನ್ನೂ ೨೭ರ ಹರಯದ ಪ್ರಫುಲ್‌ಕುಮಾರ್ ಮಹಂತ ದೇಶದ ವಿದ್ಯಾರ್ಥಿ ನಾಯಕರ ಪಾಲಿನ 'ಹೀರೋ' ಆಗಿದ್ದರು. ಸಾಕಷ್ಟು ಏಳು–ಬೀಳುಗಳನ್ನು ಕಂಡ 'ಆಸು'ಬದಲಾದ ರಾಜಕೀಯ ಪರಿಸ್ಥಿತಿ ಮತ್ತು ಒಂದಷ್ಟು ಸ್ವಯಂಕೃತ ಅಪರಾಧಗಳಿಂದಾಗಿ ಸೊರಗಿ ಹೋಗಿದೆ. ವಿಶೇಷವೆಂದರೆ 'ಆಸು'ವಿನ ವೈಫಲ್ಯದಿಂದ ಈ ರಾಜ್ಯದ ವಿದ್ಯಾರ್ಥಿಗಳು ಭರವಸೆಯನ್ನು ಕಳೆದುಕೊಂಡಿಲ್ಲ. ಈಗ ಬೋಡೊ, ಮುಸ್ಲಿಂ ಮತ್ತು ಇತರ ಬುಡಕಟ್ಟು ಸಮುದಾಯಗಳ ಹೋರಾಟದ ಮುಂಚೂಣಿಯಲ್ಲಿಯೂ ಇರುವವರು ವಿದ್ಯಾರ್ಥಿಗಳು, ಯಾವ ರಾಜಕೀಯ ಪಕ್ಷವೂ ಅಲ್ಲ.

ಇತ್ತೀಚೆಗೆ ನಡೆದ ಗಲಭೆಯಲ್ಲಿ ಪರಸ್ಪರ ಎದುರು ಬಣಗಳಲ್ಲಿ ಇದ್ದದ್ದು ಅಖಿಲ ಅಸ್ಸಾಂ ಬೋಡೊ ವಿದ್ಯಾರ್ಥಿ ಸಂಘ ಮತ್ತು ಅಖಿಲ ಅಸ್ಸಾಂ ಮುಸ್ಲಿಮ್ ವಿದ್ಯಾರ್ಥಿ ಸಂಘಗಳು. ಇತರ ಬುಡಕಟ್ಟು ಜನಾಂಗಗಳು ಸ್ವಾಯತ್ತಮಂಡಳಿ ಇಲ್ಲವೇ ಪ್ರತ್ಯೇಕ ರಾಜ್ಯಕ್ಕಾಗಿ ನಡೆಸುತ್ತಿರುವ ಹೋರಾಟದ ನಾಯಕತ್ವ ವಹಿಸಿರುವವರು ವಿದ್ಯಾರ್ಥಿಗಳು.

ಬಹುತೇಕ ರಾಜಕೀಯ ಪಕ್ಷಗಳು ವಿದ್ಯಾರ್ಥಿ ಘಟಕವನ್ನು ಹೊಂದಿದ್ದರೂ ಅವುಗಳ ಪಾತ್ರ ಸೀಮಿತವಾದುದು. ನೀತಿ ರೂಪಿಸುವ ಇಲ್ಲವೆ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಈ ವಿದ್ಯಾರ್ಥಿ ಘಟಕಗಳಿಗೆ ಪಾತ್ರವೇ ಇಲ್ಲ. ಅಸ್ಸಾಂನಲ್ಲಿ ಚಳವಳಿಗಳ ನಾಯಕತ್ವ ವಹಿಸಿ ನಡೆಸುತ್ತಿರುವವರೇ ವಿದ್ಯಾರ್ಥಿಗಳು ಎನ್ನುವುದು ವಿಶೇಷ.

'ಆಸು'ವನ್ನು ಹೊರತುಪಡಿಸಿದರೆ ಬೇರೆ ರಾಜ್ಯದ ಯಾವ ವಿದ್ಯಾರ್ಥಿ

ಚಳವಳಿಗಳಿಗೂ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ರಾಜಕೀಯ ಅಧಿಕಾರ ಪಡೆಯುವ ತಾರ್ಕಿಕ ಅಂತ್ಯ ಕಾಣುವುದು ಸಾಧ್ಯವಾಗಿಲ್ಲ. ವಿದ್ಯಾರ್ಥಿ ಚಳವಳಿಗಳ ಯಶಸ್ಸಿನ ಇತ್ತೀಚಿನ ಉದಾಹರಣೆ ಮತ್ತೆ ಸಿಗುವುದು ಅಸ್ಸಾಂ ರಾಜ್ಯದಲ್ಲಿಯೇ. ಬೋಡೊ ಚಳುವಳಿಯಲ್ಲಿ ಹಲವಾರು ಸಂಘಟನೆಗಳು ಪಾಲ್ಗೊಂಡಿದ್ದರೂ ನಿರ್ಣಾಯಕ ಪಾತ್ರ ವಹಿಸಿರುವುದು ವಿದ್ಯಾರ್ಥಿಗಳು.

ಪ್ರಾಂತೀಯ ಸ್ವಾಯತ್ತ ಮಂಡಳಿಯಲ್ಲಿ 'ಬೋಡೊಲ್ಯಾಂಡ್ ಜನತಾ ಸುಧಾರಣಾ ರಂಗ' ಅಧಿಕಾರದಲ್ಲಿದ್ದರೂ ಅದರ ಮೇಲೆ ವಿದ್ಯಾರ್ಥಿ ಘಟಕದ ನಿಯಂತ್ರಣ ಸಡಿಲುಗೊಂಡಿಲ್ಲ. ಬಹುಶ: ಇಂತಹ ಯಶಸ್ಸಿನ ಕತೆಗಳೇ ಉಳಿದ ಜನಾಂಗಗಳ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಿರಬಹುದೇನೋ?

ಆದರೆ ಯಶಸ್ಸಿನ ಸ್ಫೂರ್ತಿಯಷ್ಟೇ ಅಸ್ಸಾಂ ವಿದ್ಯಾರ್ಥಿಗಳು ಸಾರ್ವಜನಿಕ ಹೋರಾಟದಲ್ಲಿ ಇಷ್ಟೊಂದು ಸಕ್ರಿಯವಾಗಿರಲು ಕಾರಣ ಇರಲಾರದು. ವಿಚಿತ್ರವೆಂದರೆ ಇಲ್ಲಿನ ಯಾವ ವಿದ್ಯಾರ್ಥಿ ಚಳವಳಿ ಕೂಡಾ ಒಂದು ನಿರ್ದಿಷ್ಟ ರಾಜಕೀಯ ಸಿದ್ಧಾಂತದಿಂದ ಪೋಷಣೆ ಪಡೆದು ನಡೆದುದಲ್ಲ. ಸೈದ್ಧಾಂತಿಕವಾದ ಕಾರಣದ ಹೊರತಾಗಿ ಬಹುಪಾಲು ವಿದ್ಯಾರ್ಥಿಗಳು ಮತ್ತು ಯುವಕರು ಬಂಡೇಳುವುದು ವೈಯಕ್ತಿಕ ಜೀವನದಲ್ಲಿನ ಹತಾಶೆ ಮತ್ತು ಭವಿಷ್ಯದ ಬಗೆಗಿನ ನಿರಾಶೆಯಿಂದಾಗಿ. ಅಸ್ಸಾಂನ ವಿದ್ಯಾರ್ಥಿಗಳ ವಿಷಯದಲ್ಲಿಯೂ ಈ ಸತ್ಯವನ್ನು ನಿರಾಕರಿಸುವುದು ಸಾಧ್ಯ ಇಲ್ಲ.

ಈ ಹತಾಶೆ ಮತ್ತು ನಿರಾಶೆಗೆ ಮುಖ್ಯ ಕಾರಣ ರಾಜ್ಯದಲ್ಲಿ ತಾಂಡವವಾಡುತ್ತಿರುವ ನಿರುದ್ಯೋಗದ ಭೂತ. ವಿದ್ಯಾರ್ಥಿಗಳನ್ನು ಹೋರಾಟದ ಹಾದಿಗೆ ನೂಕುತ್ತಿರುವುದು ಮಾತ್ರ ಅಲ್ಲ ದೆಹಲಿ, ಬೆಂಗಳೂರು, ಮುಂಬೈ, ಹೈದರಾಬಾದ್ ಕಡೆ ಓಡಿಸುತ್ತಿರುವುದು ಕೂಡ ಈ ನಿರುದ್ಯೋಗ. ೨೦೦೦-೦೧ರ ಅವಧಿಯಲ್ಲಿ ದೇಶದಲ್ಲಿನ ನಿರುದ್ಯೋಗದ ಪ್ರಮಾಣ ಶೇಕಡಾ ೨.೩ರಷ್ಟು ಹೆಚ್ಚಾಗಿದ್ದರೆ ಅಸ್ಸಾಂನಲ್ಲಿ ಈ ಪ್ರಮಾಣ ಸರಿಯಾಗಿ ದುಪ್ಪಟ್ಟಾಗಿದೆ. (ಶೇ ೪.೬). ಸರ್ಕಾರದ ಅಧಿಕೃತ ಮಾಹಿತಿ ಪ್ರಕಾರ ೨೦೦೧ರ ಅಂತ್ಯಕ್ಕೆ ಈ ರಾಜ್ಯದಲ್ಲಿದ್ದ ನಿರುದ್ಯೋಗಿಗಳ ಒಟ್ಟು ಸಂಖ್ಯೆ ೧೩,೫೩,೪೮೧. ಇವರಲ್ಲಿ ಮೂರುವರೆ ಲಕ್ಷ ವಿದ್ಯಾವಂತ ನಿರುದ್ಯೋಗಿಗಳು.

ಅಸ್ಸಾಂ ಪ್ರಾಕೃತಿಕ ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ರಾಜ್ಯ. ದೇಶದ ಜನ ಬಳಸುತ್ತಿರುವ ಚಹಾದ ಪುಡಿಯ ಅರ್ಧದಷ್ಟು ಪೂರೈಕೆಯಾಗುತ್ತಿರುವುದು ಇಲ್ಲಿನ ಚಹಾ ತೋಟಗಳಿಂದ. ಇದರ ಜತೆಗೆ ಕಲ್ಲಿದ್ದಲು ಮತ್ತು ತೈಲದ ನಿಕ್ಷೇಪಗಳು.

ಒಂದು ಕಾಲದಲ್ಲಿ ಇಲ್ಲಿ ಹಲವಾರು ಕಾಗದ ಮತ್ತು ಸೆಣಬು ಕಾರ್ಖಾನೆಗಳು ಕೂಡಾ ಇಲ್ಲಿದ್ದವು. ಚಹಾತೋಟಗಳನ್ನು ಹೊರತುಪಡಿಸಿದರೆ ಬೇರೆ ಯಾವ ಕ್ಷೇತ್ರವೂ ಇಲ್ಲಿ ಕಳೆದ ಮೂರು ದಶಕಗಳಿಂದ ಅಭಿವೃದ್ಧಿ ಕಂಡಿಲ್ಲ. ಇದ್ದ ಉದ್ಯಮಗಳು ಮುಚ್ಚುತ್ತಿವೆ. ಇಲ್ಲಿನ ಪ್ರಾಕೃತಿಕ ಸಂಪನ್ಮೂಲವನ್ನು ಬಳಸಿಕೊಳ್ಳುವ ಯಾವ ಹೊಸ ಉದ್ಯಮವೂ ಇತ್ತೀಚೆಗೆ ಸ್ಥಾಪನೆಗೊಂಡಿಲ್ಲ.

ಈ ಆರ್ಥಿಕ ಹಿನ್ನಡೆಗೆ ಮುಖ್ಯ ಕಾರಣ ಕಳೆದ ಮೂರು ದಶಕಗಳಿಂದ ಎದುರಿಸುತ್ತಾ ಬಂದ ಶಾಂತಿ ಮತ್ತು ಸುವ್ಯವಸ್ಥೆಯ ಸಮಸ್ಯೆ. 'ಆಸು' ನೇರವಾಗಿ

ಹಿಂಸೆಗೆ ಕರೆ ನೀಡದಿದ್ದರೂ ಆ ಚಳವಳಿಯ ಕಾಲದಲ್ಲಿ ನೂರಾರು ಹತ್ಯೆಗಳು ನಡೆದವು. ಉಲ್ಫಾ ಉಗ್ರರ ಅಟ್ಟಹಾಸದ ಕಾಲದಲ್ಲಿ 'ರಕ್ಷಣಾ ಶುಲ' ನೀಡದಿದ್ದರೆ ಚಹತೋಟದ ಮಾಲೀಕರು ಮಾತ್ರವಲ್ಲ ಯಾವ ಉದ್ಯಮಿ-ವ್ಯಾಪಾರಿಯೂ ಬದುಕುಳಿಯುವುದು ಸಾಧ್ಯ ಇರಲಿಲ್ಲ. ಹಿಂದಿನ ಪ್ರಮಾಣದಲ್ಲಿ ಇಲ್ಲದೆ ಇರಬಹುದು, ಆದರೆ ಈಗ ಸಕ್ರಿಯವಾಗಿರುವ ವಿದ್ಯಾರ್ಥಿ ಸಂಘಟನೆಗಳ ಬಗ್ಗೆಯೂ ಕೊಲೆ-ಸುಲಿಗೆಗಳ ಆರೋಪಗಳಿವೆ. ಮುಷ್ಕರ, ಪ್ರತಿಭಟನೆ ಮತ್ತು ಆಗಾಗ ನಡೆಯುವ ಭಯೋತ್ಪಾದಕ ಚಟುವಟಿಕೆಗಳಿಂದಾಗಿ ಇಲ್ಲಿನ ಆರ್ಥಿಕ ಚಟುವಟಿಕೆ ಸಂಪೂರ್ಣವಾಗಿ ಸ್ಥಬ್ದಗೊಂಡಿದೆ. ರಾಜ್ಯದ ಶೇಕಡಾ ೭೦ರಷ್ಟು ಜನ ಈಗಲೂ ಕೃಷಿಯನ್ನು ಅವಲಂಬಿಸಿದ್ದಾರೆ. ಆದರೆ ಕೃಷಿ ಕ್ಷೇತ್ರದ ಅಭಿವೃದ್ಧಿ ದರ ಶೇಕಡಾ ೧.೩ರಿಂದ ಶೇಕಡಾ ೦.೫ಕ್ಕೆ ಕುಸಿದಿದೆ. ಅಲ್ಲಿಯೂ ಹೊಸ ಉದ್ಯೋಗಗಳು ಸೃಷ್ಟಿ ಆಗುತ್ತಿಲ್ಲ. ರಾಜ್ಯದ ರಾಜಧಾನಿಯಾದ ಗುವಾಹತಿಯೇ ದೊಡ್ಡ ಕೊಳೆಗೇರಿಯಂತಿದೆ. ಮಳೆ ಬಂದರೆ ಊರು ತುಂಬಾ ಗಲೀಜು.

ವಿಮಾನನಿಲ್ದಾಣದಿಂದ ೨೦ ಕಿ.ಮೀ. ದೂರದ ನಗರಕೇಂದ್ರಕ್ಕೆ ಟ್ಯಾಕ್ಸಿಯಲ್ಲಿ ಬರಲು ನನಗೆ ಎರಡುವರೆ ಗಂಟೆ ಬೇಕಾಯಿತು. ಸಾರಿಗೆ ಬಸ್‌ಗಳು ಕಸ ಸಾಗಿಸುವ ವಾಹನಗಳಂತಿವೆ. ರಾಜಧಾನಿಯ ಪರಿಸ್ಥಿತಿಯೇ ಹೀಗಿರುವಾಗ ಉಳಿದ ಜಿಲ್ಲೆಗಳ ಪರಿಸ್ಥಿತಿ ಹೇಗಿರಬಹುದೆಂಬುದನ್ನು ಊಹಿಸಿಕೊಳ್ಳಬಹುದು. ಕೊಕರ್‌ಝಾರ್‌ನಂತಹ ಪಟ್ಟಣ ಸಂಜೆ ಏಳು ಗಂಟೆ ಹೊತ್ತಿಗೆ ನಿರ್ಜನವಾಗುತ್ತದೆ. ಸ್ಥಳೀಯರೇ ನಿರ್ಭೀತಿಯಿಂದ ಅಡ್ಡಾಡುವ ಪರಿಸ್ಥಿತಿ ಇಲ್ಲ. ಈ ಸ್ಥಿತಿಯಲ್ಲಿ ಯಾವ ಉದ್ಯಮಿ ಬಂಡವಾಳ ಹೂಡಲು ಬರಲು ಸಾಧ್ಯ? ಉದ್ಯೋಗ ಸೃಷ್ಟಿಯಾಗಲು ಹೇಗೆ ಸಾಧ್ಯ?

ಈಗಿನ ತರುಣ್ ಗೊಗೊಯ್ ಸರ್ಕಾರವೂ ಸೇರಿದಂತೆ ಕಳೆದ ೩೦ವರ್ಷಗಳಲ್ಲಿ ಅಧಿಕಾರದಲ್ಲಿದ್ದ ಯಾವ ಸರ್ಕಾರ ಕೂಡಾ ಅಭಿವೃದ್ಧಿ ಕಡೆ ಗಮನ ಹರಿಸಿಲ್ಲ. ಚಳವಳಿಗಾರರ ಜತೆ ಸಂಧಾನ ಮತ್ತು ಉಗ್ರರ ದಮನವಷ್ಟೇ ಸರ್ಕಾರಗಳ ಆದ್ಯತೆಯಾಗಿದೆ. ಚಳವಳಿಗಾರರು ಮತ್ತು ಉಗ್ರರ ಒಂದು ಗುಂಪಿನ ಜತೆ ಸರ್ಕಾರ ಮಾತುಕತೆ ನಡೆಸಿ ಸಂಧಾನದ ಮಾರ್ಗಕ್ಕೆ ಎಳೆದುತಂದರೂ ಇನ್ನೊಂದು ಅತೃಪ್ತ ಗುಂಪು ತಿರುಗಿಬೀಳುತ್ತದೆ. 'ಬೋಡೊ ಲಿಬರೇಷನ್ ಟೈಗರ್'ಗಳ ಜತೆ ಸರ್ಕಾರ ಒಪ್ಪಂದ ಮಾಡಿಕೊಂಡ ನಂತರ ಅದರ ನಾಯಕ ಹಗರಮಾ ಬಸುಮತಾರಿ ನೇತೃತ್ವದ ಉಗ್ರರು ಶಸ್ತ್ರತ್ಯಾಗ ಮಾಡಿ ಶರಣಾಗತರಾದರು. ಸಂಧಾನವನ್ನು ಒಪ್ಪದ ಬೋಡೊ ಉಗ್ರರ ಇನ್ನೊಂದು ಗುಂಪು 'ರಾಷ್ಟ್ರೀಯ ಬೋಡೊಲ್ಯಾಂಡ್ ಪ್ರಜಾಸತ್ತಾತ್ಮಕ ರಂಗ'ದ ಮೂಲಕ ಈಗಲೂ ಸಕ್ರಿಯವಾಗಿದೆ.

ಇತ್ತೀಚಿನ ಗಲಭೆಯಲ್ಲಿ ಈ ಗುಂಪಿನ ಉಗ್ರರೇ ಮುಖ್ಯಪಾತ್ರ ವಹಿಸಿದ್ದರೆನ್ನುವುದನ್ನು ಕೇಂದ್ರ ಗೃಹಸಚಿವಾಲಯ ಕೂಡಾ ಹೇಳಿದೆ. ಉಲ್ಫಾ ಚಟುವಟಿಕೆ ಕೂಡಾ ಸಂಪೂರ್ಣವಾಗಿ ನಿಂತಿಲ್ಲ. ಈ ಸಂಘಟನೆಗಳು ಈಗಲೂ ನಿರುದ್ಯೋಗಿ ಯುವಕರ 'ನೇಮಕಾತಿ' ನಡೆಸುತ್ತಲೇ ಇದೆ. ನಿರಂತರವಾಗಿ ಇಲ್ಲಿ ಉಗ್ರಗಾಮಿ ಚಟುವಟಿಕೆ ನಡೆಯುತ್ತಾ ಬಂದಿರುವ ಕಾರಣ ಅಕ್ರಮ ಶಸ್ತ್ರಾಸ್ತ್ರಗಳು ಹೇರಳವಾಗಿವೆ. ಅವುಗಳನ್ನು ವಶಪಡಿಸಿಕೊಳ್ಳುವ ಸರ್ಕಾರ ಕಟ್ಟುನಿಟ್ಟಿನ ಪ್ರಯತ್ನ

ನಡೆದಿಲ್ಲ ಎನ್ನುವುದೇ ಗಲಭೆಯಿಂದ ನೊಂದವರು ಮುಖ್ಯ ದೂರು. ಈ ರೀತಿ ಸುಲಭದಲ್ಲಿ ಶಸ್ತ್ರಾಸ್ತ್ರಗಳು ಕೈಗೆ ಸಿಕ್ಕ ನಂತರ ಸಹಜವಾಗಿಯೇ ಅದನ್ನು ಬಳಸುವ ಅಡ್ಡಮಾರ್ಗಗಳನ್ನು ಯುವಕರೇ ಕಂಡುಕೊಳ್ಳುತ್ತಾರೆ. ಈ ರೀತಿಯ ವಿಷವರ್ತುಲದಲ್ಲಿ ಅಸ್ಸಾಂ ರಾಜ್ಯವೊಂದೇ ಅಲ್ಲ ಈಶಾನ್ಯದ ಎಲ್ಲ ರಾಜ್ಯಗಳು. ಸಿಕ್ಕಿಹಾಕಿಕೊಂಡಿವೆ, ಬಿಡುಗಡೆಯ ಮಾರ್ಗ ಬಹಳ ಇಲ್ಲ.

#-#-#

ಅಸ್ಸಾಂ ಹೀಗೆ ಇರಲಿಲ್ಲ....

'ಹದಿನೇಳು ವರ್ಷಗಳ ಹಿಂದೆ ನಾನು ನೋಡಿದ್ದ ಅಸ್ಸಾಂ ಹೀಗೆ ಇರಲಿಲ್ಲ. ನೋಡಿ ನಮ್ಮ ಎದುರಿನ ಮನೆ ಬ್ರಾಹ್ಮಣರದ್ದು, ಪಕ್ಕದ ಮನೆ ಅಸ್ಸಾಮಿಗಳದ್ದು, ಆ ಕಡೆ ಮುಸ್ಲಿಮರು ಈ ಕಡೆ ಬೋಡೊಗಳು...ಒಂದೇ ಒಂದು ದಿನ ಜಾತಿ-ಧರ್ಮದ ವಿಷಯದಲ್ಲಿ ಸಣ್ಣಪುಟ್ಟ ಜಗಳಗಳೂ ಇಲ್ಲಿ ನಡೆದಿಲ್ಲ. ಇತ್ತೀಚಿನ ದಿನಗಳ ಬೆಳವಣಿಗೆ ನಮಗೂ ಆಘಾತವನ್ನುಂಟು ಮಾಡಿದೆ..' ಎಂದು ಹೇಳುತ್ತಲೇ ಹೋದರು ರಂಗಕರ್ಮಿ ಭಾಗಿರಥಿ ಕದಂ. ಅಸ್ಸಾಂ ರಂಗಭೂಮಿಯಲ್ಲಿ ಭಾಗೀರಥಿ ಮತ್ತು ಅವರ ಗಂಡ ಬಹರುಲ್ ಇಸ್ಲಾಂ ಪ್ರಸಿದ್ಧ ಹೆಸರು.

ಮೂಲತಃ ಮೈಸೂರಿನವರಾದ ಭಾಗೀರಥಿ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಲ್ಲಿದ್ದಾಗ ಸಹಪಾಠಿಯಾಗಿದ್ದ ಬಹರುಲ್ ಇಸ್ಲಾಂ ಅವರನ್ನು ಮದುವೆಯಾಗಿ 1995ರಿಂದ ಅಸ್ಸಾಂನಲ್ಲಿ ನೆಲೆಸಿದ್ದಾರೆ. ಗಂಡ-ಹೆಂಡತಿಯರಿಬ್ಬರೂ 'ಸೀಗಲ್'ಎನ್ನುವ ರೆಪರ್ಟರಿಯನ್ನು ಕಟ್ಟಿ ಅಸ್ಸಾಮಿ ಯುವಕ-ಯುವತಿಯರಿಗೆ ನಾಟಕದ ಶಾಲೆ ನಡೆಸುತ್ತಿದ್ದಾರೆ.

ಅಸ್ಸಾಮಿ,ಹಿಂದಿ,ಬಂಗಾಳಿ, ಕನ್ನಡ ಭಾಷೆಗಳ ನೂರಾರು ನಾಟಕಗಳನ್ನು ಇವರ ತಂಡ ಪ್ರದರ್ಶಿಸಿದೆ. ಭಾಗೀರಥಿ ಅವರ 'ಜಾತ್ರಾ', 'ಮಧ್ಯವರ್ತಿನಿ' ಮೊದಲಾದ ನಾಟಕಗಳು ಅಸ್ಸಾಂನಲ್ಲಿ ಬಹುಜನಪ್ರಿಯ. ಮನೆಯಲ್ಲಿಯೇ ರಂಗತರಬೇತಿ ಶಾಲೆ, ಕಿರುಸಭಾಂಗಣಗಳನ್ನು ನಿರ್ಮಿಸಿಕೊಂಡಿರುವ ಈ ದಂಪತಿಗಳು ಅಸ್ಸಾಮಿ ನಟ-ನಟಿಯರನ್ನು ಕರ್ನಾಟಕಕ್ಕೆ ಕರೆತಂದು ಅಸ್ಸಾಮಿ ನಾಟಕಗಳ ಪ್ರದರ್ಶನ ನೀಡಿದ್ದಾರೆ.

'ಶರಣಾಗತಿಯಾದ ಉಲ್ಫಾ ಉಗ್ರಗಾಮಿಗಳಿಂದ ಹಿಡಿದು ಅಸ್ಸಾಮಿ, ಬಂಗಾಳಿ, ಮುಸ್ಲಿಮ್ ಹೀಗೆ ಎಲ್ಲ ಜಾತಿ-ವರ್ಗಗಳ ಮಕ್ಕಳು ನಾಟಕ ಕಲಿಯಲು ಇಲ್ಲಿ ಬರುತ್ತಾರೆ. ಅಸ್ಸಾಂನದ್ದು ಬಹಳ ಉದಾರವಾದಿ ಸಮಾಜ. ಇಲ್ಲಿನ ಬ್ರಾಹ್ಮಣರು ಕೂಡಾ ಮಾಂಸಹಾರಿಗಳು, ಅವರ ಮದುವೆ ಸಮಾರಂಭಗಳಲ್ಲಿಯೇ ಮೀನು-ಮಾಂಸದ ಊಟ ಇರುತ್ತದೆ. ಜಾತೀಯತೆ, ಅಸ್ಪೃಶ್ಯತೆ ಇಲ್ಲವೇ ಇಲ್ಲ. ಮುಸ್ಲಿಮ್‌ನನ್ನು ಮದುವೆಯಾಗಿದ ಕೆಲವು ರಾಜಕಾರಣಿಗಳು ಸ್ವಾರ್ಥಸಾಧನೆಗಾಗಿ ಈ ಸಾಮರಸ್ಯವನ್ನು ಕದಡುವ ಪ್ರಯತ್ನ ಮಾಡುತ್ತಿರುವುದು ನೋಡಿದಾಗ ದು:ಖವಾಗುತ್ತದೆ' ಎಂದರು ಭಾಗೀರಥಿ. ಮನೆಗೆ ಕರೆದು ಉಪಚರಿಸಿದ ಈ ದಂಪತಿಗಳು ಬೀಳ್ಕೊಟ್ಟಾಗ 'ಅಸ್ಸಾಂ ಬಗ್ಗೆ ಒಳ್ಳೆಯದನ್ನೇ ಬರೆಯಿರಿ' ಎಂದು ಹೇಳಲು ಮರೆಯಲಿಲ್ಲ.

(ಸಾಭಾರ : ಪ್ರಜಾವಾಣಿ)

ಜನಪದ ಸೇವಾ ಟ್ರಸ್ಟ್ ಸಮಾಚಾರ

ಸೆಪ್ಟಂಬರ್ ೨೯-೨೦೧೨ ಟ್ರಸ್ಟಿನ ಕಾರ್ಯಕಾರಿ ಸಮಿತಿ ಸಭೆ ಶ್ರೀ ಎಚ್.ಎನ್.ರಮೇಶ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಮಂಡಿಸಿದ ಕ್ರೋಢೀಕೃತ ಲೆಕ್ಕಪತ್ರ ಮತ್ತು ಸಂಕ್ಷಿಪ್ತ ವರದಿ ಈ ಕೆಳಗಿನಂತಿದೆ. ಒಟ್ಟು ಜಮಾ ೮,೧೯,೧೪೬. ಸಂಸ್ಥೆಯ ಚಟುವಟಿಕೆಗಳಿಗೆ, ಸಿಬ್ಬಂಸಿ ಸಂಬಳ, ಪ್ರವಾಸ ಮತ್ತು ಸಾಗಾಣಿಕೆ, ಹೊಸ ಜೀವನ ದಾರಿ ಇತ್ಯಾದಿ ಖರ್ಚುಗಳಿಗೆ ೮,೧೯,೧೪೬. ಹೊಸ ಜೀವನ ದಾರಿ ವಿಭಾಗದಿಂದ ಬಂದ ಆದಾಯ ೭೧,೨೪೭. ಎತ್ತು ಖರೀದಿ, ವ್ಯವಸಾಯ ಖರ್ಚು, ವಿದ್ಯುತ್ ಶುಲ್ಕ ಇತ್ಯಾದಿ ಒಟ್ಟು ಖರ್ಚು ೭೧,೨೪೭. ಜನಪದ ವಿಚಾರಕ್ಕೆ ೫,೩೦೦ ರೂಗಳನ್ನು ಕೊಡಲಾಯಿತು. ಅದೇ ರೀತಿ ಶಿಶುವಿಹಾರಕ್ಕೆ ೧೫,೯೦೦ ರೂಗಳನ್ನು ಕೊಡಲಾಯಿತು. ಖಾದಿ ಗ್ರಾಮೋದ್ಯೋಗ ವಿಭಾಗದಲ್ಲಿ ಒಟ್ಟು ೬,೦೭,೮೯೧ ರೂಪಾಯಿಗಳಷ್ಟು ವ್ಯವಹಾರ ನಡೆದಿದೆ. ದತ್ತು ಸೇವಾ ಕೇಂದ್ರದಲ್ಲಿ ವಿವಿಧ ಮೂಲಗಳಿಂದ ೨,೩೬,೭೦೩ ರೂಪಾಯಿ ಜಮಾ ಆಯಿತು. ಮತ್ತು ವೈದ್ಯಕೀಯ ಖರ್ಚು, ಸಿಬ್ಬಂದಿ ವೇತನ ಇತ್ಯಾದಿ ಖರ್ಚುಗಳಿಗೆ ೨,೩೬,೭೦೩ ರೂಪಾಯಿ ಖರ್ಚಾಯಿತು.

ಕಾರ್ಯವರದಿ

ಈ ಸಭೆಯನ್ನು ಅನೇಕ ವೈಯುಕ್ತಿಕ ಕಾರಣಗಳಿಂದ ಈ ಮುಂಚೆ ಕರೆಯಲಾಗಲಿಲ್ಲ, ಅದಕ್ಕಾಗಿ ವಿಷಾದಿಸುತ್ತೇನೆ. ಕಳೆದ ಸಭೆಯಲ್ಲಿ ಮಾಡಿದ್ದ ಕೆಲವು ತೀರ್ಮಾನಗಳು ಕಾರ್ಯಗತಗೊಂಡಿವೆ ಮತ್ತು ಹಲವು ತೀರ್ಮಾನಗಳು ಕಾರ್ಯಗತಗೊಳಲಿಲ್ಲ. ಅದಕ್ಕಾಗಿಯೂ ನಾನು ವೈಯುಕ್ತಿಕವಾಗಿ ವಿಷಾದಿಸುತ್ತೇನೆ. ಈ ಐದು ತಿಂಗಳಲ್ಲಿ ನಡೆದ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ತಮ್ಮ ಗಮನಕ್ಕೆ ತರಲು ಈ ವರದಿಯಲ್ಲಿ ಪ್ರಯತ್ನಿಸಿದ್ದೇನೆ.

ಸುಮಾರು ೨೫ ವರ್ಷಗಳ ಹಿಂದೆ ಕರುಣಾಗೃಹದ ಉಟೋಪಚಾರಕ್ಕೆ ದಾನಿಗಳಿಂದ ದತ್ತಿ ಕೋರಿ ಸಂಗ್ರಹಿಸಿದ್ದ ನಿಧಿ. ಆದರೆ ಈಚಿನ ವರ್ಷಗಳಲ್ಲಿ ಕರುಣಾಗೃಹದ ರೂಪ ಬದಲಾಗಿ ಪ್ರತಿದಿನ ಊಟ ನೀಡುವ ಚಟುವಟಿಕೆ ಇಲ್ಲದಿರುವುದರಿಂದ ದಾನಿಗಳಿಗೆ ಬದಲಾದ ಪರಿಸ್ಥಿತಿಯ ಮಾಹಿತಿಯನ್ನು ನೀಡುವುದು ಮತ್ತು ದತ್ತು ಸೇವಾ ಕೇಂದ್ರದ ಚಟುವಟಿಕೆಯನ್ನು ಅವರಿಗೆ ತಿಳಿಸಿ ದಾನಕ್ಕಾಗಿ ಅವರಲ್ಲಿ ಮನವಿ ಮಾಡುವ ಉದ್ದೇಶದಿಂದ ಅಂತ:ಕರುಣಾ ಯೋಜನೆಯ ಎಲ್ಲ ದಾನಿಗಳಿಗೆ ಮನವಿ ಪತ್ರವನ್ನು ಬರೆಯಲಾಯಿತು. ಈಗಾಗಲೇ ಪುದುವಟ್ಟು ನೀಡಿರುವವರಿಗೆ ಪುದುವಟ್ಟನ್ನು ೧೦,೦೦೦ ರೂಗಳಿಗೆ ಹೆಚ್ಚಿಸಲು ಹಾಗೂ ವರ್ಷಕ್ಕೊಮ್ಮೆ ದಾನ ನೀಡುತ್ತಿರುವ ದಾನವನ್ನು ೧೦೦೦ ರೂಗಳಿಗೆ ಹೆಚ್ಚಿಸುವಂತೆ ಕೋರಿ ಮನವಿಯನ್ನು ಮಾಡಲಾಯಿತು. ಒಟ್ಟು ೪೧೫ ದಾನಿಗಳಿಗೆ ಪತ್ರವನ್ನು ಬರೆಯಲಾಯಿತು. ನಮ್ಮ ಮನವಿಗೆ ಅನೇಕ ದಾನಿಗಳು ಸ್ಪಂದಿಸಿದರು, ಹೀಗಾಗಿ ಅಂತ:ಕರುಣಾ ಮೂಲನಿಧಿಗೆ ರೂ ೨,೩೦,೬೦೦ ಸಂಗ್ರಹವಾಯಿತು. ವಾರ್ಷಿಕ ನೀಡುವ ದಾನಿಗಳಿಂದ ರೂ ೧೬,೩೦೦ ಸಂಗ್ರಹವಾಯಿತು. ಮೂಲ ನಿಧಿಗೆ ಬಂದಿರುವ ಹಣವನ್ನು

ಈ ತಿಂಗಳ ಅಂತ್ಯದಲ್ಲಿ ನಿಗದಿತ ಠೇವಣಿಯಲ್ಲಿ ತೊಡಗಿಸಲಾಗುವುದು. ಯೋಜನೆಗೆ ಇನ್ನೂ ನೆರವು ಬರುವ ನಿರೀಕ್ಷೆ ಇದೆ.

ಈ ಅವಧಿಯಲ್ಲಿ ದತ್ತು ಸೇವಾ ಕೇಂದ್ರಕ್ಕೆ ಎರಡು ಹೊಸ ಮಕ್ಕಳ ಸೇರ್ಪಡೆಯಾಯಿತು ಅದರಲ್ಲಿ ಒಂದು ಹೆಣ್ಣು ಮಗು ಹಾಗೂ ಇನ್ನೊಂದು ಗಂಡು ಮಗು. ಈ ಎರಡೂ ಮಕ್ಕಳನ್ನು ತಾಯಂದಿರು ತಮಗೆ ಬೇಡವೆಂದು ಒಪ್ಪಿಸಿದರು. ಗಂಡು ಮಗು ನಮ್ಮಲ್ಲಿಗೆ ಬಂದಾಗ ಬಹಳ ಅಶಕ್ತವಾಗಿದ್ದು ಮಗುವಿಗೆ ಸೆಪ್ಟಿಸೀಮಿಯಾ ಆಗಿದ್ದುದರಿಂದ ಮಗುವನ್ನು ಮೈಸೂರಿನ ಕಾಮಾಕ್ಷಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಮಗು ಸಾವು ಬದುಕಿನ ನಡುವೆ ಸೆಣಸಾಡಿ ಕಡೆಗೂ ಬದುಕಿ ಉಳಿಯುವಲ್ಲಿ ಯಶಸ್ವಿಯಾಯಿತು. ಮಗು ಆಸ್ಪತ್ರೆಯಲ್ಲಿದ್ದಾಗ ರಕ್ತದ ಅಗತ್ಯ ಬಿತ್ತು. ರಕ್ತ ಒದಗಿಸಿ ಕೊಡುವಲ್ಲಿ ಶ್ರೀ ಅಲೋಕ ಅವರು ನೆರವಾದರು. ಆಸ್ಪತ್ರೆಯ ವೆಚ್ಚವನ್ನು ಭರಿಸಲು ಬೆಂಗಳೂರಿನ ಶ್ರೀಕಾಂತ, ಶ್ರೀ ಅರುಣಕುಮಾರ ಹಾಗೂ ಮೈಸೂರಿನ ರೋಟರಿ ಪಶ್ಚಿಮ ಸಂಸ್ಥೆಯವರು ನೆರವಾದರು. ಅಲ್ಲದೆ ಕಾಮಾಕ್ಷಿ ಆಸ್ಪತ್ರೆಯವರು ಸಹ ಸ್ವಲ್ಪ ರಿಯಾಯತಿ ತೋರಿದರು. ಮಕ್ಕಳ ತಜ್ಞರಾದ ಡಾ.ಯು.ವಿ.ಶೆಣೈ ಯವರು ಮಾಮೂಲಿನಂತೆ ಕಾಳಜಿಯಿಂದ ಚಿಕಿತ್ಸೆ ನೀಡಿದರು. ಇವರೆಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ. ಆಸ್ಪತ್ರೆಯಿಂದ ಗುಣವಾಗಿ ಬಂದ ಮಗುವಿಗೆ ಪರೀಕ್ಷಿತ ಎಂದು ನಾಮಕರಣ ಮಾಡಲಾಯಿತು. ಹೆಣ್ಣು ಮಗುವಿಗೆ ಶ್ರಾವಣಿ ಎಂದು ನಾಮಕರಣ ಮಾಡಲಾಯಿತು. ಈ ಅವಧಿಯಲ್ಲಿ ದತ್ತು ಸೇವಾ ಕೇಂದ್ರದಲ್ಲಿದ್ದ ಚಿ.ಗಣೇಶ ಮತ್ತು ಚಿ.ಕೇಶವನನ್ನು ಸೂಕ್ತ ಪಾಲಕರನ್ನು ಗುರುತಿಸಿ ದತ್ತು ಪೂರ್ವ ಪೋಷಣೆಗೆ ನೀಡಲಾಯಿತು. ಈ ಅವಧಿಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಎರಡು ಬಾರಿ ಭೇಟಿ ಇತ್ತು ದತ್ತು ಸೇವಾ ಕೇಂದ್ರದ ಚಟುವಟಿಕೆಗಳನ್ನು ಮತ್ತು ಲೆಕ್ಕ ಪತ್ರಗಳನ್ನು ಪರಿಶೀಲಿಸಿದರು. ಕೇಂದ್ರದ ಚಟುವಟಿಕೆಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ಬೆಂಗಳೂರಿನಿಂದ ಇಲಾಖೆಯ ಉಪ ನಿರ್ದೇಶಕರು ಭೇಟಿ ಇತ್ತು ಚಟುವಟಿಕೆಗಳನ್ನು ಹಾಗೂ ದಾಖಲೆಗಳನ್ನು ನೋಡಿದರು. ಈ ಅವಧಿಯಲ್ಲಿ ದತ್ತು ಸೇವಾ ಕೇಂದ್ರದ ಚಟುವಟಿಕೆಗೆ ಒಟ್ಟು ೧,೭೦,೩೦೫ ರೂ ಗಳನ್ನು ವ್ಯಯಿಸಲಾಯಿತು. ಈ ವರ್ಷದ ಸರ್ಕಾರದ ಅನುದಾನ ಇನ್ನೂ ಬಿಡುಗಡೆ ಆಗಿರುವುದಿಲ್ಲ. ದತ್ತು ಸೇವಾ ಕೇಂದ್ರದ ಅನುದಾನದಲ್ಲಿ ಖಾಲಿ ಇದ್ದ ಸಾಮಾಜಿಕ ಕಾರ್ಯಕರ್ತರ ಹುದ್ದೆಗೆ ಶಿವಕುಮಾರ ಎಂಬ ಎಂ.ಎಸ್.ಡಬ್ಲು ಪದವೀಧರರನ್ನು ನಿಯುಕ್ತಿ ಮಾಡಿಕೊಳ್ಳಲಾಯಿತು.

ಈ ಅವಧಿಯಲ್ಲಿ ಖಾದಿ ಚಟುಚಟಿಕೆ ಸಂಬಂಧಿಸಿದಂತೆ ಸಾಕಷ್ಟು ಅಭಿವೃದ್ಧಿಯಾಯಿತು. ದಾರಕ್ಕೆ ಬಣ್ಣ ಹಾಕಲು ಬೇಕಾದ ಕನಿಷ್ಟ ವ್ಯವಸ್ಥೆಯನ್ನು ಮಾಡಕೊಳ್ಳಲಾಯಿತು. ಹುಬ್ಬಳ್ಳಿಯಿಂದ ಶ್ರೀ ಚಂದ್ರಶೇಖರ ಅವರು ಹಾಗೂ ಹೆಗ್ಗೋಡಿನಿಂದ ಕುಲಕರ್ಣಿ ಅವರು ಭೇಟಿ ನೀಡಿ ಬಣ್ಣ ಹಾಕುವ ವಿಷಯದ ಬಗ್ಗೆ ಮಾರ್ಗದರ್ಶನ ನೀಡಿದರು. ಮೊದಲ ಬಾರಿಗೆ ಹೆಚ್ಚಿನ ಪ್ರಮಾಣದಲ್ಲಿ ದಾರಕ್ಕೆ ಬಣ್ಣ ಹಾಕಲಾಯಿತು. ಈ ಅವಧಿಯಲ್ಲಿ ಒಟ್ಟು ೨೭೮೫ ಮೀ ಬಣ್ಣದ ಬಟ್ಟೆ, ೪೦೨ ಮೀ ಕೋರಾ ಬಟ್ಟೆ ಹಾಗೂ ೨೭೯ ಟವೆಲ್, ೪೯ ಲುಂಗಿಗಳು ತಯಾರಾದವು. ಅವುಗಳ ಒಟ್ಟು ಮೌಲ್ಯ ಅಂದಾಜು ೫ ಲಕ್ಷ ರೂಪಾಯಿಗಳು. ಇದರಲ್ಲಿ ಸುಮಾರು ೩ ಲಕ್ಷ ರೂಪಾಯಿಗಳ ಬಟ್ಟೆ ಮಾರಾಟವಾಗಿದೆ. ಈ ವಿಭಾಗದ ಜಮಾ ಖರ್ಚು ಲೆಕ್ಕವನ್ನು ಪರೀಕ್ಷಿಸಿದಲ್ಲಿ ಹಣಕಾಸಿನ ವ್ಯವಹಾರ ಹೆಚ್ಚಿರುವುದನ್ನು ಗಮನಿಸಬಹುದಾಗಿದೆ. ಬಟ್ಟೆಗಳ ವ್ಯಾಪಾರಕ್ಕೆ ಸಂಬಂಧಿಸಿದಂತೆ ಮಹತ್ವದ ಸಂಪರ್ಕ ಒಂದು ಈ ಅವಧಿಯಲ್ಲಿ ಉಂಟಾಯಿತು. ಬೆಂಗಳೂರಿನ ನೇಚರ್ ಆಲೆ ಎಂಬ ಸಂಸ್ಥೆಯು ನಮ್ಮಲ್ಲಿ ತಯಾರಾದ ಬಟ್ಟೆಗಳನ್ನು ಮಾರಾಟಮಾಡಲು ನಮ್ಮೊಂದಿಗೆ ಕೈಜೋಡಿಸಲು ಮುಂದಾದರು. ನಮ್ಮಿಂದ ಈಗಾಗಲೇ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಬಟ್ಟೆಗಳನ್ನು ಅವರು

ಖರೀದಿಸಿದ್ದಾರೆ. ಅಕ್ಟೋಬರ್ ೨ ರಿಂದ ೧೨ ರವರಗೆ ದೆಹಲಿಯಲ್ಲಿ ನ್ಯಾಷನಲ್ ಆರ್ಕೈವ್ಸ ಆಫ್ ಇಂಡಿಯಾದವರು ಏರ್ಪಡಿಸಿರುವ 'ಗಾಂಧೀಜಿ ಅಂಡ್ ಟೆಕ್ಸಟೈಲ್ ಆಫ್ ಪೀಸ್' ಪ್ರದರ್ಶನ ಮತ್ತು ಮಾರಾಟದಲ್ಲಿ ಅವರು ನಮ್ಮ ಪರವಾಗಿ ಭಾಗವಹಿಸಲಿದ್ದಾರೆ. ಈ ಚಟುವಟಿಕೆಯು ಮಾಹೆಯಿಂದ ಮಾಹೆಗೆ ವಿಸ್ತಾರಗೊಳ್ಳುತ್ತಿರುವುದರಿಂದ ದುಡಿಯುವ ಬಂಡವಾಳದ ಕೊರತೆ ಕಾಡುತ್ತಿದೆ. ಇಂದಿನ ಸ್ಥಿತಿಯಲ್ಲಿ ಸುಮಾರು ೫ ಲಕ್ಷ ರೂಪಾಯಿಗಳ ದುಡಿಯುವ ಬಂಡವಾಳದ ಅಗತ್ಯವಿದೆ. ಈ ಬಂಡವಾಳವನ್ನು ತರುವ ಬಗ್ಗೆ ದಯಮಾಡಿ ಯೋಚಿಸಿ ಬಂಡವಾಳವನ್ನು ಸಂಗ್ರಹಿಸುವ ಬಗ್ಗೆ ಮಾರ್ಗದರ್ಶನ ಮತ್ತು ಸಹಾಯ ಮಾಡಬೇಕಾಗಿ ಸದಸ್ಯರನ್ನು ವಿನಂತಿ ಮಾಡುತ್ತೇನೆ.

ದಿನಾಂಕ ೯-೫-೨೦೧೨ ರಿಂದ ೨೦-೫-೨೦೧೨ ರವರಗೆ ಪ್ರತಿವರ್ಷದಂತೆ ಈ ವರ್ಷವೂ ಬೇಸಿಗೆ ಶಿಬಿರವನ್ನು ಮೇಲುಕೋಟೆ ಮತ್ತು ಸುತ್ತಲಿನ ಗ್ರಾಮಗಳ ಮಕ್ಕಳಿಗೆ ನಡೆಸಲಾಯಿತು. ದಿನಾಂಕ ೨೦-೫-೨೦೧೨ ದಂದು ಮಕ್ಕಳು ತಾವು ಶಿಬಿರದಲ್ಲಿ ಕಲಿತದ್ದನ್ನು ಪು.ತಿ.ನ ಕಲಾ ಮಂದಿರದಲ್ಲಿ ಪ್ರದರ್ಶಿಸಿದರು. ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಜನರು ನೆರೆದು ಕಾರ್ಯಕ್ರಮವನ್ನು ವೀಕ್ಷಿಸಿದರು. ಸಂಸ್ಥೆಯ ಸದಸ್ಯರಾದ ಶ್ರೀ ಜನಾರ್ಧನ ಅವರು ಕೂಡ ಸಮಾರಂಭದಲ್ಲಿ ಭಾಗವಹಿಸಿದ್ದರು. ಶಿಬಿರದಲ್ಲಿ ಸುಮಾರು ೪೦ ಮಕ್ಕಳು ಭಾಗವಹಿಸಿದ್ದರು. ಈ ಬಾರಿಯ ಶಿಬಿರವನ್ನು ಸಂಪೂರ್ಣವಾಗಿ ಶಿಬಿರದ ಹಳೆಯ ವಿದ್ಯಾರ್ಥಿಗಳೇ ಆಯೋಜಿಸಿದ್ದು ವಿಶೇಷವಾಗಿತ್ತು.

ನಿಂತು ಹೋಗಿದ್ದ ಕಲಿಕಾ ಕೇಂದ್ರದ ಚಟುವಟಿಕೆಯನ್ನು ಎರಡು ತಿಂಗಳ ಹಿಂದೆ ಪುನಃ ಪ್ರಾರಂಭಿಸಲಾಯಿತು. ಪ್ರತಿ ಶನಿವಾರ ಮತ್ತು ಭಾನುವಾರದ ಮಧ್ಯಾಹ್ನ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ರಾಜಪ್ಪ ಎಂಬ ಕಲಾವಿದರು ಪ್ರತಿವಾರ ಚಾಮರಾಜನಗರದಿಂದ ಬಂದು ಮಕ್ಕಳಿಗೆ ಹಾಡು ನಾಟಕಗಳನ್ನು ಹೇಳಿಕೊಡುತ್ತಿದ್ದಾರೆ. ಎರಡು ವಾರದ ಹಿಂದೆ ತಾವು ಕಲಿತ ಬೀದಿ ನಾಟಕವನ್ನು ಮಕ್ಕಳು ಅಂಗಡಿ ಬೀದಿಯಲ್ಲಿ ಪ್ರದರ್ಶಿಸಿದರು. ಸುಮಾರು ೨೫ ಮಕ್ಕಳು ಕಲಿಕಾ ಕೇಂದ್ರದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ.

ಈ ಅವಧಿಯಲ್ಲಿ ಹಲವಾರು ಮಹನೀಯರು ಸಂಸ್ಥೆಗೆ ಭೇಟಿ ನೀಡಿದರು.ಅವರಲ್ಲಿ ಹೆಗ್ಗೋಡಿನ ಪ್ರಸನ್ನ, ಡಾ.ರತ್ನ, ಜಯದೇವ, ಕೃಷ್ಣರಾವ್, ತಾರಾ ಅಸ್ಲಂ, ಫ್ಯಾಬ್ ಇಂಡಿಯಾ ಸಂಸ್ಥೆಯ ಮುಖ್ಯಸ್ಥರಾದ ರಾಜೇಂದ್ರ ಮುಂತಾದವರು ಇದ್ದಾರೆ.

ಬಹಳ ವರ್ಷಗಳ ಕಾಲ ಸಂಸ್ಥೆಯಲ್ಲಿ ಆಶ್ರಯ ಪಡೆದಿದ್ದ ಅಂಗವಿಕಲ ಮಹಿಳೆ ಭಾಗೀರಥಿಯವರನ್ನು ಕಾಸರಕೋಡಿನ ಕೃಷ್ಣಧಾಮದಲ್ಲಿ ಕಳೆದ ವರ್ಷ ದಾಖಲು ಮಾಡಲಾಗಿತ್ತು. ಅವರು ೨೨.೭.೨೦೧೨ ರಂದು ನಿಧನರಾದರು. ಕೃಷ್ಣಧಾಮದಲ್ಲಿದ್ದಾ ಅವರ ನಿರ್ವಹಣೆಗಾಗಿ ಸಂಸ್ಥೆಯು ಪ್ರತಿ ಮಾಹೆ ೨೦೦೦ ರೂಗಳನ್ನು ಕೃಷ್ಣಧಾಮ ಸಂಸ್ಥೆಗೆ ಕಳುಹಿಸುತ್ತಿತ್ತು.

೨೦೧೨ ಅಕ್ಟೋಬರ್ ಮಾಹೆಯ ದಾನಿಗಳು

ಡಾ॥ಪದ್ಮ, ಶ್ರೀ ವಿ.ವಿ.ವೆಂಕಟೇಶ್,
ಶ್ರೀ ನಾಗಭೂಷಣ,
ಶ್ರೀಮತಿ ವಸಂತ ವಲ್ಲಭ,
ಶ್ರೀ ಆರ್.ಆರ್.ಆನವಟ್ಟಿ,
ಶ್ರೀ ಕೆ.ಬಿ.ನಾರಾಯಣ್, ಶ್ರೀಮತಿ ಮಾಲತಿ ಸಿದೆನೂರು – ಬೆಂಗಳೂರು
ಡಾ॥ರತ್ನಾಕರಶೆಟ್ಟಿ, ಫಿರಂಗಿಪೇಟೆ

ಜನಪದ ನಿಲಯದ ಅಂತರಂಗದಲ್ಲಿ.. ೧೦೬

– *ಸುರೇಂದ್ರ ಕೌಲಗಿ*

ದೇವರೆಂಬುದೇನು ಕಗ್ಗತ್ತಲ ಗವಿಯೆ?।
ನಾವರಿಯಲಾರದೆಲ್ಲದರೊಟ್ಟು ಹೆಸರೆ?॥
ಕಾವನೋವನಿರಲ್ಕೆ ಜಗದ ಕಥೆಯೇಕಿಂತು?।
ಸಾವು ಹುಟ್ಟುಗಳೇನು? – ಮಂಕುತಿಮ್ಮ॥



ಮೇಲುಕೋಟೆಯಲ್ಲಿ ಜನಪದ ಸೇವಾ ಟ್ರಸ್ಟ್ ಸ್ಥಾಪಿತವಾದ ದಿನದಿಂದ ನಿಕಟ ಸಂಪರ್ಕವಿರಿಸಿಕೊಂಡ ಅನೇಕ ಮಹನೀಯರು ಮೇಲುಕೋಟೆಯಲ್ಲಿ ಇದ್ದಾರೆ. ಕೆಲವರ ನಿಕಟತೆ ಕಾಲಕ್ರಮೇಣ ಆತ್ಮೀಯವಾಗಿ ಹೊರ ಹೊಮ್ಮಿತು. ಅವರು ಟ್ರಸ್ಟಿನ ಕೆಲಸಕಾರ್ಯಗಳಲ್ಲಿ ಯಥಾಶಕ್ತಿ ತಮ್ಮದೇ ಅದ ರೀತಿಯಲ್ಲಿ ಸಹಾಯ ಮಾಡುತ್ತಿದ್ದರು. ಇದಕ್ಕಿಂತಲೂ ಮುಖ್ಯವಾಗಿ ಸದಾ ಟ್ರಸ್ಟಿನ ಉನ್ನತಿಯನ್ನು ಬಯಸುತ್ತಿದ್ದರು. ಅವರೊಂದಿಗೆ ಯಾವ ತೊಂದರೆಯನ್ನೂ ಸಂಕೋಚವಿಲ್ಲದೆ ಪ್ರಸ್ತಾಪಿಸಬಹುದಾಗಿತ್ತು. ಅಂಥ ಮಹನೀಯರಲ್ಲಿ ಒಬ್ಬರು ಕಸ್ತೂರಿ ನಾರಾಯಣ ಅಯ್ಯಂಗಾರ್. ಅದ್ಯಾವ ಜನ್ಮದ ಸಂಬಂಧವೋ ಕಾಣೆ, ಅವರು ಜನಪದ ನಿಲಯದ ಮುಂದೆ ಪ್ರತಿದಿನ ಬೆಳಿಗ್ಗೆ ಬೆಟ್ಟಕ್ಕೆ ಹೋಗಲು ಪ್ರಾರಂಭ ಮಾಡಿದಾಗಿನಿಂದಲೂ ಟ್ರಸ್ಟಿನೊಂದಿಗೆ ಸ್ನೇಹ ಅಂಕುರಿಸಿತು. ಅದಕ್ಕೆ ಮುಖ್ಯ ಕಾರಣ ಅವರಲ್ಲಿದ್ದ ಸಮಾಜಮುಖಿ ಸ್ವಭಾವ. ಎಲ್ಲವನ್ನು ಸ್ನೇಹದಿಂದ ತಿಳಿಸುವುದು ಮತ್ತು ತಿಳಿಯಲು ಪ್ರಯತ್ನಿಸುವುದು ಅವರ ಸ್ವಭಾವದ ಒಂದಂಶವಾಗಿತ್ತು. ಅವರು ತಮ್ಮ ಮನೆಯಿಂದ ಶ್ರೀಯೋಗಾನರಸಿಂಹ ಸ್ವಾಮಿ ಬೆಟ್ಟಕ್ಕೆ ದಿನನಿತ್ಯದ ಕೈಂಕರ್ಯಕ್ಕಾಗಿ ನೀರು ತೆಗೆದುಕೊಂಡು ಹೋಗಲು ಹಿತ್ತಾಳೆ ಬಿಂದಿಗೆಯನ್ನು ಹೆಗಲ ಮೇಲೆ ಇರಿಸಿಕೊಂಡು ವೈದಿಕ ಜೀವನ ಪದ್ಧತಿಯಂತೆ ಶುದ್ಧರಾಗಿ ಹೊರಟರೆಂದರೆ ಅವರ ಮಾತುಗಳಿಗೆ ಆ ದಿನ ಕೊನೆಯಿಲ್ಲ ಎಂದು ಹೇಳಬಹುದು. ದಾರಿಯಲ್ಲಿ ಭೇಟಿಯಾಗುವವರೆಲ್ಲರೂ ಅವರಿಗೆ ಚಿರಪರಿಚಿತ. ದಾರಿಯಲ್ಲಿ ಹೋಗುವ ವ್ಯಕ್ತಿಗೂ ನಾರಾಯಣ ಅಯ್ಯಂಗಾರ್ ಚಿರಪರಿಚಿತ. ಚಿರಪರಿಚತರಾದ ಇಬ್ಬರು ವ್ಯಕ್ತಿಗಳ ಭೇಟಿಯಾದರೆ ಆತ್ಮೀಯ ಮಾತುಗಳು ಎಲ್ಲಿ ಇರುತ್ತವೊ ಗೊತ್ತಿಲ್ಲ, ಆದರೆ ಅವು ಜಲಪಾತದಂತೆ ನುಗ್ಗಿ ಬರುತ್ತವೆ. ಇಬ್ಬರಲ್ಲೂ ಹಸನ್ಮುಖ. ದಾರಿಯಲ್ಲಿ ಸಿಕ್ಕವ ರೈತನಾಗಿದ್ದರೆ ಅವನಿಗೇನೊ ತರಲು ಹೇಳುವುದು, ಇನ್ನು ಯಾವುದೋ ಕೆಲಸ ಜ್ಞಾಪಿಸುವುದು, ಇತ್ಯಾದಿ ನಡೆದೇ ತೀರುತ್ತದೆ. ಇನ್ನು ಬೇರೆಯವರು ಸಿಕ್ಕರೆ ಅವರೊಂದಿಗಿನ ಸಂಬಂಧಕ್ಕೆ ಅನುಸಾರವಾಗಿ ಮಾತುಗಳು ಬರುತ್ತವೆ. ಕುಣಿಗಲ್ ಬೀದಿಯಲ್ಲಿರುವ ತಮ್ಮ ಮನೆಯಿಂದ ಕೈಂಕರ್ಯಕ್ಕಾಗಿ

ಬೆಟ್ಟಕ್ಕೆ ಹೊರಟ ನಾರಾಯಣ ಅಯ್ಯಂಗಾರ್ ಕಲ್ಯಾಣಿ ಬೀದಿಯ ಪ್ರಾರಂಭದಲ್ಲಿದ್ದ ದೊಣ್ಣೆ ಬೆಟ್ಟಾಚಾರ್ಯರ ಮನೆಯ ಮೂಲೆ ತಲುಪುವ ಹೊತ್ತಿಗೆ ಅರ್ಧಗಂಟೆಗೂ ಮೀರಿ ಸಮಯ ಕಳೆದು ಇನ್ನೇನು ಸೂರ್ಯ ಸುಡಲು ಪ್ರಾರಂಭಿಸುತ್ತಿದ್ದ. ಅಷ್ಟು ಸ್ವಲ್ಪ ದೂರವನ್ನು ಕ್ರಮಿಸುವ ಹೊತ್ತಿಗೆ ಅಷ್ಟು ಜನರೊಂದಿಗೆ ಮಾತುಕತೆಯಾಗಿ ಸಮಯ ಕಳೆದಿರುತ್ತಿತ್ತು. ಆ ಸಂಧಿ ಸ್ಥಳದಲ್ಲಿ ಅವರು ನಿಂತು ಯಾರೊಂದಿಗಾದರೂ ಮಾತನಾಡುತ್ತಿದ್ದರೆ ಅವರ ಕಂಠ ಸಾಕಷ್ಟು ದೂರದಲ್ಲಿದ್ದ ಜನಪದ ನಿಲಯದವರೆಗೂ ಕೇಳಿಬರುತ್ತಿತ್ತು. ಆ ಕಂಚಿನ ಕಂಠವನ್ನು ಕೇಳಿದಾಕ್ಷಣ ನರಸಿಂಹಸ್ವಾಮಿ ಪೂಜೆಯ ಸಮಯವಾಯಿತೆಂದು ನಮಗೆಲ್ಲ ತನಾಗಿಯೇ ಗೊತ್ತಾಗುತ್ತಿತ್ತು. ನಿಲಯದ ಮುಂದೆ ಬಂದ ಅವರು ಒಂದು ಕ್ಷಣ ಮನೆ ಎದುರಿನಲ್ಲಿ ನಿಂತು 'ಕೌಲಗಿಯವರೇ' ಎಂದು ಕೂಗುತ್ತಿದ್ದದ್ದು ವಾಡಿಕೆ. ಆಗ ಮನೆಯೊಳಗಿಂದ ಹೊರಬಂದು ಅವರ ನಿಲುವನ್ನು ನೋಡುವುದೇ ಒಂದು ಸಂತೋಷ. ಅಷ್ಟೊಂದು ಎತ್ತರವಲ್ಲದ ಶರೀರ ಆದರೆ ಎತ್ತರಕ್ಕಿಂತಲೂ ಮಿಗಿಲಾದ ದಢೂತಿ ಆಕಾರ, ಸ್ವಲ್ಪ ಕಟ್ಟುಮಸ್ತಾದ ಶರೀರವೆಂದೇ ಹೇಳಬಹುದು. ಹಣೆಯ ಮೇಲೆ ರಾರಾಜಿಸುವ ತೆಂಕಲೆ ನಾಮ. ನಮ್ಮೀರ್ವರ ಆ ಭೇಟಿ ಆಯಾದಿನದ ಅವರ ಮನೋಸ್ಥಿತಿಯ ಮೇಲೆ ಅವಲಂಬಿಸಿರುತ್ತಿತ್ತು. ಸಹಜ ಸ್ಥಿತಿಯಲ್ಲಿದ್ದಾಗ ಬಹಳ ಲವಲವಿಕೆಯಿಂದ ಮತ್ತು ಸ್ನೇಹಪೂರ್ಣವಾಗಿ ಮಾತನಾಡುತ್ತಿದ್ದರು. ನನಗೂ ಕೂಡ ಅವರೊಂದಿಗೆ ಆತ್ಮೀಯ ಮತ್ತು ಟ್ರಸ್ಟಿನ ವಿಚಾರಗಳನ್ನು ಸ್ವಯಂ ಪ್ರೇರಿತನಾಗಿ ಹೇಳಬಯಸುತ್ತಿದ್ದೆ. ವಯಸ್ಸಿನಲ್ಲಿ ನಮ್ಮಿಬ್ಬರದು ಸರಿಸುಮಾರು ಒಂದೇ ಆಗಿತ್ತು. ಹೊರ ಮನಸ್ಸು ಯಾವುದಾದರೂ ಮನಸ್ಸಿನಿಂದ ಕೆಟ್ಟಿದ್ದರೆ ತಮಗೆ ಅನ್ಯಾಯ ಮಾಡಿದ ವ್ಯಕ್ತಿ ಯಾರೇ ಆಗಿರಲಿ ಅವರನ್ನು ವಾಚಾಮಗೋಚರವಾಗಿ ಬೈಯದೇ ಇರುತ್ತಿರಲಿಲ್ಲ. ಆ ಮನುಷ್ಯ ದೇವಸ್ಥಾನಕ್ಕೆ ಸಂಬಂಧಿಸಿದವನಾಗಿರಬಹುದು, ಬೆಟ್ಟದ ಮೇಲೆ ಸಹೋದ್ಯೋಗಿ ಬ್ರಾಹ್ಮಣ ಆಗಿರಬಹುದು. ಯಾವುದನ್ನು ಲೆಕ್ಕಿಸದೆ ವಾಕ್ಝರಿಯನ್ನು ಹರಿಸುತ್ತಿದ್ದರು. ಅವರ ಸೇವಾ ಕೈಂಕರ್ಯದ ವಿಷಯದಲ್ಲಿ ಅದೇ ಕೈಂಕರ್ಯ ಮಾಡಬೇಕಾಗಿದ್ದ ಕುಟುಂಬದೊಂದಿಗೆ ವಿವಾದವಿತ್ತು. ಆ ವಿವಾದ ತಹಶೀಲ್ದಾರ್ ಕಛೇರಿ, ಉಪವಿಭಾಗಾಧಿಕಾರಿ ಕಛೇರಿ, ಡಿವಿಜನಲ್ ಕೋರ್ಟ್ ಇತ್ಯಾದಿ ಎಲ್ಲ ಸ್ಥಳದಲ್ಲಿ ಕೊಳೆಯುತ್ತಿತ್ತು. ತಮಿಳುನಾಡಿನ ಪೆರಂಬೂರ್ ಬಳಿ ಇರುವ ಅಹೋಬಿಲ ಮಠದವರೆಗೂ ವಿವಾದ ಹರಡಿಕೊಂಡು ಗೋಜಲಾಗಿತ್ತು. ಈ ವಿವಾದದಿಂದ ಅವರು ಯಾವಾಗಲೂ ನೊಂದುಕೊಂಡಿರುತ್ತಿದ್ದರು. ನೊಂದುಕೊಂಡೇ ಹಾಸಿಗೆ ಹಿಡಿದರು. ಅವರು ತೀರಿಕೊಂಡರೂ ಬಹುಶಃ ಆ ವಿವಾದ ಬಗೆಹರಿದಿಲ್ಲವೇನೊ. ಈ ಜಗಳದ ಕಾರಣದಿಂದಾಗಿ ಅವರ ಮನಸ್ಸು ಆಗಾಗ್ಗೆ ವಿಚಲಿತವಾಗುತ್ತಿತ್ತು. ಆದರೂ ಸಹ ತಮ್ಮ ದೈನಂದಿನ ಶ್ರೀ ಯೊಗಾನರಸಿಂಹಸ್ವಾಮಿ ಸನ್ನಿಧಿಯಲ್ಲಿಯ ತಮ್ಮ ಸೇವೆಗೆ ಕಿಂಚಿತ್ತೂ ಲೋಪಬರದಂತೆ ನಿರ್ವಹಿಸುತ್ತಿದ್ದರು. ಅಲ್ಲಿ ಅವರ ಇರುವಿಕೆಯೇ ಅನೇಕರಿಗೆ ಮೆಟ್ಟಿಲನ್ನು ಏರಿ ಬೆಟ್ಟಕ್ಕೆ ಹೋಗಲು ಪ್ರೇರಣೆಯಾಗುತ್ತಿತ್ತು.

ಶ್ರೀ ಯೋಗಾನರಸಿಂಹಸ್ವಾಮಿ ಮೇಲುಕೋಟೆ ಮತ್ತು ಸುತ್ತಲಿನ ಮತ್ತು ದೂರದಲ್ಲಿ ಅನೇಕ ಜನರ ಮನೆದೇವರಾಗಿದ್ದಾರೆ. ಅಲ್ಲದೆ ಶ್ರೀ ಯೋಗಾನರಸಿಂಹಸ್ವಾಮಿ ತುಂಬಾ ಜಾಗೃತ ದೇವರೆಂಬ ಪ್ರತೀತಿಯ ಜೊತೆಗೆ ಹಲವರ ಸ್ವಾನುಭವವೂ ಇದೆ. ಅಂಥ ಆಯಕಟ್ಟಿನ ಸ್ಥಳದಲ್ಲಿ ಶ್ರೀ ನಾರಾಯಣ ಅಯ್ಯಂಗಾರ್ ಕೈಂಕರ್ಯ ಮಾಡುತ್ತಿದ್ದರಿಂದ ಸಹಜವಾಗಿಯೇ ಎಲ್ಲ ಬಗೆಯ ಭಕ್ತಾದಿಗಳೊಂದಿಗೆ ಅವರ ಸಂಪರ್ಕ ಉಸಿರಾಟದಂತೆ ಸಹಜವಾಗಿತ್ತು. ನರಸಿಂಹಸ್ವಾಮಿಗೆ ಅಭಿಷೇಕ ಮುಗಿದು ಅರಿಶಿನ ಸೇವೆ ಮಾಡಿದಂಥ ಸಂದರ್ಭದಲ್ಲಿ ಶ್ರೀ ನರಸಿಂಹಸ್ವಾಮಿ ಅಷ್ಟೋತ್ತರ ಹೇಳುವುದು ವಾಡಿಕೆ. ಆ ಕೆಲಸವನ್ನು ಬೇರೆ ಅರ್ಚಕರು ಮಾಡುತ್ತಿದ್ದರಾದರೂ ಅದೇಕೊ ಹೆಚ್ಚಿನ ಸಂದರ್ಭಗಳಲ್ಲಿ ಶ್ರೀ ನಾರಾಯಣ ಅಯ್ಯಂಗಾರರೇ ಅಷ್ಟೋತ್ತರ ಹೇಳುತ್ತಿದ್ದದ್ದುಂಟು. ಅರಿಶಿನ ಸೇವೆಯಿಂದಾಗಿ ಶ್ರೀ ಯೋಗಾನರಸಿಂಹಸ್ವಾಮಿ ತನ್ನ ನರಸಿಂಹಾವತಾರದಿಂದ ಉಗ್ರನಾಗಿ ಜಗತ್ತನ್ನು ನೋಡುತ್ತಿದ್ದಂತೆ ಶ್ರೀ ನಾರಾಯಣ ಅಯ್ಯಂಗಾರ್‌ರವರಿಂದ ಅಷ್ಟೋತ್ತರ ಪ್ರಾರಂಭವಾಗುತ್ತಿತ್ತು. ಗರ್ಭಗುಡಿ ಮತ್ತು ಪ್ರಾಂಗಣದ ತುಂಬಾ ಭಕ್ತ ಸಮೂಹವಿದ್ದರೂ ಘನ ಗಂಭೀರ ಮೌನ ಆವರಿಸಿರುತ್ತಿತ್ತು. ಒಂದು ಸೂಜಿ ಕೆಳಗೆ ಬಿದ್ದರೂ ಸದ್ದು ಕೇಳಿಸಬಹುದಾದಷ್ಟು ನೀರವ ಶಾಂತಿ. ಅಂಥ ರುದ್ರರಮಣೀಯ ಶಾಂತಿಯನ್ನು ಬೇಧಿಸಿ ಶ್ರೀ ನಾರಾಯಣ ಅಯ್ಯಂಗಾರ್‌ರವರ ಕಂಚಿನ ಕಂಠದಿಂದ ನರಸಿಂಹಸ್ವಾಮಿ ಅಷ್ಟೋತ್ತರ ಕೇಳುತ್ತಿದ್ದರೆ ಮೈರೋಮಾಂಚನವೆನಿಸುತ್ತಿತ್ತು. ಅಷ್ಟೋತ್ತರದಲ್ಲಿರುವ ಒಂದೊಂದು ವರ್ಣನೆಯೂ ನರಸಿಂಹಸ್ವಾಮಿಯವರಲ್ಲಿ ಜೀವವನ್ನು ಪಡೆಯುತ್ತಿರುವಂತೆ ನೆರೆದ ಭಕ್ತರಿಗೆ ಅನಿಸುತ್ತಿತ್ತು. ಕಂಠಸಿರಿ ಮತ್ತು ವೇಗ ಎರಡೂ ಸೇರಿ ಅಷ್ಟೋತ್ತರ ಮಿಂಚಿನವತಾರ ತಾಳುತ್ತಿತ್ತು. ಶ್ರೀ ನಾರಾಯಣಯ್ಯಂಗಾರ್ ಮುಖದಿಂದ ಯಾರು ಯಾರು ನರಸಿಂಹಸ್ವಾಮಿ ಅಷ್ಟೋತ್ತರ ಕೇಳಿದ್ದಾರೊ ಅವರು ನಿಜವಾಗಿಯೂ ಧನ್ಯರು. ಅವರ ಧ್ವನಿ ಅನಂತದಲ್ಲಿ ಲೀನವಾಯಿತು. ಆದರೆ ಗರ್ಭಗುಡಿ ಮಾತ್ರ ಸದಾಕಾಲ ಅವರ ಧ್ವನಿಯಿಂದ ಪ್ರತಿಧ್ವನಿಸುತ್ತಿರುತ್ತದೆ. ಅವರ ಮಕ್ಕಳಾದ ಶ್ರೀನಿವಾಸ್ ಮತ್ತು ನರಸಿಂಹ ತಂದೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತಿರುವುದು ಸಂತೋಷದ ವಿಷಯ. ಟ್ರಸ್ಟ್ ತನ್ನ ಜನಪ್ರಿಯ ಸಮಾಜ ಸೇವಾ ಚಟುವಟಿಕೆ ಕರುಣಾಗೃಹವನ್ನು ೧೯೬೩ರಲ್ಲಿ ಪ್ರಾರಂಭಿಸಿ ನಂತರ ಹೊಸ ಕಟ್ಟಡದ ರಚನೆಯಾಗಿ ಪ್ರವೇಶ ಪಡೆದಾಗ ಶ್ರೀ ನಾರಾಯಣಯ್ಯಂಗಾರ್ ಅವರೇ ಸ್ವತಃ ಶಾಸ್ತ್ರ ವಿಧಾನಗಳನ್ನು ನಡೆಸಿಕೊಟ್ಟರು. ಟ್ರಸ್ಟಿನ ಬಗ್ಗೆ ಇದ್ದ ತಮ್ಮ ಹಿತೈಷಿ ಮನೋಭಾವನೆ ಸೇರಿಸಿದ್ದರಿಂದ ಕರುಣಾಗೃಹ ಅನೇಕ ಅಂಗವಿಕಲ ಮಕ್ಕಳಿಗೆ ದಾರಿದೀಪವಾಯಿತು. ಆ ದೀಪದ ಬೆಳಕಿನಲ್ಲಿ ಟ್ರಸ್ಟಿನ ಮಟ್ಟಿಗಂತೂ ಶ್ರೀ ನಾರಾಯಣಯ್ಯಂಗಾರರ ನೆನಪು ಸದಾಕಾಲ ಬೆಳಗುತ್ತಿರುತ್ತದೆ.

(ಮುಂದುವರಿಯುವುದು...)

ಸರ್ವೋದಯ ಆಂದೋಲನದ ಮುನ್ನಡೆ

ಅಸ್ಸಾಂನಲ್ಲಿ ಶಾಂತಿಕಾರ್ಯ ಮಾಡಲು ಸ್ವಯಂಸೇವಕರಿಗಾಗಿ ಆಹ್ವಾನ

ಅಸ್ಸಾಂ ರಾಜ್ಯದ ಬೋಡ್ ಟೆರಿಟೊರಿ ಏರಿಯಾ ಡಿಸ್ಟ್ರಿಕ್ಟ್‌ನಲ್ಲಿ ಬೋಡೋ ಸಮುದಾಯ ಮತ್ತು ಮುಸ್ಲಿಂ ಸಮುದಾಯಗಳ ಮಧ್ಯೆ ಆದ ಹಿಂಸೆಯಿಂದ ನೂರಕ್ಕೂ ಹೆಚ್ಚು ಜನರು ಸತ್ತಿದ್ದಾರೆ. ಸುಮಾರು ನಾಲ್ಕು ಸಾವಿರ ಮನೆಗಳು ಸುಟ್ಟಿವೆ. ಹಾಗೂ ಸುಮಾರು ನಾಲ್ಕು ಲಕ್ಷ ಜನರು ಮನೆಹೀನರಾಗಿ ಶಿಬಿರಗಳಲ್ಲಿ ಕಷ್ಟಪೂರ್ಣ ಜೀವನ ನಡೆಸುತ್ತಿದ್ದಾರೆ. ಕೋಟಾದಲ್ಲಿ ನಡೆದ ಸರ್ವ ಸೇವಾ ಸಂಘದ ನಿರ್ಣಯದ ಅನುಸಾರ ಸುಮಾರು ೫೦ ಶಾಂತಿಯಾತ್ರಿ ಸ್ವಯಂ ಸೇವಕರನ್ನು ಕರೆದುಕೊಂಡು ಸರ್ವ ಸೇವಾ ಸಂಘ ಮತ್ತು ಅಸ್ಸಾಂ ರಾಜ್ಯದ ಸರ್ವೋದಯ ಸಂಸ್ಥೆಗಳು ಅಸ್ಸಾಂ ಕಸ್ತೂರ ಬಾ ಟ್ರಸ್ಟ್ ಮತ್ತು ಶಾಂತಿ ಸಾಧನ ಆಶ್ರಮ್ ಕೊಕ್ರಜಾರ್‌ಗೆ ಹೋಗಿ ಕಳೆದ ಸೆಪ್ಟಂಬರ್ ೧೦ ರಿಂದ ಶಾಂತಿ ಕಾರ್ಯ ಪ್ರಾರಂಭ ಮಾಡಿದೆ. ಸ್ವಯಂ ಸೇವಕರು ಮಹಾರಾಷ್ಟ್ರ, ಒರಿಸ್ಸಾ, ಪಶ್ಚಿಮ ಬಂಗಾಳ, ಅಸ್ಸಾಂ, ಗುಜರಾತ್, ಉತ್ತರ ಪ್ರದೇಶ ಮತ್ತು ಬಿಹಾರನ್ನು ಪ್ರತಿನಿಧಿಸುತ್ತಿದ್ದರು. ಗಾಂಧೀ ಶಾಂತಿ ಪ್ರತಿಷ್ಠಾನ, ರಾಷ್ಟ್ರೀಯ ಯುವ ಸಂಘಟನೆ, ಕಸ್ತೂರ ಬಾ ಟ್ರಸ್ಟ್ ಇದರಲ್ಲಿ ಸಹಯೋಗ ಕೊಟ್ಟಿದೆ. ಪ್ರಾರಂಭಿಕ ಅನುಭವ ಒಳ್ಳೆಯದಾಗುತ್ತಿದೆ. ಜನ ಸಮುದಾಯದ ಬಳಿ ಹೋಗುವುದು ಮತ್ತು ಅದಕ್ಕೆ ಸಹಾನುಭೂತಿ ತೋರಿಸುವುದರಿಂದ ಅದರ ಕೋಪಾಗ್ನಿ ಮತ್ತು ಅವಿಶ್ವಾಸದ ಭಾವ ಕಡಿಮೆಯಾಗುತ್ತಿದೆ. ಸರ್ಕಾರಿ ಅಧಿಕಾರಿಗಳು ಕೂಡ ಯಥಾ ಸಂಭವ ಸಹಕಾರ ಕೊಡುತ್ತಿದ್ದಾರೆ ಮತ್ತು ಸರ್ವೋದಯ ಮಿತ್ರರ ಶಾಂತಿಕಾರ್ಯದಿಂದ ಶ್ರೀ ಸಾಮಾನ್ಯರ ಮನಸ್ಥಿತಿ ಸಾಮಾನ್ಯಸ್ಥಿತಿಗೆ ಬರುತ್ತಿದೆ. ಎರಡೂ ಸಮುದಾಯಗಳ ನಾಯಕತ್ವದ ಜೊತೆಗೆ ಸಂಪರ್ಕವೇರ್ಪಡಿಸಲು ಪ್ರಯತ್ನ ಮಾಡಲಾಗಿದೆ. ಶಾಂತಿಕಾರ್ಯ ಇನ್ನು ಕೆಲವು ತಿಂಗಳು ನಡೆಯಬೇಕಿದೆ ಸ್ವಯಂ ಸೇವಕರ ತಂಡ ಒಂದು ತಿಂಗಳ ಅವಧಿಗಾಗಿ ಕಾರ್ಯರಥವಾಗಿದೆ. ಮೂರನೆಯ ತಂಡ ೨೦೧೨ ಅಕ್ಟೋಬರ್ ೨೦ ರಿಂದ ಮುಂದಿನ ಒಂದು ತಿಂಗಳು ಬರಬೇಕೆಂದು ನಮ್ಮ ಅಪೇಕ್ಷೆ. ಏಕೆಂದರೆ ಶಾಂತಿ, ನಿರ್ಭಯತೆ ಹಾಗೂ ಸದ್ಭಾವನೆಯನ್ನು ಸ್ಥಾಪಿಸುವ ಈ ಕಾರ್ಯ ನಿರಂತರವಾಗಿ ನಡೆಯುತ್ತಿರಬೇಕು. ಈ ಕಾರ್ಯದ ನೇತೃತ್ವವನ್ನು ಸರ್ವ ಸೇವಾ ಸಂಘದ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಶ್ರೀ ಚಂದನ್‌ಪಾಲ್ ಮಾಡುತ್ತಿದ್ದಾರೆ. ಕರ್ನಾಟಕದಿಂದಲೂ ಕನಿಷ್ಠ ಐದು ಸ್ವಯಂ ಸೇವಕರಾದರೂ ಮುಂದಿನ ಅವಧಿಗೆ ಹೋಗಬೇಕು. ಸ್ವಯಂ ಸೇವಕರು ಅನುಭವಿಗಳಾಗಿರಬೇಕು. ವಯಸ್ಸು ೩೦ ರಿಂದ ೬೦ ಇರಬೇಕು. ಅವರು ಇಡೀ ಒಂದು ತಿಂಗಳು ಇರುವ ನಿಶ್ಚಯದಿಂದ ಬರಲಿ. ಹೋಗಿ ಬರುವ ಖರ್ಚನ್ನು ಸ್ವಯಂ ಭರಿಸಬೇಕು.

ನಿಮ್ಮ ಪ್ರದೇಶದಿಂದ 'ಅಸ್ಸಾಂ ಶಾಂತಿ' ಕಾರ್ಯಕ್ಕಾಗಿ ಹಣ ಸಂಗ್ರಹಿಸಿ, ಹಣವನ್ನು ಸರ್ವ ಸೇವಾ ಸಂಘ, ಬ್ಯಾಂಕ್ ಆಫ್ ಇಂಡಿಯಾ, ವಾರ್ಧಾ, ಖಾತೆ ಸಂಖ್ಯೆ–೯೭೦೦೧೦೧೧೦೦೦೦೧೯೫೩ ಐ.ಎಫ್.ಎಸ್.ಸಿ ಕೋಡ್–ಬಿ.ಕೆ.ಐ.ಡಿ.೦೦೦೯೭೦೦ ಗೆ ಕಳುಹಿಸಬಹುದು ಅಥವಾ ಹೆಚ್ಚಿನ ವಿವರಗಳಿಗಾಗಿ ಶ್ರೀ ಸುರೇಂದ್ರ ಕೌಲಗಿ, ಅಧ್ಯಕ್ಷರು, ಕರ್ನಾಟಕ ಸರ್ವೋದಯ ಮಂಡಲ, ಮೇಲುಕೋಟೆ – ೫೭೧೪೩೧ ಮತ್ತು ದೂರವಾಣಿ: ೯೧೪೧೭೦೦೮೧೨ ನ್ನು ಸಂಪರ್ಕಿಸಿ.

ಖಾದಿ ವಿಚಾರ

ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಘ

ದರಬಾರಗಲ್ಲಿ, ವಿಜಾಪುರ - ೫೮೬೧೦೧

ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಘವು ೧೯೫೨-೫೩ರಲ್ಲಿ ಕರ್ನಾಟಕ ಖಾದಿ ಗ್ರಾಮೀಣ ಕೈಗಾರಿಕಾ ಸಂಘ ಎಂದು ನೋಂದಣಿ ಆಗಿ ಮುಂದೆ ೧೯೫೫-೫೬ರಲ್ಲಿ ಮಾಜಿ ಉಪರಾಷ್ಟ್ರಪತಿ ಬಿ.ಡಿ.ಜತ್ತಿಯವರು ಈ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿ ಹಾಗೂ ಪಿ.ಎಚ್.ಅನಂತಭಟ್ಟರು ಸಂಸ್ಥಾಪಕ ಕಾರ್ಯದರ್ಶಿಗಳಾಗಿ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಘ ಎಂದು ಪರಿವರ್ತನೆಗೊಂಡು ಇವತ್ತಿನವರೆಗೆ ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಯಗಳನ್ನು ಮಾಡುತ್ತಾ ಅನೇಕ ಕಷ್ಟ ನಷ್ಟಗಳ ಮಧ್ಯದಲ್ಲಿಯೂ ಇಂದು ಖಾದಿ ಆಯೋಗದವರ ವಿಂಗಡಣೆ ಪ್ರಕಾರ ಕರ್ನಾಟಕದಲ್ಲಿ ಅಧಿಕ 'ಎ+' ಶ್ರೇಣಿಯಲ್ಲಿ ೩ನೇ ಸಂಖ್ಯೆಯ ಸಂಸ್ಥೆಯಾಗಿ ಸತತ ೭-೮ವರ್ಷಗಳಿಂದ 'ಎ+' ಶ್ರೇಣಿಯಲ್ಲಿ ಸ್ಥಾನವನ್ನು ಉಳಿಸಿಕೊಂಡು ಪ್ರಗತಿದಾಯಕ ಸ್ಥಿತಿಯಲ್ಲಿರುವುದು ಬಹಳ ಸಂತೋಷವೆನಿಸುತ್ತದೆ.

ಸಂಸ್ಥೆಯ ಸಂಕ್ಷಿಪ್ತ ಮಾಹಿತಿ

ಸಂಸ್ಥೆಯ ಹೆಸರು ಮತ್ತು ವಿಳಾಸ :	ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಘ ದರಬಾರ ಗಲ್ಲಿ, ಕಾಸಗೇರಿ ರಸ್ತೆ ವಿಜಾಪುರ - ೫೮೬೧೦೧
ದೂರವಾಣಿ ಸಂಖ್ಯೆ :	೦೮೩೫೨-೨೫೦೦೪೬,
ನೋಂದಣಿ ದಿನಾಂಕ :	೦೯-೦೨-೧೯೫೬
ನೋಂದಣಿ ಸಂಖ್ಯೆ :	ಎಸ್/೨೭೯೭, ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್, ವಿಜಾಪುರ
ಸಂಸ್ಥಾಪಕ ಅಧ್ಯಕ್ಷರು :	ಶ್ರೀ ಬಿ.ಡಿ.ಜತ್ತಿ, ಮಾಜಿ ಉಪರಾಷ್ಟ್ರಪತಿ
ಕಾರ್ಯದರ್ಶಿ :	ಶ್ರೀ ಪಿ.ಎಚ್.ಅನಂತ ಭಟ್ಟರು
ಖಾದಿ ಆಯೋಗದ ಪ್ರಮಾಣ ಪತ್ರ ಸಂಖ್ಯೆ :	ಕೆ.ಎನ್.ಟಿ/೧೯೧
ಈಗಿನ ಅಧ್ಯಕ್ಷರು :	ಶ್ರೀ ಬಾಪೂಗೌಡ ಬಿ.ಪಾಟೀಲ (ಶೇ.ಗುಣಕಿ)
ಕಾರ್ಯದರ್ಶಿಗಳು :	ಶ್ರೀ ಎಸ್.ಜಿ.ನಾಲತವಾಡ
ವಿಂಗಡಣೆ :	ಎ+ ಕೆಟಗರಿ
ಆರ್ಥಿಕ ಸಹಾಯ :	ಖಾದಿ ಆಯೋಗ, ಮುಂಬಯಿ

೨೦೧೧-೧೨ನೇ ಸಾಲಿನಲ್ಲಿ ಉತ್ಪಾದನೆ ಹಾಗೂ ಮಾರಾಟ(ರೂ. ಲಕ್ಷಗಳಲ್ಲಿ)

೧. ಖಾದಿ ಹಾಗು ಪಾಲಿವಸ್ತ್ರ ಉತ್ಪಾದನೆ	೧೩೬.೫೮
೨. ಖಾದಿ, ರೇಷ್ಮೆ, ಪಾಲಿವಸ್ತ್ರ ಚಿಲ್ಲರೆ ಮಾರಾಟ	೧೦೩.೪೮
೩. ಠೋಕ್ ಮಾರಾಟ ಮತ್ತು ಎ.ಟಿ. ಪೂರೈಕೆ ಸಹಿತ	೧೦೪.೬೬
೪. ಸ್ಟೀಲ್ ಮತ್ತು ಕಟ್ಟಿಗೆ ಉಪಕರಣಗಳ ಉತ್ಪಾದನೆ ಹಾಗೂ ಮಾರಾಟ	೭೮.೭೭
೫. ಗ್ರಾಮೋದ್ಯೋಗ ವಸ್ತುಗಳು ಹಾಗೂ ಚಪ್ಪಲಿ ಮಾರಾಟ	೨೧.೦೦

ಸಂಘದಲ್ಲಿ ಒಟ್ಟು ೩೭೫ ನೂಲುಗಾರರು, ೧೭೦ ನೇಕಾರರು, ಗ್ರಾಮೋದ್ಯೋಗ ಸಹಿತ ಇತರೆ ಕೆಲಸಗಾರರು ೧೦೦ ಹಾಗೂ ಖಾಯಂ ಕಾರ್ಯಕರ್ತರು ೩೨ ಜನ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಮುಖ್ಯ ಗ್ರಂಥಪಾಲಕರು, ಕನ್ನಡ ವಿಶ್ವವಿದ್ಯಾನಿಲಯ – ಹಂಪಿ
ಡಾ॥ ಅರ್ಜುನಪುರಿ ಅಪ್ಪಾಜಿಗೌಡ – ಮದ್ದೂರು
ಡಾ॥ ಪ್ರಭುಶಂಕರ – ಮೈಸೂರು
ಶ್ರೀ ಕುಂದೂರು ಉಮೇಶ ಭಟ್ಟ – ಮೈಸೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಡಾ॥ ಟಿ.ಪದ್ಮ – ಬೆಂಗಳೂರು
ಶ್ರೀ ಎನ್.ಎಮ್.ಪ್ರವೀಣ್‌ಕುಮಾರ್ – ನಡಿಪಿನಾಯಕನಹಳ್ಳಿ
ಡಾ ॥ ಚಿಕ್ಕಮರಳಿ ಬೋರೇಗೌಡ – ಪಾಂಡವಪುರ
ಮಾರೇನಹಳ್ಳಿ ಲೋಕೇಶ್ – ಕೆ.ಆರ್.ಪೇಟೆ
ಶ್ರೀ ಅ.ಮ.ಶ್ಯಾಮೇಶ್ – ಕೆ.ಆರ್.ಪೇಟೆ
ಶ್ರೀ ಎಂ.ಆರ್.ಜಗದೀಶ್ – ತುಮಕೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.